# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 12 ಶುಕ್ರವಾರ 2025
46
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 234 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



## ರಾಜ್ಯ, ಕೇಂದ್ರ ಸರ್ಕಾರದ ಎಲ್ಲಾ ಕಲ್ಯಾಣ ಕಾರ್ಯಕ್ರಮ, ಯೋಜನೆಗಳ ಜಾರಿಗೆ ಇನ್ನು ಪರಿಣಾಮಕಾರಿ ಮಾರ್ಗ

# ಕುಟುಂಬ ಸಂಖ್ಯೆ


■ ರಾಜ್ಯ ಸರ್ಕಾರದಿಂದ ಮಸೂದೆ ಮಂಡನೆಗೆ ಸಿದ್ಧತೆ ■ ಸರ್ಕಾರಿ ಯೋಜನೆಗಳು, ಸಹಾಯ ಧನ, ಪ್ರಮಾಣಪತ್ರ, ಪರವಾನಗಿ, ಪರಿಹಾರ ಕಲ್ಪಿಸಲು ಸುಗಮ, ಸುರಕ್ಷಿತ ಹಾದಿ ಇದು ■ ಕುಟುಂಬದ ವೈಯಕ್ತಿಕ ಮಾಹಿತಿ ಗೌಪ್ಯತೆ ಖಾತರಿ ■ ಬರೀ ಸಂಖ್ಯೆಯನ್ನಾಧರಿಸಿ ಯೋಜನೆ ಫಲ ಲಭ್ಯತೆ

**ಬೆಳಗಾವಿ, ಡಿ.11– ರಾಜ್ಯದ ಪ್ರತಿ ಕುಟುಂಬಕ್ಕೂ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಉದ್ದೇಶದಿಂದ 'ಕುಟುಂಬ ಸಂಖ್ಯೆ' ವ್ಯವಸ್ಥೆಯನ್ನು ರೂಪಿಸಲು ಸರ್ಕಾರ ಮುಂದಾಗಿದೆ.**

ಇದರ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಮಸೂದೆ ಸಿದ್ಧಪಡಿಸಿದೆ. ಸರ್ಕಾರದ ಎಲ್ಲಾ ಕಲ್ಯಾಣ ಕಾರ್ಯಕ್ರಮ, ಯೋಜನೆಗಳನ್ನು ಈ ಸಂಖ್ಯೆ ಆಧರಿಸಿಯೇ ಫಲಾನುಭವಿಗಳಿಗೆ ತಲುಪಿಸಲಾಗುತ್ತದೆ.

'ಕರ್ನಾಟಕ ಕುಟುಂಬ (ಪ್ರವೇಶ ಮತ್ತು ನಿರ್ವಹಣೆ) ಮಸೂದೆ–2025' ಅನ್ನು ಇಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಸಿದ್ಧತೆ ನಡೆಸಿದೆ. ರಾಜ್ಯದ ಕುಟುಂಬಗಳಿಗೆ ಸರ್ಕಾರದ ಯಾವುದೇ ಕಲ್ಯಾಣ ಕಾರ್ಯಕ್ರಮ, ಸವಲತ್ತು, ಸಹಾಯಧನ, ಪ್ರಮಾಣಪತ್ರ, ಪರವಾನಗಿ, ವಿಕೋಪ ನಿರ್ವಹಣೆ ಎಲ್ಲ ರೀತಿಯ ಪರಿಹಾರಗಳನ್ನು ಈ ಕುಟುಂಬ ಸಂಖ್ಯೆಯ ಆಧಾರದಲ್ಲಿಯೇ ನೀಡುವ ಅಧಿಕಾರ ಸರ್ಕಾರಕ್ಕೆ ದತ್ತವಾಗಲಿದೆ.

ಈ ವ್ಯವಸ್ಥೆ ನಿರ್ವಹಣೆಗಾಗಿ ಸರ್ಕಾರವು 'ಕರ್ನಾಟಕ ಕುಟುಂಬ (ಪ್ರವೇಶ ಮತ್ತು ನಿರ್ವಹಣೆ) ಪ್ರಾಧಿಕಾರ' ಸ್ಥಾಪಿಸಲಿದೆ. ಪ್ರಾಧಿಕಾರವು ರೂಪಿಸಲಿರುವ 'ಕುಟುಂಬ ತಂತ್ರಾಂಶ ವ್ಯವಸ್ಥೆ'ಯ ಮೂಲಕ ರಾಜ್ಯದ ಪ್ರತಿ ಕುಟುಂಬವು ತನ್ನ ವಿವರಗಳನ್ನು ನಮೂದಿಸಿ, ಕುಟುಂಬ ಸಂಖ್ಯೆ ಪಡೆಯಬಹುದು. ಜನರು ನೀಡುವ ದತ್ತಾಂಶ ಮತ್ತು ವಿವರಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು



ಸಂಸ್ಥೆಗಳ ಬಳಿ ಇರುವ ದತ್ತಾಂಶಗಳೊಂದಿಗೆ ಹೋಲಿಸುವ ಹಾಗೂ ಮನೆ–ಮನೆಗೆ ಭೇಟಿ ನೀಡಿ, ಖಚಿತಪಡಿಸಿಕೊಳ್ಳುವ ಅಧಿಕಾರವು ಈ ಪ್ರಾಧಿಕಾರಕ್ಕೆ ಇರಲಿದೆ.

**ಸಾಮಾಜಿಕ ನೋಂದಣಿ:** ಪ್ರಾಧಿಕಾರವು ಜನರಿಂದ, ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಂದ ಸಂಗ್ರಹಿಸಿದ ದತ್ತಾಂಶಗಳನ್ನು ಬಳಸಿಕೊಂಡು ಸಾಮಾಜಿಕ ನೋಂದಣಿಯನ್ನು ಸಿದ್ಧಪಡಿಸಲಿದೆ. ರಾಜ್ಯ ಸರ್ಕಾರವು ತನ್ನ ಭಿನ್ನ ಕಾರ್ಯಕ್ರಮಕ್ಕಾಗಿ ಈ ನೋಂದಣಿಯನ್ನು ಬಳಸಿಕೊಳ್ಳಬಹುದಾಗಿದೆ. ಈ ನೋಂದಣಿಯ ದತ್ತಾಂಶಗಳನ್ನು ಪಡೆದುಕೊಳ್ಳಲು ಇತರ ಇಲಾಖೆಗಳು ಪ್ರಾಧಿಕಾರಕ್ಕೆ ಪತ್ರ ಬರೆಯಬೇಕಿದ್ದು, ದತ್ತಾಂಶ ಏಕೆ ಅಗತ್ಯ, ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಬೇಕು. ಹೀಗಿದ್ದೂ, ದತ್ತಾಂಶವನ್ನು ಒದಗಿಸುವ ಅಥವಾ ನಿರಾಕರಿಸುವ ಅಧಿಕಾರ ಪ್ರಾಧಿಕಾರಕ್ಕೆ ಇರಲಿದೆ.

ಈ ವ್ಯವಸ್ಥೆಯು ಪೂರ್ಣ ಪ್ರಮಾಣದಲ್ಲಿ ಜಾರಿಯಾದ ನಂತರ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳ ಸವಲತ್ತುಗಳನ್ನು ಕುಟುಂಬ ಸಂಖ್ಯೆಯ ಮೂಲಕವೇ ವಿತರಣೆ ಮಾಡಲಾಗುತ್ತದೆ. ರಾಜ್ಯ ಸರ್ಕಾರದ ಸಂಚಿತ ನಿಧಿ ಮತ್ತು ಕೇಂದ್ರ ಸರ್ಕಾರದ ಸಂಚಿತ ನಿಧಿಯಿಂದ ಸಂದಾಯವಾಗುವ ಪೂರ್ಣ ಅಥವಾ ಅರೆ ಪ್ರಮಾಣದ ಸಹಾಯಧನ, ಆರ್ಥಿಕ ನೆರವು, ಪರಿಹಾರಗಳು ಸಂದಾಯವಾಗುವುದಿದ್ದರೆ, ಅದಕ್ಕೆ ಕುಟುಂಬ ಸಂಖ್ಯೆಯನ್ನು ನೀಡುವುದು ಕಡ್ಡಾಯವಾಗಲಿದೆ. ರಾಜ್ಯ ಸರ್ಕಾರವು ಘೋಷಿಸುವ ಯಾವುದೇ ಕಲ್ಯಾಣ ಕಾರ್ಯಕ್ರಮ ಅಥವಾ ನೆರವುಗಳ ಫಲಗಳೂ ಈ ಸಂಖ್ಯೆಯ ಮೂಲಕವೇ ಫಲಾನುಭವಿಗಳಿಗೆ ತಲುಪಲಿದೆ.


**ದತ್ತಾಂಶ ಸುರಕ್ಷತೆಗೆ ಒತ್ತು:** ಒಂದು ಕುಟುಂಬಕ್ಕೆ ಒಂದೇ ಸಂಖ್ಯೆ. ಕುಟುಂಬದ ಸರ್ವ ಸದಸ್ಯರ ವಿವರ ಆ ಸಂಖ್ಯೆಯೊಂದಿಗೆ ಜೋಡಣೆಯಾಗಿರಲಿದೆ. ಕುಟುಂಬ ಸದಸ್ಯರು ವೈಯಕ್ತಿಕ ದೃಢೀಕರಣದ ನಂತರ ವಿವರಗಳನ್ನು ಪರಿಷ್ಕರಿಸಬಹುದಾಗಿದೆ. ಆದರೆ ಪ್ರಾಧಿಕಾರವು ಹಲವು ಹಂತದ ಪರಿಶೀಲನೆಯ ನಂತರವಷ್ಟೇ ಪರಿಷ್ಕೃತ ವಿವರಗಳು ಅಧಿಕೃತವಾಗಲಿವೆ

**ಗೌಪ್ಯತೆಗೆ ಆದ್ಯತೆ:** ಕುಟುಂಬ ಸಂಖ್ಯೆಯನ್ನಷ್ಟೇ ಇಲಾಖೆಗಳಿಗೆ ಒದಗಿಸಲಾಗುತ್ತದೆ. ವೈಯಕ್ತಿಕ ವಿವರಗಳು ಅವುಗಳೊಂದಿಗೆ ಇರುವುದಿಲ್ಲ. ನಾಗರಿಕರ ಖಾಸಗಿ ವಿವರಗಳ ಗೌಪ್ಯತೆ ಕಾಪಾಡಿಕೊಳ್ಳುವ ■ 6ನೇ ಪುಟಕ್ಕೆ

## ಉತ್ತರಾಧಿಕಾರಿಯನ್ನು ಮೋದಿ, ಬಿಜೆಪಿಯೇ ನಿರ್ಧರಿಸಬೇಕು

**ಆರ್‌ಎಸ್‌ಎಸ್ ಮುಖಂಡ ಮೋಹನ್ ಭಾಗವತ್**

ಚೆನ್ನೈ, ಡಿ.11– ನರೇಂದ್ರ ಮೋದಿ ನಂತರ ಬಿಜೆಪಿಯಲ್ಲಿ ಮುಂದಿನ ಪ್ರಧಾನಿ ಯಾರು ಎಂಬುದನ್ನು ನಿರ್ಧರಿಸುವುದು ಪ್ರಧಾನಿ ಮತ್ತು ಬಿಜೆಪಿಯ ಜವಾಬ್ದಾರಿ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದ್ದಾರೆ.



ಮೋಹನ್ ಭಾಗವತ್

ನರೇಂದ್ರ ಮೋದಿ ಅವರ ಉತ್ತರಾಧಿಕಾರಿ ಯಾರು ಎಂಬುದರ ಕುರಿತ ಚರ್ಚೆಯಲ್ಲಿ ಭಾಗಿಯಾಗಲು ನಿರಾಕರಿಸಿದ ಅವರು, ಕೆಲವು ಪ್ರಶ್ನೆಗಳು ನನ್ನ ವ್ಯಾಪ್ತಿಯಿಂದ ಹೊರಗಿವೆ. ಆದ್ದರಿಂದ, ಅವುಗಳ ಬಗ್ಗೆ ನಾನು ಏನೂ ಹೇಳುವುದಿಲ್ಲ. ನಾನು ಶುಭ ಹಾರೈಸುವುದನ್ನು ಬಿಟ್ಟು ಬೇರೇನೂ ಮಾಡಲಾರೆ. ಮೋದಿ ಅವರ ನಂತರ ಯಾರು ಎಂಬುದು ಬಿಜೆಪಿ ಮತ್ತು ಮೋದಿ ಅವರೇ ನಿರ್ಧರಿಸಬೇಕು ಎಂದು ಭಾಗವತ್ ಸ್ಪಷ್ಟಪಡಿಸಿದರು.

ಆರ್‌ಎಸ್ ಎಸ್ ಶತಮಾನೋತ್ಸವದ ಅಂಗವಾಗಿ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಳಿಬಂದ 'ಮೋದಿ ನಂತರ ಮುಂದಿನ ಬಿಜೆಪಿ ಪ್ರಧಾನಿ ಯಾರು' ಎಂಬ ಪ್ರಶ್ನೆಗೆ ಭಾಗವತ್ ಈ ರೀತಿ ಪ್ರತಿಕ್ರಿಯಿಸಿದರು.

ಭಾಗವತ್ ಅವರು, ನಾಲ್ಕು ತಿಂಗಳಲ್ಲಿ ಎರಡನೇ ಬಾರಿ ಹೀಗೆ 75 ವರ್ಷ ದಾಟಿದ ನಾಯಕರು ನಿವೃತ್ತಿಯಾಗುವ ಬಿಜೆಪಿಯ ಅಲಿಖಿತ ನಿಯಮ ಮತ್ತು ಮೋದಿ ನಂತರ ಯಾರು ಎಂಬ ವಿಷಯಗಳ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ.

ಆಗಸ್ಟ್‌ನಲ್ಲಿ, ಭಾಗವತ್ ಅವರು, ತಾವು ಅಥವಾ ಯಾರೂ 75 ನೇ ವಯಸ್ಸಿನಲ್ಲಿ ನಿವೃತ್ತರಾಗಬಾರದು ಎಂದು ಎಂದಿಗೂ ಪ್ರತಿಪಾದಿಸಿಲ್ಲ ಎಂದು ಹೇಳಿದ್ದರು. ಈ ಹಿಂದೆ ವಿಭಿನ್ನ ಸಂದರ್ಭದಲ್ಲಿ ನೀಡಿದ ಹೇಳಿಕೆಗಳನ್ನು ಸ್ಪಷ್ಟಪಡಿಸಿದ್ದರು. ನಂತರ ಈ ಸೆಪ್ಟೆಂಬರ್‌ನಲ್ಲಿ ಮೋದಿ ಅವರಿಗೆ 75 ವರ್ಷ ■ 6ನೇ ಪುಟಕ್ಕೆ

## ಜನೌಷಧಿ ಮಳಿಗೆ ಮುಚ್ಚುವ ಸಿದ್ದರಾಮಯ್ಯ ಸರ್ಕಾರದ ಆದೇಶ ರದ್ದುಗೊಳಿಸಿದ ಹೈಕೋರ್ಟ್

**ಕೋರ್ಟ್ ಆದೇಶ ಸ್ವಾಗತಿಸಿದ ಬಿಜೆಪಿ ನಾಯಕರು**



ಬೆಳಗಾವಿ, ಡಿ.11(ಕೆಎಂಶಿ)–ಕೇಂದ್ರ ಸರ್ಕಾರದ ಜನೌಷಧಿ ಮಳಿಗೆಗಳನ್ನು ಸ್ಥಗಿತಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನೀಡಿದ ಆದೇಶವನ್ನು ರಾಜ್ಯ ಹೈಕೋರ್ಟ್ ರದ್ದು ಮಾಡಿದೆ.

ಜನೌಷಧಿ ಕೇಂದ್ರಗಳನ್ನು ಪುನಃ ತೆರೆಯಲು ಸೂಚಿಸಿರುವುದನ್ನು ಸ್ವಾಗತಿಸುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನಾದರೂ ದ್ವೇಷ ರಾಜಕಾರಣ ಬಿಡಬೇಕು. ಕೇಂದ್ರ ಸರ್ಕಾರದ ಜೊತೆ ಸೌಹಾರ್ದಯುತವಾಗಿ ನಡೆದುಕೊಳ್ಳಬೇಕು. ಅಧಿಕಾರದಲ್ಲಿ ಇರುವಷ್ಟು ದಿನ ಉತ್ತಮ ಕಾರ್ಯ ಮಾಡಲಿ ಎಂದು ಒತ್ತಾಯಿಸಿದರು.

ಜನೌಷಧಿ ಕೇಂದ್ರಗಳಿಂದ ರಾಜ್ಯಕ್ಕೆ ಮತ್ತು ಬಡವರಿಗೆ ಒಳ್ಳೆಯದಾಗುತ್ತಿದೆ. ದೇಶದ ಬಡಜನರಿಗೆ ಕೈಗೆಟಕುವ ದರದಲ್ಲಿ ಔಷಧಿಗಳು ಸಿಗಬೇಕು. ಇದರಿಂದ ಬಡವರಿಗೆ ಅನುಕೂಲ ಆಗಬೇಕೆಂಬ ಸದುದ್ದೇಶದಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಕಾರ್ಯಕ್ರಮ ಜಾರಿಗೊಳಿಸಿದರು. ■ 6ನೇ ಪುಟಕ್ಕೆ

## ಸಾಮಾಜಿಕ ಬಹಿಷ್ಕಾರ ಹಾಕಿದರೆ 3 ವರ್ಷ ಜೈಲು

● ವಿಧಾನಸಭೆಯಲ್ಲಿ ಸಾಮಾಜಿಕ ಬಹಿಷ್ಕಾರ ನಿಷೇಧ ಮಸೂದೆ ಮಂಡನೆ ● ಶಿಕ್ಷೆ ಜೊತೆಗೆ ಲಕ್ಷ ರೂ. ದಂಡ ವಿಧಿಸುವ ಅವಕಾಶ


ಬೆಳಗಾವಿ, ಡಿ.11– ಸಭೆ– ಪಂಚಾಯ್ತಿ ಮೂಲಕ ಯಾವುದೇ ವ್ಯಕ್ತಿ, ಕುಟುಂಬ ಅಥವಾ ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದನ್ನು ನಿಷೇಧಿಸುವ ಮಸೂದೆಯನ್ನು ರಾಜ್ಯ ಸರ್ಕಾರ ಗುರುವಾರ ವಿಧಾನಸಭೆಯಲ್ಲಿ ಮಂಡಿಸಿದೆ.

ಈ ಮಸೂದೆಯ ನಿಯಮಗಳನ್ನು ಉಲ್ಲಂಘಿಸಿ ಸಾಮಾಜಿಕ ಬಹಿಷ್ಕಾರ ಹಾಕುವವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ. ದಂಡ ವಿಧಿಸಲು ಅವಕಾಶ ನೀಡುತ್ತದೆ.

ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಇಂದು ವಿಧಾನ ಸಭೆಯಲ್ಲಿ 'ಕರ್ನಾಟಕ ಸಾಮಾಜಿಕ ಬಹಿಷ್ಕಾರ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಮಸೂದೆ, 2025' ಅನ್ನು ಮಂಡಿಸಿದ್ದು, ಅದರಲ್ಲಿ 20 ರೀತಿಯ ಸಾಮಾಜಿಕ ಬಹಿಷ್ಕಾರಗಳನ್ನು ಪಟ್ಟಿ ಮಾಡಿದ್ದಾರೆ. ಮಸೂದೆಯಲ್ಲಿ ಯಾವುದೇ ವ್ಯಕ್ತಿ, ಕುಟುಂಬದೊಂದಿಗೆ ವ್ಯವಹರಿಸಲು ನಿರಾಕರಿಸುವುದು, ಅವರ ಕೆಲಸ ಮಾಡಲು ■ 6ನೇ ಪುಟಕ್ಕೆ

## ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ಕ್ರಿಕೆಟ್ ಪಂದ್ಯ

**ರಾಜ್ಯ ಸಚಿವ ಸಂಪುಟದ ಒಪ್ಪಿಗೆ; ಗೃಹ ಇಲಾಖೆಗೆ ಭದ್ರತೆಯ ಹೊಣೆ**



ಬೆಳಗಾವಿ, ಡಿ.11– ರಾಜ್ಯ ಕ್ರಿಕೆಟ್ ಅಭಿಮಾನಿಗಳಿಗೆ ಸರ್ಕಾರದಿಂದ ಸಂತಸದ ಸಂಗತಿ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳನ್ನು ನಡೆಸಲು ರಾಜ್ಯ ಸಚಿವ ಸಂಪುಟ ಗುರುವಾರ ಒಪ್ಪಿಗೆ ನೀಡಿದೆ.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡಲು ಕೆಲ ಷರತ್ತುಗಳ ಅನ್ವಯ ಅನುಮತಿಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರಕಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯ ನಡೆಸಲು ಜನಾಭಿಪ್ರಾಯ ಸಂಗ್ರಹದ ಜೊತೆಗೆ ನಿಯಮಗಳನ್ನು ರೂಪಿಸಲು ಗೃಹ ಸಚಿವರಿಗೆ ಸೂಚಿಸಲಾಗಿದೆ ಎಂದು ಹೇಳಲಾಗಿದೆ.


ಕಾಲ್ತುಳಿತ ದುರಂತ ಬಳಿಕ ಸ್ಟೇಡಿಯಂನಲ್ಲಿ ಪಂದ್ಯಗಳು ನಡೆದಿರಲಿಲ್ಲ. ಆದರೆ, ಇದೀಗ ನಿವೃತ್ತ ನ್ಯಾ. ಮೈಕಲ್ ಡಿ ಕುನ್ಹಾ ವರದಿ ಆಧರಿಸಿ ಷರತ್ತುಗಳ ಅನ್ವಯ ಕ್ರಿಕೆಟ್ ಪಂದ್ಯಗಳನ್ನು ಆಡಿಸಲು ಸರ್ಕಾರ ಅನುಮತಿ ನೀಡಿದ್ದು, ■ 6ನೇ ಪುಟಕ್ಕೆ



# ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ

● ಯತೀಂದ್ರ ಮತ್ತೊಮ್ಮೆ ಸ್ಫೋಟಕ ಹೇಳಿಕೆ ● ನಾವು ಮಾತಾಡಿದರೆ ಬಲಾತ್ಕಾರ; ಅವರು ಮಾತನಾಡಿದರೆ ಚಮತ್ಕಾರ: ಶಾಸಕ ಇಕ್ಬಾಲ್ ಹುಸೇನ್ ತೀಕ್ಷ್ಣ ಪ್ರತಿಕ್ರಿಯೆ

ಬೆಳಗಾವಿ, ಡಿ.11(ಕೆಎಂಶಿ)– ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂಬುದಾಗಿ ಪಕ್ಷದ ದೆಹಲಿ ವರಿಷ್ಠರು ಸ್ಪಷ್ಟವಾಗಿ ತಿಳಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ಯತೀಂದ್ರ ಮತ್ತೆ ಬಾಂಬ್ ಸಿಡಿಸಿದ್ದಾರೆ.



ಯತೀಂದ್ರ

ಕಳೆದ ರಾತ್ರಿ ಮಾಜಿ ಶಾಸಕ ಫಿರೋಜ್ ಸೇಠ್, ಮುಖ್ಯಮಂತ್ರಿ ಹಾಗೂ ಅವರ ಆಪ್ತ ಸಚಿವರು ಮತ್ತು ಶಾಸಕರಿಗೆ ಏರ್ಪಡಿಸಿದ್ದ ಬೋಜನಕೂಟದ ಮರುದಿನವೇ ಯತೀಂದ್ರ ಈ ಹೇಳಿಕೆ ನೀಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಸೇಠ್ ಕರೆದಿದ್ದ ಭೋಜನಕೂಟಕ್ಕೆ ಯತೀಂದ್ರ ಹೋಗಿರಲಿಲ್ಲ. ಉಳಿದಂತೆ ಮುಖ್ಯಮಂತ್ರಿ ಹಾಗೂ ಸಚಿವರಾದ ಬೈರತಿ ಸುರೇಶ್, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಡಾ.ಎಚ್.ಸಿ. ಮಹದೇವಪ್ಪ ಹಾಗೂ ಶಾಸಕರು ಭಾಗವಹಿಸಿದ್ದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಅವರ ಬಣಕ್ಕೆ ಈ ಔತಣಕೂಟಕ್ಕೆ ಆಹ್ವಾನ ಇರಲಿಲ್ಲ.

ಆದರೆ, ಇದೇ ಸಂದರ್ಭದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಮಾಜಿ ಸಚಿವ ಕೆ.ಎನ್.ರಾಜಣ್ಣ ತಮ್ಮ ಸಮುದಾಯಕ್ಕೆ ■ 6ನೇ ಪುಟಕ್ಕೆ

## ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಯತೀಂದ್ರ ಹೇಳಿಕೆಗೆ ಸಿಎಂ ಉತ್ತರಿಸುತ್ತಾರೆ!

ಬೆಳಗಾವಿ, ಡಿ. 11(ಕೆಎಂಶಿ)– ನಾಯಕತ್ವ ವಿಚಾರವಾಗಿ ಮುಖ್ಯಮಂತ್ರಿ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ಯತೀಂದ್ರ ಹೇಳಿಕೆ ಕುರಿತು ಸಿದ್ದರಾಮಯ್ಯ ಉತ್ತರ ನೀಡುತ್ತಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಡಿ.ಕೆ.ಶಿವಕುಮಾರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯತೀಂದ್ರ ಹೇಳಿಕೆ ವಿಚಾರವಾಗಿ ನಾನೇನು ಹೇಳಲ್ಲ. ಮುಖ್ಯಮಂತ್ರಿಗಳು ಮಾತನಾಡುತ್ತಾರೆ ಎಂದರು. ಇನ್ನು ದ್ವೇಷ ಭಾಷಣ ತಡೆ ವಿಧೇಯಕ ಮಂಡನೆಗೆ ಬಿಜೆಪಿ ವಿರೋಧ ಮಾಡುತ್ತಿದ್ದು, ಅವರು ಜಾತಿ–ಜಾತಿಗಳು, ಧರ್ಮ–ಧರ್ಮಗಳ ಮಧ್ಯೆ ದ್ವೇಷ ಬಿತ್ತುವ, ವೈಯಕ್ತಿಕ ನಿಂದನೆಯ ಪಿತಾಮಹರು, ಸಂವಿಧಾನದ ಆಶಯದಂತೆ ನಡೆದುಕೊಳ್ಳಲಿ, ಸಂವಿಧಾನಕ್ಕೆ ಗೌರವ ಕೊಡುವ ಇಚ್ಛೆ ಇದ್ದರೆ, ಪಾಲಿಸಲಿ ಎಂದರು. ದ್ವೇಷ ಮಾಡದಿದ್ದರೆ ಸಮಸ್ಯೆಯೇ ಇರುವುದಿಲ್ಲ, ಸಂವಿಧಾನ ರಕ್ಷಣೆಗೆ ನಾವು ಕ್ರಮ ಕೈಗೊಂಡಿದ್ದೇವೆ ಎಂದರು. ಕಾಂಗ್ರೆಸ್‌ನ ಜವಾಹರಲಾಲ್ ನೆಹರು ಹಾಗೂ ಇಂದಿರಾ ಗಾಂಧಿ ಮತ ಕಳ್ಳತನ ಮಾಡಿದ್ದರು ಎಂದಿರುವ ಅಮಿತ್ ಷಾ ಅವರಿಗೆ ಕನಿಷ್ಠ ಜ್ಞಾನ ಇರಬೇಕು ಎಂದರು.

# ಡ್ರಗ್ಸ್ ದಂಧೆ ವಿರುದ್ಧ ಸಮರ

## ವಿಧಾನ ಪರಿಷತ್‌ನಲ್ಲಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಗುಡುಗು

ಬೆಳಗಾವಿ, ಡಿ.11– ರಾಜ್ಯದಲ್ಲಿ ಡ್ರಗ್ಸ್ ತಡೆಗೆ ಮತ್ತು ಅಂತಹ ದಂಧೆಗಳಿಗೆ ಸಂಪೂರ್ಣವಾಗಿ ಕಡಿವಾಣ ಹಾಕಲು ರಾಜ್ಯ ಸರ್ಕಾರವು ಕಠಿಣ ನಿರ್ಧಾರ ತೆಗೆದುಕೊಂಡಿದೆ. ಡ್ರಗ್ಸ್ ಕಂಟ್ರೋಲ್ ಆಗುವವರೆಗೆ ದಂಧೆಕೋರರ ವಿರುದ್ಧ ಸಮರ ನಡೆಯಲಿದೆ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದ್ದಾರೆ.



ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಅಬ್ದುಲ್ ಜಬ್ಬರ್ ಪ್ರಶ್ನೆಗೆ ಉತ್ತರ ನೀಡಿದ ಅವರು, ಮಾದಕ ವಸ್ತುಗಳ ಉತ್ಪಾದನೆ, ಮಾರಾಟ ಮತ್ತು ಅವುಗಳ ಬಳಕೆ ಜಾಗತಿಕವಾಗಿ ದಿನೇ ದಿನೆ ಹೆಚ್ಚುತ್ತಿದೆ. ಮಾದಕ ವಸ್ತುಗಳ ಮಾರಾಟವು ಮಾರಾಟಗಾರರಿಗೆ ಅತೀ ಹೆಚ್ಚಿನ ಲಾಭಾಂಶ ತರುವ ಉದ್ಯಮವಾಗಿ ಪರಿವರ್ತನೆಯಾಗಿದೆ. ಅತೀ ಹೆಚ್ಚಿನ ಲಾಭಕ್ಕಾಗಿ ಅಂತರ ರಾಜ್ಯ, ಅಂತರರಾಷ್ಟ್ರೀಯ ಜಾಲಗಳು ಕಾರ್ಯನಿರ್ವಹಿಸುತ್ತಿವೆ. ಈ ಜಾಲಗಳು ಜಗತ್ತಿನಾದ್ಯಂತ ಬಹುತೇಕ ಎಲ್ಲಾ ರಾಷ್ಟ್ರಗಳಲ್ಲಿ ಸಕ್ರಿಯವಾಗಿರುವುದರಿಂದ ಈ ಡ್ರಗ್ಸ್ ಸಮಸ್ಯೆಯು ಸಾರ್ವತ್ರಿಕವಾಗಿದೆ. ರಾಜ್ಯದಲ್ಲಿ ಮಾದಕ ವಸ್ತುಗಳ ಸೇವನೆ, ಮಾರಾಟ ತಡೆಗಟ್ಟಲು ರಾಜ್ಯ ಸರ್ಕಾರವು ನಾನಾ ಕ್ರಮ ತೆಗೆದುಕೊಂಡಿದೆ ಎಂದಿದ್ದಾರೆ.

ರಾಜ್ಯದಲ್ಲಿ ಮಾದಕ ದ್ರವ್ಯಗಳ ಹಾವಳಿಯನ್ನು ಎದುರಿಸಲು ಹಾಗೂ ತಡೆಗಟ್ಟಲು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ನೇತೃತ್ವದಲ್ಲಿ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ (ಎಎನ್‌ಟಿಎಫ್) ಯನ್ನು ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿರುವ ಕುರಿತು ಡ್ರಗ್ಸ್ ಹಾವಳಿಯನ್ನು ಪೂರ್ಣವಾಗಿ ತಡೆಗಟ್ಟಲು ಗಾಂಜಾ ಬೆಳೆಯನ್ನು ಬೆಳೆಯುವುದು, ■ 6ನೇ ಪುಟಕ್ಕೆ

## ಡ್ರಗ್ಸ್ ದಂಧೆಯಲ್ಲಿ ತೊಡಗಿರುವ ವಿದೇಶಿಗರಿಗೆ ಬಾಡಿಗೆಗೆ ನೀಡಿದ ಮನೆ 'ಧ್ವಂಸ'



ಬೆಳಗಾವಿ: ಡ್ರಗ್ಸ್ ದಂಧೆಯಲ್ಲಿ ತೊಡಗಿರುವ ವಿದೇಶಿ ಪ್ರಜೆಗಳಿಗೆ ಬಾಡಿಗೆ ನೀಡಿದರೆ ಅಂತಹ ಮನೆಗಳನ್ನು ಧ್ವಂಸಗೊಳಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಎಚ್ಚರಿಕೆ ನೀಡಿದ್ದಾರೆ.

ಸರ್ಕಾರ ಡ್ರಗ್ಸ್ ದಂಧೆಗೆ ಎಷ್ಟೇ ಕಡಿವಾಣ ಹಾಕಿದರೂ ಕೆಲವು ಸ್ಥಳೀಯರ ಜೊತೆ ಕೈಜೋಡಿಸಿ ವಿದೇಶಿ ಪ್ರಜೆಗಳು ನಿರಂತರವಾಗಿ ಈ ದಂಧೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದನ್ನು ಮಟ್ಟ ಹಾಕಲು ಬಾಡಿಗೆ ನೀಡಿದ ಮನೆಗಳನ್ನೇ ಧ್ವಂಸ ಮಾಡಿದರೆ ಡ್ರಗ್ಸ್ ದಂಧೆಯಲ್ಲಿ ತೊಡಗಿರುವವರಿಗೆ ಬಾಡಿಗೆ ನೀಡಲು ಹಿಂಜರಿಯುತ್ತಾರೆ.

ಇದರಿಂದ ಅವರು ದೀರ್ಘ ಕಾಲ ರಾಜ್ಯದಲ್ಲಿ ಉಳಿಯಲು ಸಾಧ್ಯ ಆಗುವುದಿಲ್ಲ ಎಂಬ ಉದ್ದೇಶದಿಂದ ಈ ಕಠಿಣ ತೀರ್ಮಾನ ಕೈಗೊಳ್ಳಬೇಕಿದೆ ಎಂದರು.

ವಿದ್ಯಾಭ್ಯಾಸ, ಪ್ರವಾಸ ನೆಪದಲ್ಲಿ ಬರುವ ವಿದೇಶಿ ಪ್ರಜೆಗಳು ರಾಜ್ಯದಲ್ಲಿ ಡ್ರಗ್ಸ್ ದಂಧೆ ನಡೆಸುತ್ತಾರೆ. ಇಂತಹವರನ್ನು ಬಂಧಿಸಿದರೆ ಕಾನೂನಾತ್ಮಕವಾಗಿ ದಂಧೆಕೋರರಿಗೇ ಅನುಕೂಲವಾಗುತ್ತದೆ. ಡ್ರಗ್ಸ್ ದಂಧೆಯಲ್ಲಿ ತೊಡಗಿರುವ ವಿದೇಶಿ ಪ್ರಜೆಗಳಿಗೆ ಮನೆ ಗಳನ್ನು ಬಾಡಿಗೆ ನೀಡುವ ಮಾಲೀಕರ ವಿರುದ್ಧವೂ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.


ಮುಂದೆ ವಿದೇಶಿ ಪ್ರಜೆಗಳಿಗೆ ಬಾಡಿಗೆಗೆ ನೀಡಿರುವ ಮನೆಗಳನ್ನು ಧ್ವಂಸಗೊಳಿಸಲಾಗುವುದು. ಇಂತಹ ಕಠಿಣ ಕ್ರಮಗಳಿಂದ ಡ್ರಗ್ಸ್ ದಂಧೆ ಸಂಪೂರ್ಣ ಹತ್ತಿಕ್ಕಲಾಗುವುದು ಎಂದರು. ಕಳೆದ ಎರಡೂವರೆ ವರ್ಷಗಳಿಂದ ಮಾದಕವಸ್ತು ಮುಕ್ತ ರಾಜ್ಯವನ್ನಾಗಿಸಲು ಪೊಲೀಸ್ ಇಲಾಖೆ ಸಾರಿರುವ ಸಮರವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು. ರಾಜ್ಯಾದ್ಯಂತ ಕೋಟ್ಯಾಂತರ ಮೌಲ್ಯದ ಸಾವಿರಾರು ಕೆ.ಜಿ. ಡ್ರಗ್ಸ್ ವಶಪಡಿಸಿಕೊಂಡು ನಾಶಪಡಿಸಲಾಗಿದೆ. ಬೆಂಗಳೂರಿನಲ್ಲಿ ಒಂದೇ ದಿನ ಒಂದು ಸಾವಿರ ಶಾಲೆಗಳಿಗೆ ಪೊಲೀಸ್ ■ 6ನೇ ಪುಟಕ್ಕೆ

## ಮೈಸೂರು ಅರಮನೆ ವರಹಾ ದ್ವಾರದ

# ಮೇಲ್ಛಾವಣಿ ಕಾಂಕ್ರಿಟ್ ಕುಸಿತ

**ಇಲ್ಲಿ ಪ್ರವೇಶ ನಿರ್ಬಂಧ ಇರುವುದರಿಂದ ತಪ್ಪಿದ ಅಪಾಯ**





ಮೈಸೂರು ಅರಮನೆಯ ವರಹಾ ದ್ವಾರದ ಮೇಲ್ಛಾವಣಿಯ ಕಾಂಕ್ರಿಟ್ ಕುಸಿದಿರುವುದು. ಮತ್ತೊಂದು ಚಿತ್ರದಲ್ಲಿ ಅರಮನೆ ಉತ್ತರ ದಿಕ್ಕಿನಲ್ಲಿರುವ ಜಯರಾಮ ದ್ವಾರದ ಸಮೀಪ ಶ್ರೀ ಒಂಟೆರಾಮಾಚಾರ್ಯರ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಗೋಡೆಗೂ ಭಾರೀ ಹಾನಿಯಾಗಿರುವುದನ್ನು ಕಾಣಬಹುದು.

ಮೈಸೂರು, ಡಿ.11(ಪಿಎಂ)– ವಿಶ್ವವಿಖ್ಯಾತ ಮೈಸೂರು ಮೈಸೂರು ಅರಮನೆಯ ವರಹಾ ದ್ವಾರದ ಮೇಲ್ಛಾವಣಿಯ ಕಾಂಕ್ರಿಟ್ ಕುಸಿದು ಬಿದ್ದ ಘಟನೆ ಗುರುವಾರ ನಡೆದಿದ್ದು, ಸದರಿ ಮಾರ್ಗ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ಇರುವ ಹಿನ್ನೆಲೆಯಲ್ಲಿ ಯಾವುದೇ ಅಪಾಯವಾಗಿಲ್ಲ.

ಇದೇ ದ್ವಾರದ ಮೂಲಕ ಅರಮನೆ ವೀಕ್ಷಣೆಗೆ ಬರುವ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಆಗಮನ ಹಾಗೂ ನಿರ್ಗಮನಕ್ಕೆ ಅವಕಾಶ ಇದೆ. ಆದರೆ ಸದರಿ ದ್ವಾರದ ■ 6ನೇ ಪುಟಕ್ಕೆ

▶ ಮೇಲ್ಛಾವಣಿಯ ಕಾಂಕ್ರಿಟ್ ಬಿದ್ದಿರುವುದು ಜನ ಸಂಚಾರ ನಿರ್ಬಂಧಿತ ಸ್ಥಳವಾಗಿದೆ. 72 ಎಕರೆ ಪ್ರದೇಶದಲ್ಲಿ ಅರಮನೆ ಇದ್ದು, ಶತಮಾನ ಕಂಡಿರುವ ಕಟ್ಟಡ ಇದಾಗಿದೆ. ಹೀಗಾಗಿ ಒಮ್ಮೊಮ್ಮೆ ಇಂತಹ ಸನ್ನಿವೇಶ ತಲೆದೋರುತ್ತದೆ. ಅರಮನೆ ಮಂಡಳಿಯ ಸಿವಿಲ್ ವಿಭಾಗ ಆಗಾಗ್ಗೆ ಪರಿಶೀಲನೆ ಸಹ ನಡೆಸುತ್ತದೆ. ಅಂಬಾವಿಲಾಸ ದ್ವಾರದಲ್ಲೂ ಇದೇ ರೀತಿ ಆಗಿತ್ತು. ಈಗ ಆಗಿರುವುದನ್ನು ದುರಸ್ತಿಪಡಿಸಿ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲಾಗುವುದು.
-ಟಿ.ಎಸ್.ಸುಬ್ರಹ್ಮಣ್ಯ, ಉಪನಿರ್ದೇಶಕರು, ಮೈಸೂರು ಅರಮನೆ ಮಂಡಳಿ.

ಮೈಸೂರು ಮಿತ್ರ ಶುಕ್ರವಾರ 12 ಡಿಸೆಂಬರ್ 2025

# ತಾಲೂಕು, ಗ್ರಾಮ ಮಟ್ಟದಲ್ಲಿ ಇ-ಪೌತಿ ಖಾತೆ ಆಂದೋಲನ ಆರಂಭಕ್ಕೆ ಎಡಿಸಿ ಸೂಚನೆ



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಬುಧವಾರ ಕಂದಾಯ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಡಿ.11(ಎಂಕೆ)– ತಾಲೂಕು, ಗ್ರಾಪಂ ಹಾಗೂ ಗ್ರಾಮ ಮಟ್ಟದಲ್ಲಿ ಇ–ಪೌತಿ ಆಂದೋಲನವನ್ನು ಕಡ್ಡಾಯವಾಗಿ ನಡೆಸಿ, ಪ್ರಗತಿ ಸಾಧಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಯಾದ ಹಾಗೂ ರೈತರಿಗೆ ಅನುಕೂಲಕರವಾದ ಇ–ಪೌತಿ ಆಂದೋಲನವನ್ನು ಇನ್ನು ಮುಂದೆ ಕಡ್ಡಾಯವಾಗಿ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರರು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಪ್ರತಿ ಗ್ರಾಮಗಳಿಗೂ ಭೇಟಿ ನೀಡಿ ಅರ್ಜಿಗಳನ್ನು ಪಡೆದು ರೈತರ ಮನವೊಲಿಸಿ ಪೌತಿ ಖಾತೆಯನ್ನು ನಿಯಮಾನುಸಾರ ಮಾಡಿಕೊಡುವಂತೆ ತಿಳಿಸಿದರು.

ಈ ತಿಂಗಳು ಪ್ರತಿ ದಿನವೂ ಗ್ರಾಮ ಮಟ್ಟದಲ್ಲಿ ನಿಯಮಿತವಾಗಿ ಅದಾಲತ್‌ಗಳನ್ನು ನಡೆಸಿ ಕಡ್ಡಾಯವಾಗಿ ಪ್ರತಿ ಗ್ರಾಮ ಆಡಳಿತಾಧಿಕಾರಿಗಳು ಕನಿಷ್ಠ ನೂರು ಇ–ಪೌತಿ ಮಾಡಿ ಕೊಡುವಂತೆ ಹಾಗೂ ರೈತರಿಗೆ ಅನುಕೂಲ ಮಾಡಿಕೊಡಬೇಕು. ಮರಣ ಹೊಂದಿರುವ ರೈತರ ಹೆಸರಿನಲ್ಲಿಯೇ ಇರುವ ಪಹಣಿಗಳಲ್ಲಿ ಪೌತಿ ಖಾತೆಯನ್ನು ನಿರ್ವಹಿಸಿ ಅವರ ಕುಟುಂಬದವರ ಹೆಸರಿನಲ್ಲಿ ಜಂಟಿ ಖಾತೆ ಇಡುವ ಮೂಲಕ ಜೀವಂತವಿರುವ ಉತ್ತರಾಧಿಕಾರಿಗಳ ಹೆಸರನ್ನು ಪಹಣಿಗಳಲ್ಲಿ ನಮೂದಿಸಿ ಕಾಲೋಚಿತಗೊಳಿಸುವ ಸದರಿ ಯೋಜನೆಯು ರೈತರಿಗೆ ಅನುಕೂಲಕರವಾಗಿದೆ ಎಂದರು. ಸಭೆಯಲ್ಲಿ ಜಿಲ್ಲೆಯ ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು, ಡಿಡಿಎಲ್‌ಆರ್ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಭಾಷೆಗಳ ಜ್ಞಾನ ವ್ಯಾಪಕವಾಗಿ ತಿಳಿಸಲು ಅನುವಾದವೊಂದೇ ಏಕೈಕ ಮಾರ್ಗ

## ಮೈಸೂರಿನ ಸಿಐಐ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅಭಿಪ್ರಾಯ



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಗುರುವಾರ ನಡೆದ ಭಾರತೀಯ ಭಾಷಾ ಉತ್ಸವ ಕಾರ್ಯಕ್ರಮವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕ ಪ್ರೊ.ಆರ್.ವಿ.ಎಸ್.ಸುಂದರಂ ಉದ್ಘಾಟಿಸಿದರು.

ಮೈಸೂರು, ಡಿ.11(ಬಿಎಲ್‌ಯು)– ಕನ್ನಡ ಸೇರಿದಂತೆ ಇತರೆ ಶಾಸ್ತ್ರೀಯ ಭಾಷೆಯ ಜ್ಞಾನವನ್ನು ಎಲ್ಲರಿಗೂ ತಲುಪಿಸಬೇಕಿದ್ದು, ಅನುವಾದವೊಂದೇ ಇದಕ್ಕಿರುವ ಏಕೈಕ ಮಾರ್ಗ ಎಂದು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಸಲಹೆ ನೀಡಿದರು.

ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಇಂದು ನಡೆದ ಭಾರತೀಯ ಭಾಷಾ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡ, ಒಡಿಸಾ ಸೇರಿದಂತೆ ಭಾರತದ ಯಾವುದೇ ಭಾಷಾ ವಿಸ್ತರಣೆಗೆ ಲಕ್ಷ್ಮಣ ರೇಖೆ ಹಾಕದೆ, ಅದರ ಜ್ಞಾನವನ್ನು ಎಲ್ಲರಿಗೂ ತಿಳಿಸಬೇಕು. ಈ ಹಿನ್ನೆಲೆ ಅನುವಾದ ದೊಡ್ಡ ಸೇತುವೆಯಾಗಬೇಕು ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯಂತೆ ಮಾತೃ ಭಾಷೆ ಜೊತೆಗೆ ಹೆಚ್ಚುವರಿ ಭಾಷೆ ಕಲಿಯಬೇಕು. ಈ ಹಿನ್ನೆಲೆ ಇತರೆ ಭಾಷೆ ಕಲಿಕೆಗೆ ಕೇಂದ್ರ ಸರ್ಕಾರ ಹಲವು ಯೋಜನೆ ರೂಪಿಸಿದೆ ಎಂದು ಪ್ರೊ.ಶೈಲೇಂದ್ರ ಮೋಹನ್ ತಿಳಿಸಿದರು. ಭಾಷೆಗಳು ಎಷ್ಟಿದ್ದರೂ ಅವುಗಳ ಭಾವ ಮಾತ್ರ ಒಂದೇ ಆಗಿರುತ್ತದೆ. ಭಾರತದ ಭಾಷೆಗಳಿಗೆ 10 ಸಾವಿರ ವರ್ಷಗಳ ಇತಿಹಾಸವಿದೆ. ನಮ್ಮ ದೇಶದಲ್ಲಿ ಬಹಳಷ್ಟು ಭಾಷೆಗಳಿದ್ದರೂ ಅವುಗಳು ಎಲ್ಲರನ್ನು ಒಗ್ಗೂಡಿಸುವ ಭಾವೈಕ್ಯ ಶಕ್ತಿ ಹೊಂದಿವೆ ಎಂದು ಹೇಳಿದರು.

ಭಾಷೆಗಳು ಅನೇಕ, ಆದರೆ ಭಾವ ಒಂದೇ ಎಂಬ ಧ್ಯೇಯ ವಾಕ್ಯದೊಂದಿಗೆ ಹಲವು ಕಾರ್ಯಕ್ರಮ ರೂಪಿಸಲಾಗಿದೆ. ಭಾರತದಲ್ಲಿ ಸುಮಾರು 25 ಭಾಷಾ ಲಿಪಿಗಳಿವೆ. ಇವುಗಳಿಗೆ 12 ರಿಂದ 14 ಭಾಷಾ ಲಿಪಿಗಳು ಪ್ರಮುಖವಾಗಿವೆ. ಎಲ್ಲಾ ಭಾಷೆಗಳ ಲಿಪಿಗಳು ಸ್ವತಂತ್ರ ವ್ಯವಸ್ಥೆ ಅನುಸರಿಸುತ್ತಿವೆ ಎಂದರು.

ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಹಾಗೂ ಮಣಿಪುರದಿಂದ ಗುಜರಾತ್‌ವರೆಗೆ ಭಾಷೆಗಳ ಬಾಲ ಬೋಧನೆಯನ್ನು ನಮ್ಮ ಭಾರತೀಯ ಭಾಷಾ ಸಂಸ್ಥಾನದಲ್ಲಿ ಮಾಡಲಾಗುತ್ತದೆ. ಈ ಕೆಲಸವನ್ನು ಮಾಡಬಲ್ಲ ದೇಶದ ಏಕೈಕ ಸಂಸ್ಥೆಯಾಗಿದ್ದು, ಭಾಷಾ ವಿಚಾರವಾಗಿ ದೊಡ್ಡ ದೊಡ್ಡ ಸಂಸ್ಥೆಗಳು ಸಹಾಯಕ್ಕಾಗಿ ನಮ್ಮ ಸಂಸ್ಥೆಗೆ ಬರುತ್ತವೆ ಎಂದು ಹೇಳಿದರು.

ಏಕತೆ ಭಾರತದ ಭಾಷೆಗಳ ಶಕ್ತಿಯಾಗಿದೆ. ಎಲ್ಲಾ ಭಾಷೆಗಳು ಏಕತೆಯನ್ನು ಸಾರಿ ಹೇಳುತ್ತವೆ ಎಂದು ಪ್ರೊ.ಶೈಲೇಂದ್ರ ಮೋಹನ್ ತಿಳಿಸಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ.ಆರ್.ವಿ.ಎಸ್.ಸುಂದರಂ, ಪ್ರಾಧ್ಯಾಪಕ ಡಾ.ಪಿ.ಆರ್.ಧರ್ಮೇಶ್ ಫರ್ನಾಂಡೀಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಎರಡನೇ ಟಿ20: ಹರಿಣ ಪಡೆಗೆ 51 ರನ್‌ಗಳ ಜಯ

ಪಂದ್ಯಶ್ರೇಷ್ಠ: ಕ್ವಿಂಟನ್ ಡಿಕಾಕ್



ದಕ್ಷಿಣ ಆಫ್ರಿಕಾ ತಂಡದ ಆಟಗಾರ ಸಂಭ್ರಮ

ನ್ಯೂ ಚಂಡೀಗಢ, ಡಿ.11 (ವಿವಿಹೆಚ್)– ಬಾರ್ಟ್‌ಮನ್ ಬೌಲಿಂಗ್ ದಾಳಿ, ಡಿಕಾಕ್ ಅವರ ಶತಕ ವಂಚಿತ ಆಟದ ಬಲದಿಂದ ಅತಿಥೇಯ ಭಾರತ ತಂಡದ ವಿರುದ್ಧ ಪ್ರವಾಸಿ ದಕ್ಷಿಣ ಆಫ್ರಿಕಾ ತಂಡ 51 ರನ್‌ಗಳ ಗೆಲುವು ದಾಖಲಿಸಿತು. ಆ ಮೂಲಕ 5 ಟಿ20 ಪಂದ್ಯಗಳ ಸರಣಿಯಲ್ಲಿ 1–1 ಸಮಬಲ ಸಾಧಿಸಿವೆ.

ಇಲ್ಲಿನ ಮುಲ್ಲನಪುರ್ ಮಹಾರಾಜ ಯದವಿಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಎರಡನೇ ಟಿ20 ಪಂದ್ಯದಲ್ಲಿ ಹರಿಣ ಪಡೆ ನೀಡಿದ್ದ ಬೃಹತ್ ಮೊತ್ತ ಬೆನ್ನತ್ತಿದ ಭಾರತಕ್ಕೆ ಆರಂಭಿಕ ಆಘಾತ ಎದುರಾಯಿತು. ಹರಿಣ ಬೌಲಿಂಗ್ ದಾಳಿಗೆ ಮಂಕಾಗಿ ರನ್ ಕದಿಯಲು ಪರದಾಡಿದರು.

ಉಪನಾಯಕ ಶುಬ್‌ಮನ್ ಗಿಲ್ ತಾವೆದುರಿಸಿದ ಮೊದಲ ಎಸೆತದಲ್ಲಿಯೇ ಕ್ಯಾಚಿತ್ತು ಹೊರನಡೆದರು. ಬಿರುಸಿನ ಆಟಕ್ಕೆ ಮುಂದಾಗಿದ್ದ ಅಭಿಷೇಕ್ ಶರ್ಮಾ 17 ರನ್ ಗಳಿಸಿದ್ದ ವೇಳೆ ಏನ್ಸನ್ ಬೌಲಿಂಗ್ ದಾಳಿಗೆ ವಿಕೆಟ್ ಒಪ್ಪಿಸಿದರು. ಅಕ್ಷರ್ ಪಟೇಲ್ 21, ನಾಯಕ ಸೂರ್ಯಕುಮಾರ್ ಯಾದವ್ 5 ರನ್ ಗಳಿಸಿ ಬಂದಷ್ಟೆ ವೇಗವಾಗಿ ಪೆವಿಲಿಯನ್ ಸೇರಿದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರು ಮತ್ತೊಂದೆಡೆ ಇನ್ನಿಂಗ್ಸ್ ಕಟ್ಟಿದ ತಿಲಕ್ ವರ್ಮಾ ತಂಡಕ್ಕೆ ಆಸರೆಯಾದರು. ಏಕಾಂಗಿಯಾಗಿ ಬ್ಯಾಟ್ ಬೀಸಿದ ತಿಲಕ್ 34 ಎಸೆತಗಳಲ್ಲಿ 2 ಬೌಂಡರಿ, 5 ಸಿಕ್ಸರ್ ಸಹಿತ 62 ರನ್ ಕಲೆಹಾಕಿ ನಿರ್ಗಮಿಸಿದರು. ಇವರ ನಂತರ ಬಂದ ಮತ್ಯಾರಿಂದಲೂ ಉತ್ತಮ ಇನ್ನಿಂಗ್ಸ್ ಕಂಡುಬರಲಿಲ್ಲ. ಉಳಿದಂತೆ ಹಾರ್ದಿಕ್ ಪಾಂಡ್ಯ 20, ಜಿತೇಶ್ ಶರ್ಮಾ 27, ಶಿವಂ ದುಬೆ 1, ಅರ್ಶ್‌ದೀಪ್ ಸಿಂಗ್ 4, ವರುಣ್ ಚಕ್ರವರ್ತಿ ಡಕ್‌ಔಟ್, ಬುಮ್ರಾ ಖಾತೆ ತೆರೆಯದೇ ಉಳಿದರು. ಭಾರತ ತಂಡ ಅಂತಿಮವಾಗಿ 19.1 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 162 ರನ್ ಗಳಿಸಿತು.

ಆಫ್ರಿಕಾ ಪರ ಬಾರ್ಟ್‌ಮನ್ ಪ್ರಮುಖ 4 ವಿಕೆಟ್ ಕಬಳಿಸಿದರು. ಲುಂಗಿ ಎನ್‌ಗಿಡಿ, ಮಾರ್ಕ್ರೋ ಏನ್ಸನ್ ಹಾಗೂ ಸಿಪಾಮ್ಲಾ ತಲಾ 2 ವಿಕೆಟ್ ಪಡೆದು ಮಿಂಚಿದರು.

ಇದಕ್ಕೂ ಮೊದಲು ಬ್ಯಾಟ್ ಮಾಡಿದ ಹರಿಣ ಪಡೆಗೆ ಡಿಕಾಕ್ ಭದ್ರ ಬುನಾದಿ ಹಾಕಿದರು. 46 ಎಸೆತ ಎದುರಿಸಿ 5 ಬೌಂಡರಿ, 7 ಸಿಕ್ಸರ್ ಸಹಿತ 90 ರನ್ ಗಳಿಸಿ ಔಟಾದರು. ಹೆನ್ರಿಕ್ಸ್ 8, ನಾಯಕ ಐಡೆನ್ ಮಾರ್ಕ್ರಂ 29, ಡೆವಾಲ್ಡ್ ಬ್ರೆವೀಸ್ 14 ರನ್ ಗಳಿಸಿ ಪೆವಿಲಿಯನ್ ಸೇರಿದರು.

ಕೊನೆಯಲ್ಲಿ ಒಂದಾದ ಡೇವಿಡ್ ಮಿಲ್ಲರ್ ಅಜೇಯ 20 ಹಾಗೂ ಡೆವೋನ್ ಫೆರ್ರಿರಾ ಅಜೇಯ 30 ರನ್‌ಗಳಿಸಿ ತಂಡದ ಮೊತ್ತ 200 ಗಡಿದಾಡಲು ಸಹಕರಿಸಿದರು. ಆ ಮೂಲಕ ದಕ್ಷಿಣ ಆಫ್ರಿಕಾ ತಂಡ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 213 ರನ್ ಗಳಿಸಿ ಟೀಂ ಇಂಡಿಯಾಗೆ 214 ರನ್‌ಗಳ ಬೃಹತ್ ಗುರಿ ನೀಡಿತ್ತು. ಭಾರತ ತಂಡದ ಪರ ವರುಣ್ ಚಕ್ರವರ್ತಿ 2 ವಿಕೆಟ್ ಹಾಗೂ ಅಕ್ಷರ್ ಪಟೇಲ್ 1 ವಿಕೆಟ್ ಪಡೆದರು.

# ಇಂದಿನಿಂದ ರಾಜ್ಯದಾದ್ಯಂತ 'ಪದ್ಮಗಂಧಿ' ಬಿಡುಗಡೆ

ಮೈಸೂರು, ಡಿ.11(ಜಿಎ)– ನಟ ಸುಚೇಂದ್ರ ಪ್ರಸಾದ್ ನಿರ್ದೇಶನದ 'ಪದ್ಮಗಂಧಿ' ಚಲನಚಿತ್ರವು ಡಿ.12ರಂದು ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರದ ನಟಿ ಪರಿಪೂರ್ಣ ಚಂದ್ರಶೇಖರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಮಲದ ಹೂವಿನ ಬಗ್ಗೆ ಸಿನಿಮಾ ಕಥೆ ಇರುವುದು ವಿಶೇಷ. ಗುರು ಶಿಷ್ಯರ ಭಾಂದವ್ಯದ ಬಗ್ಗೆಯೂ ತಿಳಿಸುತ್ತದೆ. ನಾಲ್ಕು ಹಾಡುಗಳಿವೆ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆದಿದೆ. ಎಲ್ಲ ವಯೋಮಾನದವರು ನೋಡುವ ಉತ್ತಮ ಚಿತ್ರವಿದ್ದು, ಪ್ರೊ.ಎಸ್.ಆರ್.ಲೀಲಾ ಅವರ ಪರಿಕಲ್ಪನೆ ಹಾಗೂ ನಿರ್ಮಾಣದಲ್ಲಿ ಚಿತ್ರ ಮೂಡಿಬಂದಿದೆ. ಕನ್ನಡ, ಸಂಸ್ಕೃತ ಹಾಗೂ ಹಿಂದಿ ಭಾಷೆಯಲ್ಲಿ ತಯಾರಾಗಿದ್ದು, ಸದ್ಯ ಕನ್ನಡದಲ್ಲಿ ಬಿಡುಗಡೆಯಾಗುತ್ತಿದೆ ಎಂದು ತಿಳಿಸಿದರು.

# ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್‌ಗಳ ಹೆಚ್ಚುವರಿ ಭೋಜನ ವೆಚ್ಚದ ಬಿಲ್‌ಗಳಿಗೆ ಕಡಿವಾಣ

**ವಿದ್ಯಾರ್ಥಿಗಳ ಅನ್ನ ಕಿತ್ತುಕೊಳ್ಳುವ ಕ್ರಮ : ಭೀಮ ಬಳಗ ಆಕ್ರೋಶ**

ಮೈಸೂರು, ಡಿ.11(ಜಿಎ)– ಮೈಸೂರು ವಿವಿ ಅಧೀನದ ಕಾಲೇಜು ವಿದ್ಯಾರ್ಥಿ ನಿಲಯಗಳ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಹೆಚ್ಚುವರಿ ಭೋಜನ ವೆಚ್ಚದ ಬಿಲ್‌ಗಳನ್ನು ಭರಿಸಲು ಅವಕಾಶವಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿರುವುದು ಈ ಸಮುದಾಯಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ದೊಡ್ಡ ಹೊಡೆತ ನೀಡಲಿದೆ ಎಂದು ಭೀಮ ಬಲ ಬಳಗದ ಸಂಚಾಲಕ ಎಂ.ಎಸ್. ಪರಮಾನಂದ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಅನ್ನ ಕಿತ್ತುಕೊಳ್ಳುವ ಕ್ರಮವಾಗಿದೆ ಮಹಾತ್ವಾಕಾಂಕ್ಷೆಯಿಂದ ಓದಲು ಬರುವವರಿಗೆ ದೊಡ್ಡ ಸಮಸ್ಯೆಯುಂಟು ಮಾಡುತ್ತದೆ. ವಸತಿ ನಿಲಯಗಳು ಇರುವ ಕಾರಣಕ್ಕಾಗಿಯೇ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ತಮ್ಮ ಮನೆಯ ಬಡತನ ಮರೆತು ಇಲ್ಲಿ ಬಂದು ಓದಿ ವಿದ್ಯಾವಂತರಾಗುತ್ತಿದ್ದಾರೆ. ಈ ಮೂಲಕ ಉದ್ಯೋಗ ಪಡೆದು ಘನತೆಯ ಜೀವನ ನಡೆಸುತ್ತಿದ್ದಾರೆ. ಮೈಸೂರು ವಿವಿ ವ್ಯಾಪ್ತಿಗೆ ಇಂತಹ 14 ಹಾಸ್ಟೆಲ್ ಬರಲಿದ್ದು, ಈಗ ಇವರ ಅನ್ನ ಕಿತ್ತುಕೊಂಡು ಮೆಸ್ ಬಿಲ್ ಕಟ್ಟಬೇಕೆಂದು ತಾಕೀತು ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಸಮಾಜ ಕಲ್ಯಾಣ ಇಲಾಖೆ ಪ್ರಯೋಜನವಿಲ್ಲದ ತನ್ನ ಎಲ್ಲಾ ಕಲ್ಯಾಣ ಕಾರ್ಯಗಳನ್ನು ಬದಿಗಿಟ್ಟು, ತುರ್ತಾಗಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಅನ್ನ, ಆಹಾರ ಕೊಡುವ ಕೆಲಸಕ್ಕೆ ಮುಂದಾಗಬೇಕೆಂದು. ಇಲ್ಲದಿದ್ದರೆ ವಿವಿ ಆವರಣದಲ್ಲಿ ದೊಡ್ಡ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಗಣೇಶ್‌ಮೂರ್ತಿ, ಕಾರ್ತಿಕ್ ಮರಿಯಪ್ಪ, ಹೂವಿನ ಸಿದ್ದು ಉಪಸ್ಥಿತರಿದ್ದರು.

# ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಆಡಳಿತಾಧಿಕಾರಿ ನೇಮಕ

ಮೈಸೂರು, ಡಿ.11–ಮೈಸೂರು ವಿಶ್ವವಿದ್ಯಾಲಯ ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಮಹದೇವಸ್ವಾಮಿ ಅವರನ್ನು ಆಡಳಿತಾಧಿಕಾರಿಯಾಗಿ 6 ತಿಂಗಳ ಅವಧಿಗೆ ನೇಮಕ ಮಾಡಿದ್ದು, ಅವರು ಸಂಘದ ಆಡಳಿತ ಮಂಡಳಿ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ.

# ರಾಜೀವ್‌ಕುಮಾರ್‌ಗೆ ಪಿಎಚ್.ಡಿ ಪದವಿ



ಮೈಸೂರು, ಡಿ.11– ಡಾ. ಶಿವಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ರಾಜೀವ್ ಕುಮಾರ್ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

# ಇಂದು ಮೈಸೂರಲ್ಲಿ ಹನುಮ ಜಯಂತಿ

## ಪೊಲೀಸರಿಂದ ಪಥ ಸಂಚಲನ ಮೂಲಕ ಸುರಕ್ಷಾ ಖಾತರಿ



ಮೈಸೂರು, ಡಿ.11– ಮೈಸೂರಲ್ಲಿ ಶುಕ್ರವಾರ ಹನುಮ ಜಯಂತಿ ಆಯೋಜಿಸಿರುವ ಹಿನ್ನೆಲೆಯಲ್ಲಿ ಪೊಲೀಸರು ಇಂದು ಪಥ ಸಂಚಲನ ನಡೆಸಿ, ಬಂದೋಬಸ್ತ್‌ಗೆ ಸಜ್ಜಾಗಿರುವ ಸಂದೇಶ ಸಾರಿದರು.

ಹನುಮ ಜಯಂತಿಗೆ ಬಿಗಿ ಬಂದೋಬಸ್ತ್‌ಗೆ ಸಿದ್ಧತೆ ಮಾಡಿಕೊಂಡಿದ್ದು, ಈ ಯೋಜನೆಯ ಭಾಗವಾಗಿ ಕೋಟೆ ಆಂಜನೇಯ ದೇವಸ್ಥಾನದ ಬಳಿಯಿಂದ ದೊಡ್ಡ ಗಡಿಯಾರ, ಗಾಂಧೀವೃತ್ತ, ಚಿಕ್ಕಗಡಿಯಾರ, ದೇವರಾಜ ಅರಸು ರಸ್ತೆ ನಾರಾಯಣ ಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ ಮೂಲಕ ಗನ್‌ಹೌಸ್ ವೃತ್ತದವರೆಗೆ ಸುಮಾರು 5 ಕಿ.ಮೀ ಪಥ ಸಂಚಲನ ನಡೆಸಲಾಯಿತು.

ಡಿಸಿಪಿಗಳಾದ ಬಿಂದುಮಣಿ, ಸುಂದರ್ ರಾಜ್, ಎಸಿಪಿಗಳು, ಇನ್ಸ್‌ಪೆಕ್ಟರ್‌ಗಳು, ಸಬ್‌ಇನ್ಸ್‌ಪೆಕ್ಟರ್‌ಗಳು, ಕಮಾಂಡೋ ಪಡೆ, ಕೆಎಸ್‌ಆರ್‌ಪಿ ತುಕಡಿಗಳು ಸೇರಿದಂತೆ ಒಟ್ಟು 485 ಪೊಲೀಸರು ಮಾರ್ಗ ಪಥ ಸಂಚಲನದಲ್ಲಿ ಭಾಗವಹಿಸಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**12.12.2025 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ**

■ **ಸರ್ಕಾರಿ ನೇಚರ್ ಕ್ಯೂರ್ ಮತ್ತು ಯೋ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ :** ಪ್ರಿಸಮ್ –2025 ಕುರಿತು ಫ್ಯಾಕಲ್ಟಿ ಡೆವಲಪ್‌ಮೆಂಟ್ ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಗೌರವ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್. ಹೆಗಡೆ, ಡಾ. ರಾಮಚಂದ್ರ ಶೆಟ್ಟಿ, ಆದಿಚುಂಚನಗಿರಿ ಮೆಡಿಕಲ್ ಯೂನಿವರ್ಸಿಟಿ ವಿಶ್ರಾಂತ ಕುಲಪತಿ ಡಾ. ಎಂ.ಎ. ಶೇಖರ್, ಅಧ್ಯಕ್ಷತೆ : ಸರ್ಕಾರಿ ನೇಚರ್ ಕ್ಯೂರ್ ಮತ್ತು ಯೋ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಪ್ರಿನ್ಸಿಪಾಲ್ ಡಾ. ಕೆ.ವಿ. ವೆಂಕಟಕೃಷ್ಣ, ಸ್ಥಳ: ಸರ್ಕಾರಿ ನೇಚರ್ ಕ್ಯೂರ್ ಮತ್ತು ಯೋ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಬೆಳಗ್ಗೆ 9 ರಿಂದ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಯ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಿಸ್ವಾಮಿ, ಸಮಾರೋಪ ನುಡಿ : ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಸನ್ಮಾನಿತರು : ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಅನಿಲ್ ಎಸ್. ಕರಭೀಮಗೋಳ, ಸ್ಥಳ: ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಹುಟ್ಟಿನಿಂದ 16 ವರ್ಷ ವಯಸ್ಸಿನ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಗಾಗಿ ಮಕ್ಕಳಿಗೆ ಸ್ವರ್ಣಪ್ರಾಶನ ಕಾರ್ಯಕ್ರಮ. ಕಿಟಿಬ ಕುಷ್ಟ (Psoriasis). ಋತು ಚಕ್ರದ ಸಮಸ್ಯೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್ ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯುಪ್ರೆಷರ್ ಸುಜೋಕ್ ಕಪ್ಪಿಂಗ್ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿ ಮಠ, ವಿ.ವಿ. ಮೊಹಲ್ಲಾ, ಬೆಳಗ್ಗೆ 10 ರಿಂದ.

■ **ಮೈಸೂರು ಮಕ್ಕಳ ಕೂಟ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಬಾಲಕಿಯರ ಪದವಿಪೂರ್ವ ಕಾಲೇಜು** : ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಮಾಜಿ ಸಂಸದ ಪ್ರತಾಪ್ ಸಿಂಹ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎನ್. ಭಾರತಿ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಶ್ರೀಮತಿ ನಯನಕುಮಾರಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ

■ **ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ, ಹಿರಿಯ ನಾಗರಿಕರ ಮಂಡಳಿ :** ಸಂಸ್ಥಾಪನಾ ದಿನಾಚರಣೆ, ಉದ್ಘಾಟನೆ : ಕಾವೇರಿ ಆಸ್ಪತ್ರೆ ಸಂಸ್ಥಾಪಕ ಡಾ. ಜಿ.ಆರ್. ಚಂದ್ರಶೇಖರ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸನ್ಮಾನಿತರು : ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಡಾ. ಬಿ.ವಿ. ಶಿವಮೂರ್ತಿ, ಸಿ.ಎಲ್. ಶ್ರೀಕಂಠಯ್ಯ, ಹುಚ್ಚೇಗೌಡ, ಶ್ರೀಮತಿ ಮಂಜುಳ ಡಿ. ರಾಜಶೇಖರ್, ಉಪಸ್ಥಿತರು : ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ. ಎಚ್.ಎಂ. ನಾಗರಾಜು, ಅಧ್ಯಕ್ಷತೆ : ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಛೇರ್ಮನ್ ಎಸ್.ವಿ. ಗೌಡಪ್ಪ, ಸ್ಥಳ: ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮೀಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಹೆರಿಟೇಜ್ ರೌಂಡ್ ಟೇಬಲ್, ಮೈಸೂರು ಹೆರಿಟೇಜ್ ಲೇಡೀಸ್ ಸರ್ಕಲ್ :**ಕಿಡ್ಸ್ ಕಾರ್ನಿವಲ್, ಮುಖ್ಯ ಅತಿಥಿಗಳು : ನಗರ ಪೊಲೀಸ್ ಕಮೀಷನರ್ ಶ್ರೀಮತಿ ಸೀಮಾ ಲಾಟ್ಕರ್, ಗೌರವ ಅತಿಥಿಗಳು : ಕೆ. ಪರಮೇಶ, ಕೆ.ಎಸ್. ರಾಘವೇಂದ್ರ, ಶಿವಕುಮಾರ್, ಅರುಣ್‌ಗೌಡ, ನಮ್ರತಾ ಶೆಣೈ, ನಾಗಶ್ರೀ ನಿಖಿಲೇಶ್, ಸ್ಥಳ: ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು :** ರಂಗರತ್ನ 2025 ಪ್ರಶಸ್ತಿ ಪ್ರದಾನ ಹಾಗೂ ಅಯಾನ್ ಶಾಂತಿ ಕುಟೀರ ಇಂಗ್ಲೀಷ್ ಅನುವಾದದ ಪುಸ್ತಕ ಬಿಡುಗಡೆ ಸಮಾರಂಭ, ಯುವ ರಂಗಕರ್ಮಿ, ಸಂಶೋಧಕಿ ಹಾಗೂ ಶಿಕ್ಷಕಿ ಡಾ. ಸಹನಾ ಪಿಂಜಾರ ಅವರಿಗೆ 2025ನೇ ಸಾಲಿನ ರಂಗರತ್ನ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು: ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಡಾ. ಯು.ಎ. ಶರತ್ ಅನಂತಮೂರ್ತಿ, ಡಾ. ನ. ರತ್ನರವರ ಅಯಾನ್ ಶಾಂತಿ ಕುಟೀರ ನಾಟಕದ ಇಂಗ್ಲೀಷ್ ಅನುವಾದದ ಪುಸ್ತಕ ಬಿಡುಗಡೆ : ಹಿರಿಯ ರಂಗಕರ್ಮಿ ಪ್ರೊ. ರಾಮೇಶ್ವರಿ ವರ್ಮ, ಸ್ಥಳ : ರಂಗಾಯಣದ ಕಿರುರಂಗ ಮಂದಿರ, ಬೆಳ್ಗೆ 11ಕ್ಕೆ.

■ **ಶ್ರೀಕಾಂತ ಮಹಿಳಾ ಪದವಿಪೂರ್ವ ಕಾಲೇಜು :** ವಾರ್ಷಿಕೋತ್ಸವ ಸಮಾರಂಭ, ಉದ್ಘಾಟನೆ : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಅಧ್ಯಕ್ಷತೆ : ಎನ್. ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಕಾರ್ಯದರ್ಶಿ ಎ.ಜಿ. ರಘು, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಕಾಲೇಜು ಪ್ರಾಂಶುಪಾಲರಾದ ಶ್ರೀಮತಿ ವಿ. ಸುಬ್ಬಲಕ್ಷ್ಮಿ, ಸ್ಥಳ: ಶ್ರೀಕಾಂತ ವಿದ್ಯಾಸಂಸ್ಥೆ ಆವರಣ, ಮಧ್ಯಾಹ್ನ 3ಕ್ಕೆ

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ–ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ: ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ–ಪ್ರೊ. ಮ. ವರದರಾಜು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ –ಮೂಳೆ ಮತ್ತು ಕೀಲು ತೊಂದರೆಗಳ ಚಿಕಿತ್ಸೆಯಲ್ಲಿನ ಇತ್ತೀಚಿನ ಬೆಳವಣಿಗೆಗಳು ಮತ್ತು ಇಲಿಜರೋವ್ ಚಿಕಿತ್ಸಾ ವಿಧಾನ ಕುರಿತು ಡಾ. ಶೇಷಗಿರಿ ವಿ. ಅವರೊಂದಿಗೆ ಮಾತುಕತೆ ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ವತಿಯಿಂದ ಹಮ್ಮಿಕೊಂಡಿರುವ ಮಾನಸಿಕ ಆರೋಗ್ಯ ಕಾರ್ಯಕ್ರಮಗಳು ಕುರಿತು ತಿಳಿಸಿಕೊಡಲಿದ್ದಾರೆ ಡಾ.ಮಲ್ಲಿಕಾ ಬಿ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ನಾಮಗಿರಿ ಪೇಟೈ ಕೃಷ್ಣನ್ – ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ– ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಲಿತಾ ಹರಿಪ್ರಿಯಾ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮತ್ತು ಪ್ಲೇಸ್‌ಮೆಂಟ್ ಸೆಲ್‌ಗಳ ಪ್ರಾಮುಖ್ಯತೆ ಕುರಿತು ಕಾಲೇಜು ಶಿಕ್ಷಣ ಇಲಾಖೆಯ ವೃತ್ತಿಮಾರ್ಗದರ್ಶನ ವಿಭಾಗದ ನೋಡಲ್ ಅಧಿಕಾರಿಯಾಗಿದ್ದ ಪ್ರೊಫೆಸರ್ ಎ. ನಾರಾಯಣ ಪ್ರಸಾದ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 6.50 ಕೃಷಿರಂಗ, ಹವಾಮಾನ ಮಿತ್ರ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ–ಚದುರಂಗ ಅವರ ಸರ್ವಮಂಗಳ ಕಾದಂಬರಿಗೆ 75 ವರ್ಷ ಈ ಕುರಿತು ಚದುರಂಗ ಅವರ ಮಗ ಪ್ರೊ. ವಿಕ್ರಂ ರಾಜೇ ಅರಸ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ ಕೀರ್ತಿ ಎಸ್. ಬೈಂದೂರು, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಂಬೆ ಎಸ್. ಜಯಶ್ರೀ – ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ತೋಟಗಾರಿಕೆ ವಿಭಾಗದ ನಿರ್ದೇಶಕ ಎನ್.ಎಂ. ಶಿವಶಂಕರಪ್ಪ, ಪ್ರಾಧ್ಯಾಪಕ ಹುಸ್ಕೂರು ಅಂಬಿಕಾ ಶಿವನಂಜಪ್ಪ ಅವರಿಂದ ವಚನಗಳಲ್ಲಿ ಆಹಾರ ಪದ್ಧತಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕದ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಸ್ಥಳ:ಜೆಎಸ್‌ಎಸ್ (ಪ್ರಧಾನ) ವಿದ್ಯಾರ್ಥಿ ನಿಲಯ, ಆರ್‌ಟಿಓ ಸರ್ಕಲ್ ಹತ್ತಿರ, ಸಂಜೆ 5.30ಕ್ಕೆ.

■ **ಶ್ರೀ ಕಾಲಭೈರವ ಬಳಗ ಟ್ರಸ್ಟ್ :** ಶ್ರೀ ಕಾಲಭೈರವ ಜನ್ಮಾಷ್ಟಮಿ ಮತ್ತು ಗಿರಿಜಾ ಕಲ್ಯಾಣ ಮಹೋತ್ಸವ, ಬೆಳಗ್ಗೆ 9 ರಿಂದ ಹೋಮ ಮಹಾಸಂಕಲ್ಪ, ಶ್ರೀ ಕಾಲಭೈರವಸ್ವಾಮಿ ಮೂಲಮಂತ್ರ ಹೋಮ, ಕಬ್ಬಿನ ಹಾಲಿನಿಂದ ಅಭಿಷೇಕ, ವಡಾರ್ಚನೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿತರಣೆ, ಸಂಜೆ 5.30 ರಿಂದ ಶ್ರೀ ಕಾಲಭೈರವಸ್ವಾಮಿ ಉತ್ಸವ, ಸಂಜೆ 6.30 ರಿಂದ ವಿದುಷಿ ಇಂದುಶ್ರೀ ಎನ್. ಮತ್ತು ತಂಡದವರಿಂದ ಭರತನಾಟ್ಯ, ಸಂಜೆ 7.30 ರಿಂದ ರುದ್ರಾಕ್ಷೀ ಅರ್ಚನೆ, ರಾತ್ರಿ 8ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: 1ನೇ ಕ್ರಾಸ್, ಆರ್.ಟಿ.ನಗರ.

■ **ಗಾನಭಾರತೀ :** ವಿದುಷಿ ಶ್ರೀಮತಿ ವೀಣಾ ಚೊಕ್ಕಮ್ಮ ಅವರ ನೆನಪಿನಲ್ಲಿ ಎಸ್.ಆರ್. ಕುಮುದಾ ಸಂಸ್ಮರಣಾ ಕಾರ್ಯಕ್ರಮ, ವಿದುಷಿ ರಕ್ಷಿತಾ ರಮೇಶ್ ಅವರಿಂದ ವೀಣೆ, ವಿದ್ವಾನ್ ಅದಮ್ಯ ರಮಾನಂದ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನ:** ಶ್ರೀ ಸೀತಾರಾಮರ ಕಲ್ಯಾಣ ಮಹೋತ್ಸವ, ಸಂಜೆ 5.30 ರಿಂದ ಕುಮಾರಿ ಹರ್ಷಿತಾ ಎನ್. ರಾಜು ಅವರಿಂದ ಸುಗಮ ಸಂಗೀತ, ಸಂಜೆ 7 ರಿಂದ ರಕ್ಷಿತ್ ಪ್ರಸಾದ್ ಮತ್ತು ತಂಡದವರಿಂದ ಮ್ಯಾಂಡೋಲಿನ್ ವಾದನ, ಸ್ಥಳ: ಅರಮನೆ ಕೋಟೆ ಉತ್ತರ ಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನ.

■ **ಸಮತೆಂತೋ ರಂಗ ತಂಡ :** ಸಮತೆಂತೋ ರಂಗ ಸಂಭ್ರಮ, ರಂಗಕರ್ಮಿ ಪ್ರಸನ್ನ ಹೆಗ್ಗೋಡು ಅವರಿಂದ ಎಚ್.ಎಸ್. ಉಮೇಶ್ ಅವರ ಹೊಸ ನಾಟಕ ಕೃತಿಗಳಾದ 'ದುಡ್ಡಿನ ದೇವರು' 'ಮಂಟಿಲ' ಮತ್ತು 'ಅವನ ಆಳು ಮಾಟ್ಟಿ' ಬಿಡುಗಡೆ, ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ ಅವರಿಂದ ಸಮತೆಂತೋವಿನ ಯೂಟ್ಯೂಬ್‌ಗೆ ಚಾಲನೆ, ಅಧ್ಯಕ್ಷತೆ : ಹಿರಿಯ ರಂಗಕಲಾವಿದೆ ರಾಮೇಶ್ವರಿ ವರ್ಮಾ, ಟಿ.ಪಿ.ಕೈಲಾಸಂ ಅವರ 'ಫುಲ್ ಫಿಲ್ ಮೆಂಟ್' ನಾಟಕವನ್ನು ನ.ರತ್ನ ಕನ್ನಡಕ್ಕೆ ತಂದಿರುವ 'ಗುರಿಮುಟ್ಟು' ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ.

■ **ಮೈಸೂರು ಇಂಗ್ಲೀಷ್ ಥಿಯೇಟರ್ ಫೆಸ್ಟಿವಲ್ :** ಉದ್ಘಾಟನೆ : ಕಲ್ಪ ಹೆರಿಟೇಜ್ ಟ್ರಸ್ಟ್‌ನ ಡಾ. ವಿ.ಆರ್. ಅನಿಲ್‌ಕುಮಾರ್, ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್, ಕಲಾಸುರುಚಿ ಕಲಾವಿದರಿಂದ 'ಟು ಫಾದರ್ಸ್' ನಾಟಕ ಪ್ರದರ್ಶನ, ಸ್ಕ್ರಿಪ್ಟ್ : ಸುಂದರ್ ಸಾರುಕ್ಕೈ, ನಿರ್ದೇಶನ : ಬದರಿನಾರಾಯಣ್, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6.30 ರಿಂದ.

■ **ಸಾಧನಾ ಮಂದಿರ, ಮೈಸೂರು :** ಸರಸ್ವತಿ ಪೂಜೆ ಮಾಡುವ ಬಗ್ಗೆ ವಿಶೇಷ ತರಬೇತಿ, ಸ್ವಾಮಿ ಹಂಸಾ ನಂದ ಅವರಿಂದ. ಸಂಜೆ 6.30 ರಿಂದ ಶ್ರೀರಾಮಪುರ 2ನೇ ಹಂತದಲ್ಲಿರುವ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಸಂಜೆ 7 ರಿಂದ ಮೈಸೂರು ಯೋಗಾಲಯ, ವಿವೇಕಾನಂದ ನಗರ ಎಸ್‌ಬಿಎಂ ಲೇಔಟ್.

ಮೈಸೂರು ಮಿತ್ರ




# ಹೈಕೋರ್ಟ್ ತಡೆಯಾಜ್ಞೆ ಮೇರೆಗೆ ಮೈಸೂರಿನ ಯೂನಿಟಿ ಮಾಲ್
# ನಿರ್ಮಾಣ ಕಾಮಗಾರಿ ಸ್ಥಗಿತ

● ಯೂನಿಟಿ ಮಾಲ್ ಜಾಗ ತಮಗೆ ಸೇರಿದ್ದು; ಪ್ರಮೋದಾ ದೇವಿ ವಾದ ● 2 ವಾರದೊಳಗೆ ಉತ್ತರಿಸಲು ಸರ್ಕಾರಕ್ಕೆ ನೋಟಿಸ್ ● ನೀಲಿ ನಕ್ಷೆ, ತ್ರಿಡಿ ಡೈಮೆನ್ಷನ್ ಸಿದ್ಧ ● ಕಬ್ಬಿಣ, ಜಲ್ಲಿ, ಎಂ.ಸ್ಯಾಂಡ್ ಶೇಖರಣೆ


ಪ್ರಮೋದಾದೇವಿ


ಯದುವೀರ್


ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದ ಎಂ.ಜಿ.ರಸ್ತೆಗೆ ಸೇರಿಕೊಂಡಂತೆ ನಿರ್ಮಾಣವಾಗುತ್ತಿದ್ದ ಯೂನಿಟಿ ಮಾಲ್ ಜಾಗಕ್ಕೆ ಎತ್ತರದ ತಡೆಗೋಡೆ ನಿರ್ಮಾಣ ಮಾಡಿರುವುದು.

ಮೈಸೂರು, ಡಿ.11(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನ (ದೊಡ್ಡಕೆರೆ ಮೈದಾನ) ದಲ್ಲಿ ನಿರ್ಮಾಣ ವಾಗುತ್ತಿದ್ದ ಯೂನಿಟಿ ಮಾಲ್ ನಿರ್ಮಾಣಕ್ಕೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದು, ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಮಾಲ್ ಕಾಮಗಾರಿ ಸಂಪೂರ್ಣ ಸ್ಥಗಿತಗೊಂಡಿದೆ.

ದಸರಾ ವಸ್ತುಪ್ರದರ್ಶನದ ಮೈದಾನ ಎಂ.ಜಿ. ರಸ್ತೆಯ ದಕ್ಷಿಣಾಭಿಮುಖವಾಗಿ ಯೂನಿಟಿ ಮಾಲ್ ನಿರ್ಮಾಣ ಮಾಡಲು ಎಲ್ಲಾ ತಯಾರಿ ನಡೆದಿತ್ತು. ನೂರಾರು ಟನ್ ಕಬ್ಬಿಣ, ಜಲ್ಲಿ ಸೇರಿದಂತೆ ನಿರ್ಮಾಣಕ್ಕೆ ಅಗತ್ಯವಿರುವ ಎಲ್ಲಾ ವಸ್ತುಗಳನ್ನು ಶೇಖರಣೆ ಮಾಡಲಾಗಿದೆ. ಪಿಪಿಪಿ ಮಾದರಿಯಲ್ಲಿ ಯೂನಿಟಿ ಮಾಲ್ ನಿರ್ಮಾಣ ಗುತ್ತಿಗೆ ಪಡೆದಿರುವ ಕಂಪನಿ ಅಲ್ಲೇ ತಾತ್ಕಾಲಿಕ ಕಚೇರಿ ಕೂಡ ತೆರೆದಿದ್ದು, 6.5 ಎಕರೆ ಪ್ರದೇಶದ ಸುತ್ತಲೂ ಕಬ್ಬಿಣದ ಶೀಟ್‌ಗಳನ್ನು ಅಳವಡಿಸಿದೆ. ಒಳಗೆ ಯಾರೂ ಪ್ರವೇಶಿಸದಂತೆ ಬಂದೋಬಸ್ತ್ ಮಾಡಲಾಗಿದೆ. ಯೂನಿಟಿ ಮಾಲ್ ನೀಲ ನಕ್ಷೆ ಹಾಗೂ ತ್ರಿಡಿ ಡೈಮೆನ್ಷನ್ ಕೂಡ ಸಿದ್ಧವಾಗಿದೆ. ಒಂದೆರಡು ದಿನದಲ್ಲಿ ಸಿವಿಲ್ ಕಾಮಗಾರಿ ಆರಂಭವಾಗಬೇಕಿತ್ತು. ಅಷ್ಟರಲ್ಲಿ ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ.

ಈ ಜಾಗ ತಮಗೆ ಸೇರಿದೆ ಎಂದು ಪ್ರಮೋದಾ ದೇವಿ ಒಡೆಯರ್ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಕುರುಬಾರಹಳ್ಳಿ ಸರ್ವೆ ನಂಬರ್ 1 ಮತ್ತು 4 ರಲ್ಲಿರುವ ಕೆಲವು ಭೂಮಿ ನಮಗೆ ಸೇರಿದೆ. ಅಲ್ಲದೆ ಯೂನಿಟಿ ಮಾಲ್ ನಿರ್ಮಾಣ ಮಾಡುತ್ತಿರುವ ದೊಡ್ಡಕೆರೆ ಮೈದಾನದ 6.5 ಎಕರೆ ಪ್ರದೇಶಕ್ಕೆ ನಾವು ಮಾಲೀಕರಾಗಿದ್ದೇವೆ ಎಂದು ಹೈಕೋರ್ಟ್ ಮೊರೆ ಹೋಗಿದ್ದರು.

ಈ ಸಂಬಂಧ ನ್ಯಾಯಮೂರ್ತಿ ಎಸ್. ಸುನೀಲ್ ದತ್ತ ಯಾದವ್ ಅವರು, ಯೂನಿಟಿ ಮಾಲ್ ನಿರ್ಮಾಣಕ್ಕೆ ತಡೆಯಾಜ್ಞೆ ನೀಡಿ, ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ನವೆಂಬರ್ 28, 2025 ರಂದು ಆದೇಶ ನೀಡಿದ್ದಾರೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಮೈಸೂರು ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ನೋಟಿಸ್ ಜಾರಿ ಮಾಡಿ ಎರಡು ವಾರದೊಳಗೆ ಉತ್ತರ ನೀಡುವಂತೆ ಸೂಚನೆ ನೀಡಿದೆ.

## ಹೈಕೋರ್ಟ್ ತಡೆಯಾಜ್ಞೆ ತೆರವಿಗೆ ಸೂಕ್ತ ಕ್ರಮ

ಯೂನಿಟಿ ಮಾಲ್ ನಿರ್ಮಾಣ ಸಂಬಂಧ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ತೆರವು ಮಾಡಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದು. ತಡೆಯಾಜ್ಞೆ ನೀಡಿರುವ ನ್ಯಾಯಾಲಯದ ಆದೇಶವನ್ನು ಸದ್ಯ ಪಾಲಿಸಲಾಗುವುದು. ದೊಡ್ಡಕೆರೆ ಮೈದಾನದ 80 ಎಕರೆ ಆಸ್ತಿ ಸರ್ಕಾರಿ ಸ್ವಾಮ್ಯದಲ್ಲಿದ್ದು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ಉಪ ಗುತ್ತಿಗೆ ನೀಡಲಾಗಿದೆ. ಸರ್ಕಾರದ ವಶದಲ್ಲಿರುವ 80 ಎಕರೆ ಭೂಮಿಯಲ್ಲಿ 6.5 ಎಕರೆಯನ್ನು ಯೂನಿಟಿ ಮಾಲ್ ನಿರ್ಮಾಣಕ್ಕಾಗಿ ನೀಡಲಾಗಿದ್ದು, ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಗೆ ಅಧಿಕೃತವಾಗಿ ಹಸ್ತಾಂತರ ಮಾಡಲಾಗಿದೆ. ಈಗ ನಿರ್ಮಾಣವಾಗುತ್ತಿರುವ 6.5 ಎಕರೆ ಭೂಮಿಯ ಮೇಲೆ ರಾಜ್ಯ ಸರ್ಕಾರ ಸಂಪೂರ್ಣವಾಗಿ ಕಾನೂನುಬದ್ಧ ಮಾಲೀಕತ್ವ ಹೊಂದಿದೆ. ಈ ಸಂಬಂಧ ನಮ್ಮಲ್ಲಿ ಅಧಿಕೃತ ದಾಖಲಾತಿಗಳಿವೆ. ಇದರಿಂದ ಇದು ಖಾಸಗಿಯವರಿಗೆ ಸೇರಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. ಹೈಕೋರ್ಟ್‌ನ ಮುಂದಿನ ವಿಚಾರಣೆ ಸಂದರ್ಭದಲ್ಲಿ 6.5 ಎಕರೆ ಮಾಲೀಕತ್ವ ಸಂಬಂಧ ದಾಖಲಾತಿ ಸಮೇತ ಉತ್ತರವನ್ನು ನ್ಯಾಯಾಲಯದಲ್ಲಿ ಸಲ್ಲಿಸಲಾಗುವುದು. ಈ ಮೂಲಕ ತಡೆಯಾಜ್ಞೆ ರದ್ದು ಮಾಡುವಂತೆ ಹೈಕೋರ್ಟ್‌ಗೆ ಮನವಿ ಮಾಡಲಾಗುವುದು.



–ಜಿ. ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು.

## 2 ವಾರದೊಳಗೆ ನ್ಯಾಯಾಲಯಕ್ಕೆ ಲಿಖಿತ ಉತ್ತರ ಸಲ್ಲಿಕೆ

ಹೈಕೋರ್ಟ್ ಪಾರ್ಟಿ ಮಾಡಿರುವ ಇಲಾಖೆಯ ಅಧಿಕಾರಿಗಳು ಎರಡು ವಾರದೊಳಗೆ ನ್ಯಾಯಾಲಯಕ್ಕೆ ದಾಖಲಾತಿ ಸಹಿತ ಉತ್ತರ ನೀಡಲಿದ್ದಾರೆ. ಈ ಜಾಗ ಸರ್ಕಾರಕ್ಕೆ ಸೇರಿದೆ ಎಂದು ಆಯಾ ಅಧಿಕಾರಿ ಗಳು ಲಿಖಿತ ವಾದವನ್ನು ನ್ಯಾಯಾಲಯದಲ್ಲಿ ಮಂಡಿಸಲಿದ್ದಾರೆ. ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಕೇಂದ್ರ ಸರ್ಕಾರದ ನ್ಯಾಷನಲ್ ಪ್ರಾಜೆಕ್ಟ್ ಕನ್ಸ್ಟ್ರಕ್ಷನ್ ಕಾರ್ಪೋರೇಷನ್ (ಎನ್‌ಪಿಸಿಸಿ) ಗೆ 6.5 ಎಕರೆ ಭೂಮಿ ಹಸ್ತಾಂತರ ಮಾಡಿತ್ತು. ಎನ್‌ಪಿಸಿಸಿ ಯೂನಿಟಿ ಮಾಲ್ ನಿರ್ಮಾಣ ಮಾಡಲು ಎನ್‌ಎಸ್‌ಎಲ್ ಎಂಬ ಖಾಸಗಿ ಕಂಪನಿಗೆ ವಹಿಸಿತ್ತು. ಆದರೆ ಈಗ ಹೈ ಕೋರ್ಟ್ ತಡೆಯಾಜ್ಞೆ ನೀಡಿದೆ. ಈಗ ಸರ್ಕಾರದ ಸಂಬಂಧಿಸಿದ ಅಧಿಕಾರಿಗಳು ನ್ಯಾಯಾಲಯಕ್ಕೆ ಉತ್ತರ ನೀಡಲಿದ್ದಾರೆ. ನ್ಯಾಯಾಲಯ ಈ ಸಂಬಂಧ ಯಾವ ತೀರ್ಮಾನ ಕೈಗೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

- ಮೊಹಮ್ಮದ್ ಖಲೀಂ, ಎಇಇ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

## ನ್ಯಾಯಾಲಯದಲ್ಲಿ ಶೀಘ್ರ ಇತ್ಯರ್ಥ ಅಸಾಧ್ಯ

ಮೈಸೂರಿನ ಲ್ಯಾನ್ಸ್ ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ ಸೇರಿದಂತೆ ಇತರೆ ಪ್ರಕರಣಗಳಂತೆ ಯೂನಿಟಿ ಮಾಲ್ ನಿರ್ಮಾಣವೂ ವರ್ಷಾನುಗಟ್ಟಲೆ ನೆನೆಗುದಿಗೆ ಬಿಳುವ ಸಾಧ್ಯತೆ ಇದೆ. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆಯನ್ನು ನೆಲಸಮ ಗೊಳಿಸಿ ಹೊಸದಾಗಿ ನಿರ್ಮಾಣ ಮಾಡುವ ಬಗ್ಗೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿದ್ದು, ಇನ್ನೂ ವಿಚಾರಣಾ ಹಂತದಲ್ಲಿದೆ. ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಿಂದ ಮೈಸೂರು ಡೈರಿವರೆಗೆ ರಸ್ತೆ ಅಗಲೀಕರಣ ಮಾಡುವ ಕಾಮಗಾರಿ ಸಹ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಇರ್ವಿನ್ ರಸ್ತೆಯದ್ದು ಇದೇ ಕಥೆ! ಯಾವುದಾದರೊಂದು ಪ್ರಕರಣ ಕೋರ್ಟ್ ಕಟಕಟೆ ಹತ್ತಿದರೆ, ಸದ್ಯಕ್ಕೆ ಅದು ಇತ್ಯರ್ಥವಾಗುವುದಿಲ್ಲ. ಯೂನಿಟಿ ಮಾಲ್ ಪರಿಸ್ಥಿತಿ ಕೂಡ ಇದೇ ಆಗಲಿದೆಯೇ ಎಂಬ ಪ್ರಶ್ನೆ ಎದುರಾಗಿದೆ.

## ನಕ್ಕರೆ ಅದೇ ಸ್ವರ್ಗ

ಗುಂಡ (ಸ್ವಾಮೀಜಿ ಬಳಿ ಹೋಗಿ) : ಸ್ವಾಮಿಗಳೇ ನೀವು ಕೊಟ್ಟ ತಾಯಿತದ ಪ್ರಭಾವ ಚೆನ್ನಾಗಿದೆ.

ಸ್ವಾಮೀಜಿ : ತಾಯಿತ ಕಟ್ಟಿದ ಮೇಲೆ ನಿಮ್ಮ ಹೆಂಡತಿಗೆ ಹಿಡಿದಿದ್ದ ಭೂತ ಓಡಿ ಹೋಯಿತು ತಾನೇ...

ಗುಂಡ : ಇಲ್ಲಾ ಸ್ವಾಮಿಗಳೇ... ನನ್ನ ಹೆಂಡತಿಯೇ ಓಡಿ ಹೋದಳು.

ಮೈಸೂರು ಮಿತ್ರ

ಶುಕ್ರವಾರ, 12 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ..........

ಸಮಯ ಒಳ್ಳೆಯದೇ ಆಗಲಿ ಕೆಟ್ಟದೇ ಆಗಲಿ ಒಂದು ಪಾಠವನ್ನಂತು ಕಲಿಸೇ ಕಲಿಸುತ್ತದೆ. ಒಳ್ಳೆಯ ಸಮಯದಲ್ಲಿ ಎಲ್ಲರೂ ನಮ್ಮವರಾಗಿದ್ರೆ, ಕೆಟ್ಟ ಸಮಯದಲ್ಲಿ ನಮ್ಮವರೇ ಬೇರೆಯವರಾಗಿ ಬದಲಾಗಿರುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೋಗುವುದು ಮೂಡಿದ ಹೊತ್ತು, ಹೋಗೋದಿಲ್ಲ ಆಡಿದ ಮಾತು.

## ನಿಮ್ಮ ಪತ್ರಗಳು

### ಅನೈರ್ಮಲ್ಯ, ಅಸುರಕ್ಷತೆಯಿಂದ ಕೂಡಿರುವ ಬಯಲು ರಂಗಮಂದಿರ

ಮಾನ್ಯರೆ,



ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಬಯಲು ರಂಗ ಮಂದಿರ ಪ್ರಸ್ತುತ ಅನೈರ್ಮಲ್ಯ, ಅಸುರಕ್ಷತೆಯಿಂದ ಕೂಡಿದೆ. ಪ್ರತಿದಿನ ಮಕ್ಕಳು, ವಿದ್ಯಾರ್ಥಿಗಳು ಮತ್ತು ಯುವ ಕ್ರೀಡಾಪಟುಗಳು ತರಬೇತಿಗೆ ಇಲ್ಲಿಗೆ ಬರುತ್ತಾರೆ. ಆದರೆ ಬಯಲು ರಂಗ ಮಂದಿರ ಸರಿಯಾದ ನಿರ್ವಹಣೆಯಿಲ್ಲದೆ ಕಸ ಕಡ್ಡಿಗಳಿಂದ ತುಂಬಿ ಕೊಂಡಿದೆ. ಇದರ ನಿರ್ವಹಣೆ ಯಾರು ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು. ಈ ಸ್ಥಿತಿಯಲ್ಲಿ ಬಿಟ್ಟು ಹೊರಹೋಗುವ ಕಾರ್ಯಕ್ರಮ ಆಯೋಜಕರು ಜವಾಬ್ದಾರರೇ ಅಥವಾ ಉಸ್ತುವಾರಿ ವಹಿಸಿರುವ ಪ್ರಾಧಿಕಾರವು ಮೂಲಭೂತ ಸ್ವಚ್ಛತೆ ಮತ್ತು ಸುರಕ್ಷತಾ ಮಾನದಂಡಗಳನ್ನು ಕಾಯ್ದುಕೊಳ್ಳಲು ವಿಫಲವಾಗಿದೆಯೇ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟು ಮಾಡುವಂತಾಗಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ.

–ಕಾಳಜಿಯುಳ್ಳ ನಾಗರಿಕ, ಮೈಸೂರು.

### ಸರ್ಕಾರಿ ಬಸ್ ಪ್ರಯಾಣ ದರ ಇಳಿಕೆಯಾಗಲಿ

ಮಾನ್ಯರೆ,



ಗುಂಡ್ಲುಪೇಟೆ ತಾಲೂಕಿನಲ್ಲಿರುವ ಐತಿಹಾಸಿಕ ಕ್ಷೇತ್ರ ಹಿಮವದ್ ಶ್ರೀ ಗೋಪಾಲಸ್ವಾಮಿ ಬೆಟ್ಟಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ಬಸ್ಸಿನಲ್ಲಿ ಬೆಟ್ಟದ ತಪ್ಪಲಿನಿಂದ ತೆರಳಬೇಕಾಗಿದೆ. ಖಾಸಗಿ ವಾಹನಗಳಿಗೆ ಪ್ರವೇಶವಿರುವುದಿಲ್ಲ. ಇದು ಉತ್ತಮ ವ್ಯವಸ್ಥೆ ಎಂದು ಹೇಳಬಹುದು. ಆದರೆ ಬಸ್ಸಿನ ಪ್ರಯಾಣದರ ಮಾತ್ರ ಎರಡು ಕಡೆ ಸೇರಿ 70 ರೂ.ಗಳನ್ನು ನಿಗದಿ ಮಾಡಿರುವುದರ ಬಗ್ಗೆ ಪ್ರವಾಸಿಗರು ಮತ್ತು ನಮಗೆ ಬೇಸರ ತಂದಿದೆ. ಇತ್ತೀಚೆಗೆ ನಾನು ಕೂಡ ಈ ಕ್ಷೇತ್ರಕ್ಕೆ ತೆರಳಿದ್ದೆ. ಇಲ್ಲಿಯ ಪ್ರಯಾಣದ ಟಿಕೆಟ್ ದರವನ್ನು ಕೇಳಿ ಶಾಕ್ ಆಯಿತು. ಇದನ್ನು ಹಗಲು ದರೋಡೆ ಎಂದು ಕರೆಯಬಹುದು. ಬೆಟ್ಟದ ತಪ್ಪಲಿನಿಂದ ದೇವಸ್ಥಾನಕ್ಕೆ ಕೇವಲ 4 ರಿಂದ 5 ಕಿಲೋಮೀಟರ್ ಪ್ರಯಾಣ ಆಗಬಹುದು. ಆದರೆ ಇಷ್ಟು ದುಬಾರಿ ದರವನ್ನು ನೀಡಿ ದೇವಾಲಯಕ್ಕೆ ತೆರಳಬೇಕಾ ಎಂದು ಕೇಳುವಂತಾಗಿದೆ. ಇಷ್ಟೊಂದು ದುಡ್ಡು ನೀಡಿದರೂ ಬಸ್ಸುಗಳು ಪ್ರವಾಸಿಗರಿಂದ ತುಂಬಿದ್ದು ಬಸ್ಸಿನಲ್ಲಿ ನಿಂತುಕೊಂಡೆ ಪ್ರಯಾಣ ಮಾಡಬೇಕಾಗುತ್ತದೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟವರು ಪ್ರಯಾಣ ದರವನ್ನು ಕಡಿಮೆ ಮಾಡಬೇಕೆಂದು ತಮ್ಮಲ್ಲಿ ಮನವಿ.

–ಪರಶಿವಮೂರ್ತಿ ಎನ್.ಪಿ. ನಂಜೇಪುರ. ಸರಗೂರು ತಾಲೂಕು.

### ಕೊಳೆತು ನಾರುತ್ತಿರುವ ಚರಂಡಿ



ಮಾನ್ಯರೆ,

ಮೈಸೂರಿನ ಶ್ರೀರಾಂಪುರದ ಎರಡನೇ ಹಂತದ ಎಸ್‌ಬಿಎಂ ಕಾಲೋನಿಯಲ್ಲಿ ಒಳಚರಂಡಿ ಕಸ ಕಡ್ಡಿಗಳಿಂದ ತುಂಬಿಕೊಂಡಿದ್ದು ಕೊಳೆತು ನಾರುತ್ತಿದೆ. ಇದರಿಂದ ನೀರು ಸರಾಗವಾಗಿ ಹರಿಯದ ಕಾರಣ ಕೆಟ್ಟ ವಾಸನೆ ಬರುತ್ತಿರುವುದಲ್ಲದೆ, ಸೊಳ್ಳೆಗಳು, ವಿಷಜಂತುಗಳ ಆವಾಸಸ್ಥಾನವಾಗಿದೆ. ಈ ಕಾರಣದಿಂದಾಗಿ ಸುತ್ತಮುತ್ತಲು ವಾಸಿಸುವ ಜನಗಳಿಗೆ ತುಂಬಾ ತೊಂದರೆಯಾಗಿದೆ. ಕೊಳಚೆ ನೀರಿನ ವಾಸನೆಯಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವ ಭೀತಿ ಉಂಟಾಗಿದೆ. ಸಂಬಂಧಪಟ್ಟವರು ಈ ಚರಂಡಿ ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕೆಂದು ಮನವಿ.


–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

### ಅಧಿಕಾರ ಹಸ್ತಾಂತರದ ಮೇಲಾಟಗಳು ಮುಗಿದು, ಅಭಿವೃದ್ಧಿಗೆ ಶ್ರಮಿಸುವಂತಾಗಲಿ

ಮಾನ್ಯರೆ,

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಹೊಸ 'ಪರ್ವ' ಆರಂಭವಾಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ಹಾಸನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಹೇಳಿದ್ದಾರೆ. ಇದು ಅವರು ಸದ್ಯದಲ್ಲೇ ಮುಖ್ಯಮಂತ್ರಿ ಆಗುವ ಸೂಚನೆ ಎಂದು ರಾಜಕೀಯ ಪಂಡಿತರು ಹೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವ ಸುಳಿವು ಸಿಕ್ಕಿರುವುದರಿಂದಲೇ ಮಾಜಿ ಸಚಿವ ಕೆ.ಎನ್.ರಾಜಣ್ಣ ಡಿಕೆಶಿ ಸಚಿವ ಸಂಪುಟದಲ್ಲಿ ನನಗೆ ಸಚಿವ ಸ್ಥಾನ ಬೇಡ ಎಂದು ಹೇಳಿದ್ದಾರೆ. ಅಲ್ಲದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹ ರಾಜಕೀಯ ಎಂಬುದು ನಮ್ಮಪ್ಪನ ಮನೆಯ ಆಸ್ತಿ ಅಲ್ಲ ಎಂದು ಹೇಳಿದ್ದಾರೆ. ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದರೆ ಡಿಕೆಶಿ ಸದ್ಯದಲ್ಲೇ ರಾಜ್ಯದ ಮುಖ್ಯಮಂತ್ರಿ ಆಗುವ ಸೂಚನೆ ಇರಬಹುದು ಎನಿಸುತ್ತದೆ. ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದಲೂ ಅಧಿಕಾರ ಹಸ್ತಾಂತರಕ್ಕೆ ನಡೆಯುತ್ತಿರುವ ಮೇಲಾಟಗಳು ಮುಗಿದು, ರಾಜ್ಯದ ಅಭಿವೃದ್ಧಿಗೆ ಶ್ರಮಿಸುವಂತಾಗಲಿ.


–ಬೂಕನಕರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

## ಅನುಭಾವದ ಚಿಂತನೆಗಳು

# ಕನಸುಗಳನ್ನು ನನಸಾಗಿಸುವುದು ಹೇಗೆ?



> “ ನಿಮ್ಮ ಕನಸುಗಳು ಗತಕಾಲದ ಜೀವನದ ಅನುಭವದಿಂದ ಬರುವುದರಿಂದ, ಸ್ವಲ್ಪ ಸಮಯದವರೆಗೆ ನಿಮ್ಮ ಕನಸನ್ನು ಮಲಗಿಸಿ. ಗತಿಸಿ ಹೋದ ಕಾಲವು ನಮ್ಮ ಭವಿಷ್ಯದ ಮೇಲೆ ಯಾವ ಪರಿಣಾಮವನ್ನೂ ಬೀರಬಾರದು. ಇಲ್ಲವಾದಲ್ಲಿ, ನಾವು ಗತಿಸಿ ಹೋದದ್ದನ್ನೇ ಮರುಬಳಕೆ ಮಾಡಿ, ಅದನ್ನೇ ಭವಿಷ್ಯವೆಂದು ಭಾವಿಸುತ್ತೇವೆ. ಬಹುಪಾಲು ಜನರ 'ಭವಿಷ್ಯ'ದ ಕಲ್ಪನೆಯೆಂದರೆ, ಗತಿಸಿ ಹೋದ ಸಮಯದ ತುಣುಕೊಂದನ್ನು ತೆಗೆದುಕೊಂಡು, ಅದನ್ನು ಚೆಂದಗೊಳಿಸಿ, ಅದನ್ನೇ ಸ್ವಲ್ಪ ಸುಧಾರಿಸಿದ ಭವಿಷ್ಯವೆಂದು ಭಾವಿಸುವುದು.

ಈಗೀಗ ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಇಟ್ಟುಕೊಂಡಿರುತ್ತಾರೆ ಮತ್ತು ಅವೆಲ್ಲ ನನಸಾಗಲಿ ಎಂದು ಆಶಿಸುತ್ತಾರೆ. ಆದರೆ ಜಗತ್ತನ್ನು ಎದುರಿಸಲು ಹೆದರುತ್ತಾರೆ. ಕಾಲೇಜಿನ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ, ತಿರಸ್ಕಾರದ ಭಯವಿಲ್ಲದೆ, ಕನಸುಗಳನ್ನು ನನಸಾಗಿಸಿಕೊಳ್ಳುವುದು ಹೇಗೆಂದು ಯೋಚಿಸುತ್ತಿರುತ್ತಾರೆ. ಸಾಮಾನ್ಯವಾಗಿ ನಿದ್ದೆ ಮಾಡುವಾಗ ಜನರು ಕನಸು ಕಾಣುತ್ತಾರೆ. ಆದರೆ ನಾನು ಹೇಳುವುದು, ಸ್ವಲ್ಪ ಸಮಯದವರೆಗೆ ನಿಮ್ಮ ಕನಸನ್ನು ಮಲಗಿಸಿ. ಈಗಲೇ ಕನಸು ಕಂಡು, ನೀವು ಜಗತ್ತಿನಲ್ಲಿ ಮುಂದೇನಾಗುವಿರಿ ಎಂಬುದನ್ನು ನಿಶ್ಚಯಿಸಿಬಿಡಬೇಡಿ. ಏಕೆಂದರೆ ಅದಕ್ಕೆ ಇದು ಸರಿಯಾದ ಸಮಯವಲ್ಲ.

**ಕನಸುಗಳು ಗತಕಾಲದ ಜೀವನದ ಅನುಭವವಷ್ಟೇ**

ಮುಂದಿನ 3–4 ವರ್ಷಗಳ ಅವಧಿಯಲ್ಲಿ, ನೀವು ಪೂರ್ತಿಯಾಗಿ ಬೇರೆಯೇ ವ್ಯಕ್ತಿಯಾಗಿರುತ್ತೀರಿ. ವಾಸ್ತವದಲ್ಲಿ, ಇಂದಿನಿಂದ ನಾಳೆಯೊಳಗೆ ಕೂಡ, ಗಮನಾರ್ಹವಾದ ಬದಲಾವಣೆ ಅಲ್ಲವಾದರೂ, ಏನಾದರೂ ಬದಲಾಗಿರುತ್ತದೆ. ಆದ್ದರಿಂದ ನೀವು, ನನ್ನ ಜೀವನದಲ್ಲಿ ನಾನೇನು ಮಾಡಲಿ ಎಂದು ಇವತ್ತು ಯೋಚಿಸಬೇಕಿಲ್ಲ. ಹಾಗೆ ಮಾಡಿದರೆ, ನೀವೊಂದು ಚಿಕ್ಕದಾದ ಹಾಗೂ ಪರಿಣಾಮಕಾರಿಯಲ್ಲದ ಕನಸನ್ನು ಕಾಣುವಿರಿ ಅಷ್ಟೆ. ಸದ್ಯಕ್ಕೆ, ನಿಮಗೆಷ್ಟಾಗುವುದೋ ಅಷ್ಟನ್ನು ಗ್ರಹಿಸಿ ಜೀರ್ಣಿಸಿಕೊಳ್ಳುವುದೇ ನಿಮ್ಮ ಕೆಲಸ. ಪೂರ್ಣವಾಗಿ ವಿಕಸಿತರಾದ ಮನುಷ್ಯರಾಗಿ ಬೆಳೆಯಿರಿ – ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಬೌದ್ಧಿಕವಾಗಿ. ಎಲ್ಲಾ ಹಂತಗಳಲ್ಲೂ, ನೀವು ವಿಕಸಿತರಾಗಬೇಕು, ನಿಮಗೆಷ್ಟು ಸಾಧ್ಯವೋ ಅಷ್ಟು.

**ಸ್ಪರ್ಧೆಗೆ ಸನ್ನದ್ಧ**

ಹಾಗೆ ನೋಡಿದರೆ, ಕನಸು ಅಥವಾ ಮಹತ್ವಾಕಾಂಕ್ಷೆ ಎಂದು ಹೇಳಿದಾಗ, ನೀವು ಒಂದು ಸ್ಪರ್ಧೆಯ ಬಗ್ಗೆ ಯೋಚಿಸುತ್ತಿದ್ದೀರಿ ಎಂದು ಅರ್ಥ. ಇಂದಿನ ದಿನಗಳಲ್ಲಿ ಇದನ್ನು ಇಲಿ ಓಟ (ಪೈಪೋಟಿ) ಎಂದು ಕರೆಯುತ್ತಾರೆ. ನೀವು ಪೈಪೋಟಿಗೆ ನಿಂತರೆ, ಇದು ಯಾರಿಗಿಂತ ಯಾರು ಉತ್ತಮರು ಎಂಬುದರ ಬಗ್ಗೆಯಾಗುತ್ತದೆ. ಅರ್ಹತೆ ಪಡೆಯಲು ನೀವೊಬ್ಬ ಇಲಿಯಾಗಿ ರಬೇಕು! ವಿಕಸನ ಕ್ರಿಯೆಯಲ್ಲಿ ಇದೊಂದು ಭಾರಿ ಹಿನ್ನಡೆಯ ಹೆಜ್ಜೆ. ಗೆದ್ದರೆ, ನೀವೊಬ್ಬ ಸೂಪರ್ ಇಲಿಯಾಗುತ್ತೀರೇನೋ, ಆದರೂ ಒಂದು ಇಲಿಯಷ್ಟೇ. ನಾನು ಮುಂದೆ ಎಲ್ಲಿರುತ್ತೇನೆ, ಬೇರೆಯವರಿಗಿಂತ ಎಷ್ಟು ಮುಂದೆ ಅಥವಾ ಹಿಂದೆ ಇರುತ್ತೇನೆ ಎಂಬ ರೀತಿಯಲ್ಲಿ ಯೋಚಿಸಬೇಡಿ. ನಿಮಗೆಷ್ಟಾಗುವುದೋ ಅಷ್ಟನ್ನು ಗ್ರಹಿಸಿ ಜೀರ್ಣಿಸಿಕೊಳ್ಳುವ ಸಮಯ ಇದು. ಇದು ಮಾವಿನ ಹಣ್ಣುಗಳನ್ನು ಕೊಯ್ಯುವ ಸಮಯವಲ್ಲ. ಚಿಗುರುತ್ತಿರುವ ಹೂವುಗಳನ್ನು ಕಿತ್ತು, ಸೊಂಪಾಗಿ ಬೆಳೆಯುವ ಸಮಯ.

ನೀವೊಂದು ಸ್ಪರ್ಧೆಯನ್ನು ಗೆಲ್ಲಬೇಕಾದರೆ, ಅದು ಕೇವಲ ನೀವು ಆಸೆ ಪಟ್ಟಿರಿ ಎಂಬ ಕಾರಣಕ್ಕೆ ಆಗಿ ಬಿಡುವುದಿಲ್ಲ. ನೀವು ಅದಕ್ಕಾಗಿ ಸೂಕ್ತವಾದ ವಾಹನವನ್ನು ನಿರ್ಮಿಸಬೇಕು. ನಿಮ್ಮ ಬಳಿಯಿರುವುದು ಹಳೇ ಮಾಡೆಲ್ ಮಾರುತಿ ಕಾರ್ ಅಂದುಕೊಳ್ಳೋಣ, ಆದರೆ, ನಿಮಗೆ ಫಾರ್ಮುಲಾ ಒನ್ ಗೆಲ್ಲುವ ಆಲೋಚನೆ! ಎಷ್ಟು ಬೇಕಾದರೂ ಕನಸು ಕಾಣಿ – ಹೇಗೆ ಲೂಯಿಸ್ ಹಾಮಿಲ್ಟನ್ (ರೇಸ್ ಕಾರ್ ಚಾಲಕ) ನಿಮ್ಮನ್ನು ಹಿಂದಿಕ್ಕಲು ಪ್ರಯತ್ನಿಸುತ್ತಿದ್ದ, ಹೇಗೆ ನೀವು ನಿಮ್ಮ ಮಾರುತಿ ಕಾರ್‌ನಲ್ಲಿ ಅವನಿಗಿಂತ ಮುಂದೆ ಹೋದಿರಿ ಇತ್ಯಾದಿ. ಅದರ ಬಗ್ಗೆಯೆಲ್ಲಾ ಕನಸು ಕಾಣಬಹುದು. ಆದರೆ, ಟ್ರ್ಯಾಕ್‌ಗೆ ಹೋಗಿ, ನೀವೇನಾದರೂ ಇದನ್ನು ಪ್ರಯತ್ನಿಸಿದರೆ, ನಿಮ್ಮ ಮಾರತಿ ಕಾರ್–ನ ನಾಲ್ಕು ಚಕ್ರಗಳು ನಾಲ್ಕು ದಿಕ್ಕಿನಲ್ಲಿ ಹಾರಿಹೋಗುತ್ತವೆ ಅಷ್ಟೆ.

ಸ್ಪರ್ಧೆಯನ್ನು ಗೆಲ್ಲಲು ಪ್ರಯತ್ನಿಸಬೇಡಿ. ಅದಕ್ಕಾಗಿ ಸಾಕಷ್ಟು ಉತ್ತಮವಾದ ವಾಹನವನ್ನು ನಿರ್ಮಿಸಿ ಇದೇ ಅತ್ಯಂತ ಮುಖ್ಯವಾದ ವಿಷಯ. ಸ್ಪರ್ಧೆಯನ್ನು ಗೆಲ್ಲುವ ಚಿಂತನೆಯ ಅರ್ಥ – ನೀವು ಹಿಂದಕ್ಕೆ ತಿರುಗಿ ನನ್ನ ಹಿಂದೆ ಇನ್ಯಾರೋ ಇರುವವರು ಎಂದು ನೋಡುವುದು. ನಿಮ್ಮ ಸುತ್ತಲೂ ಮೂರ್ಖರ ಹಿಂಡಿದ್ದು, ನೀವು ಸ್ಪರ್ಧೆಯನ್ನು ಗೆಲ್ಲುತ್ತಿದ್ದರೆ, ನೀವು ಸ್ವಲ್ಪ ಲೇಸಾದ ಮೂರ್ಖರಾಗಿರುತ್ತೀರಿ, ಅಷ್ಟೆ. ಎಂದಿಗೂ ಈ ರೀತಿಯಲ್ಲಿ ವಿಚಾರಮಾಡಬೇಡಿ. ಇಂದು ಇಡೀ ಮಾನವತೆಯೇ 'ಬೇರೆಯವರಿಗಿಂತ ಉತ್ತಮವಾಗಿರಬೇಕು' ಎಂಬ ಹಂಬಲದ ತಪ್ಪಾದ ದಿಕ್ಕಿನಲ್ಲಿ ಓಡುತ್ತಿದೆ. ಇದು ನಿಮ್ಮನ್ನು ಸದಾಕಾಲ ಸಂಘರ್ಷದ ಸ್ಥಿತಿಯಲ್ಲಿಟ್ಟಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಬೇರೆಯವರ ವಿಫಲತೆಯನ್ನು ನೋಡಿ ಸಂತೋಷ ಪಟ್ಟರೆ, ಅದೊಂದು ರೋಗವೇ ಸರಿ.

**ನಿಮ್ಮ ಕನಸುಗಳ ಆಚೆ**

ಜಗತ್ತಿನಲ್ಲಿ ನೀವು ಮಾಡಬೇಕಾದದ್ದು ಏನು? ಅತ್ಯಂತ ಅಗತ್ಯವಾದದ್ದನ್ನು ನೀವು ಮಾಡಬೇಕು, ಜಗತ್ತಿನ ಪ್ರಸ್ತುತ ಪರಿಸ್ಥಿತಿಗೆ ಸಂಬಂಧವೇ ಇಲ್ಲದ ನಿಮ್ಮ ಯಾವುದೋ ಶೋಕಿಯ ಕೆಲಸವನ್ನಲ್ಲ. ಹಾಗಾದರೆ, ಅದನ್ನು ಮಾಡುವುದರಿಂದ ಆಗುವ ಪ್ರಯೋಜನವೇನು? ಬಹಳ ಮಂದಿ, ತಮ್ಮ ಶೋಕಿ ಕೆಲಸವನ್ನು ಮಾಡಿ, ಜಗತ್ತನ್ನು ಅನೇಕ ರೀತಿಯಲ್ಲಿ ಆಗಲೇ ನಾಶಪಡಿಸಿದ್ದಾರೆ. ಅಗತ್ಯವಾದದ್ದನ್ನು ನಾವು ಸಂತೋಷದಿಂದ ಮಾಡಬಹುದಾದರೆ, ನಾವು ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತೇವೆ; ಮತ್ತು ಜನರು ಒಟ್ಟಾಗಿ ಸೇರಿ ಆ ಚಟುವಟಿಕೆಯನ್ನು ಬೆಂಬಲಿಸುತ್ತಾರೆ ನಂತರ, ಬೇರೆಲ್ಲವೂ ನಡೆಯುತ್ತದೆ.

ನಿಮ್ಮ ಕನಸುಗಳು ಗತಕಾಲದ ಜೀವನದ ಅನುಭವದಿಂದ ಬರುವುದರಿಂದ, ಸ್ವಲ್ಪ ಸಮಯದವರೆಗೆ ನಿಮ್ಮ ಕನಸನ್ನು ಮಲಗಿಸಿ. ಗತಿಸಿ ಹೋದ ಕಾಲವು ನಮ್ಮ ಭವಿಷ್ಯದ ಮೇಲೆ ಯಾವ ಪರಿಣಾಮವನ್ನೂ ಬೀರಬಾರದು. ಇಲ್ಲವಾದಲ್ಲಿ, ನಾವು ಗತಿಸಿ ಹೋದದ್ದನ್ನೇ ಮರುಬಳಕೆ ಮಾಡಿ, ಅದನ್ನೇ ಭವಿಷ್ಯವೆಂದು ಭಾವಿಸುತ್ತೇವೆ. ಬಹುಪಾಲು ಜನರ 'ಭವಿಷ್ಯ'ದ ಕಲ್ಪನೆಯೆಂದರೆ, ಗತಿಸಿ ಹೋದ ಸಮಯದ ತುಣುಕೊಂದನ್ನು ತೆಗೆದುಕೊಂಡು, ಅದನ್ನು ಚೆಂದಗೊಳಿಸಿ, ಅದನ್ನೇ ಸ್ವಲ್ಪ ಸುಧಾರಿಸಿದ ಭವಿಷ್ಯವೆಂದು ಭಾವಿಸುವುದು.

ಭವಿಷ್ಯವು ಹೊಸದಾಗಿ ಸಂಭವಿಸಬೇಕು. ನಿಮಗೆ ಯಾವುದರ ಬಗ್ಗೆ ಕನಸು ಕಾಣಲು ಸಾಧ್ಯವಾಗಲಿಲ್ಲವೋ, ಅಂತಹದೇನಾದರು ನಿಮ್ಮ ಜೀವನದಲ್ಲಿ ನಡೆಯಲಿ ಎಂಬುದೇ ನಿಮಗೆ ನನ್ನ ಆಶೀರ್ವಾದ. ನೀವು ಊಹಿಸಲಸಾಧ್ಯವಾದದ್ದು ನಡೆಯಬೇಕು. ನೀವು ಕಂಡಿರುವ ಕನಸು ನನಸಾದರೆ, ಅದರಲ್ಲೇನಿದೆ? ನಿಮಗೇನು ತಿಳಿದಿದೆಯೋ, ಅದೇ ಆದರೆ, ಅದೊಂದು ಸಾಧಾರಣ ಜೀವನ. ನಿಮಗೆ ಕಲ್ಪಿಸಿಕೊಳ್ಳಲಾಗದಂತಹದೇನಾದರೂ ನಿಮ್ಮ ಜೀವನದಲ್ಲಿ ಸಂಭವಿಸಲಿ – ಆಗ ಮಾತ್ರ, ನಿಮ್ಮ ಜೀವನವು ಸಡಗರಭರಿತವಾಗಿರುತ್ತದೆ. ನಿಮ್ಮ ಕನಸುಗಳನ್ನು ಇಲ್ಲವಾಗಿಸಿ. ನಿಮ್ಮ ಕನಸುಗಳು ನುಚ್ಚುನೂರಾಗಲಿ. ಹಾಗಾದಾಗ, ನಿಮ್ಮ ಸಂಪೂರ್ಣ ಸಾಮರ್ಥ್ಯಕ್ಕೆ ಬೆಳೆಯಲು ನೀವು ಹಂಬಲಿಸುವಿರಿ.

(ಸದ್ಗುರುಗಳು ಒಬ್ಬ ಯೋಗಿ, ಅನುಭಾವಿ ಹಾಗೂ ದಾರ್ಶನಿಕ. isha.sadhguru.org/in/kn)
(ಸದ್ಗುರುಗಳ ಇತರ ಪುಸ್ತಕ/ವಿವರಗಳಿಗೆ ಸಂಪರ್ಕಿಸಿ – kannadapublications@ishafoundation.org)

## ಡಿ.14, ಮೈಸೂರಲ್ಲಿ 33ನೇ ಕ್ಯಾರಲ್ ಗಾಯನ ಸ್ಪರ್ಧೆ

### 12 ಹಂತಗಳಲ್ಲಿ ಸ್ಪರ್ಧೆ, 3500 ಮಂದಿ ಕ್ಯಾರಲ್ ಗಾಯಕರು ಭಾಗಿ



ಸುದ್ದಿಗೋಷ್ಠಿಯಲ್ಲಿ ಕಾರ್ಮೆಲ್ ಕ್ಯಾಥೋಲಿಕ್ ಸಂಘದ ಅಧ್ಯಕ್ಷ ಪ್ರೊ.ಜೋಸೆಫ್ ಮ್ಯಾಥ್ಯೂ ಮಾತನಾಡಿದರು. ಈ ವೇಳೆ ಜಾನ್ಸನ್ ಜೋಸೆಫ್, ಪೌಲ್ ಅಂತೋಣಿ ಉಪಸ್ಥಿತರಿದ್ದರು.

ಮೈಸೂರು, ಡಿ.11(ಜಿಎ)–ಮೈಸೂರಿನ ಕಾರ್ಮೆಲ್ ಕ್ಯಾಥೋಲಿಕ್ ಸಂಘದ ವತಿಯಿಂದ ಡಿ.14ರಂದು ಸಿದ್ಧಾರ್ಥ ನಗರದಲ್ಲಿರುವ ಟೆರೇಶಿಯನ್ ಕಾಲೇಜಿನ ಸಭಾಂಗಣದಲ್ಲಿ 33ನೇ ಕ್ಯಾರಲ್ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಪ್ರೊ.ಜೋಸೆಫ್ ಮ್ಯಾಥ್ಯೂ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾಯನವು ಕ್ರಿಸ್ಮಸ್ ಸಂದರ್ಭದಲ್ಲಿ ಹಾಗೂ 2026ರ ಹೊಸ ವರ್ಷದ ಆಗಮನಕ್ಕೆ ಎಲ್ಲರಿಗೂ ಸಂತೋಷವನ್ನು ಹರಡುವುದರೊಂದಿಗೆ, ಸಂಗೀತದ ಮೂಲಕ ಸಾಮರಸ್ಯ, ಸೌಹಾರ್ದತೆ ಮತ್ತು ಏಕತೆಯನ್ನು ಬೆಸೆಯುವ ಉದ್ದೇಶದಿಂದ ಕಾರ್ಮೆಲ್ ಕ್ಯಾಥೋಲಿಕ್ ಸಂಘವು ಈ ಗಾಯನ ಸ್ಪರ್ಧೆಯನ್ನು 1988ರಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ ಎಂದರು.


ಪ್ರೊ.ಸದೇಬೋಸ್ ಮಾತನಾಡಿ, ಕ್ಯಾರಲ್ ಗಾಯನ ಸ್ಪರ್ಧೆಗಳು ಡಿ.14ರಂದು ಬೆಳಿಗ್ಗೆ 8.30ರಿಂದ ಸಂಜೆ 6.30 ರವರೆಗೆ ನಡೆಯಲಿದೆ. 12 ವಿಭಾಗಗಳಲ್ಲಿ ಸ್ಪರ್ಧೆಯನ್ನು ನಡೆಸಲಾಗುತ್ತಿದ್ದು, ಪೂರ್ವ ಪ್ರಾಥಮಿಕ ಹಂತಗಳಿಂದ ಪ್ರಾರಂಭಿಸಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾಲೇಜುಗಳು, ಧಾರ್ಮಿಕ ಸಂಸ್ಥೆಗಳು, ದೇವಾಲಯಗಳು ಹಾಗೂ ವೃತ್ತಿನಿರತ ಗಾಯಕರು ಸೇರಿದಂತೆ 3500 ಮಂದಿ ಗಾಯಕರು ಕ್ಯಾರಲ್ ಗಾಯನ ಹಾಡಲಿದ್ದಾರೆ. ಈ ಗೀತೆಗಳನ್ನು ಕನ್ನಡ, ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಹಾಡುವರು. ಪ್ರತಿಯೊಂದು ತಂಡಕ್ಕೂ 5ರಿಂದ 6ನಿಮಿಷಗಳ ಕಾಲ ಹಾಡಲು ಅವಕಾಶ ನೀಡಲಾಗುವುದು. ಕ್ಯಾರಲ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆಯುವ ಪ್ರತಿ ವಿಭಾಗಗಳಿಗೆ ಆಕರ್ಷಕ ಪಾರಿತೋಷಕ ಮತ್ತು ನಗದು ಬಹುಮಾನಗಳನ್ನು ನೀಡಲಾಗುವುದು. ಅತ್ಯಂತ ಹೆಚ್ಚು ಅಂಕಗಳನ್ನು ಪಡೆದ ಸಂಸ್ಥೆಗೆ ವಿಶೇಷ ಪಾರಿತೋಷಕವನ್ನೂ ನೀಡಲಾಗುವುದು ಎಂದು ತಿಳಿಸಿದರು.

ಅಂದು ಬೆಳಿಗ್ಗೆ 8.30ಗಂಟೆಗೆ ಸಮಾರಂಭವನ್ನು ಸಿಐಎಎಲ್‌ನ ವ್ಯವಸ್ಥಾಪಕ ನಿರ್ದೇಶಕ ಸುಹಾಸ್ ಅವರು ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷರಾದ ಪ್ರೊ ಜೋಸೆಫ್ ಮ್ಯಾಥ್ಯೂ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮೈಸೂರು ಧರ್ಮಪ್ರಾಂತದ ವಿಶ್ರಾಂತ ಧರ್ಮಾಧ್ಯಕ್ಷರಾದ ಡಾ. ಥಾಮಸ್ ಅಂಟನಿ ವಾಜಪಿಳ್ಳೆ ಅವರು ಶುಭ ಕೋರಲಿದ್ದಾರೆ ಸೆಂಟ್ ಪಾಲ್ ಪ್ರಾಂತದ ಮುಖ್ಯಸ್ಥರಾದ ಹಾಗೂ ಸಂಘದ ಪೋಷಕರಾದ ರೆ.ಗುರು ಆಗಸ್ಟೀನ್ ಪಯ್ಯಂಪಳ್ಳಿ ಸಿಎಂಐ ಮತ್ತು ಕೇನ್ಸ್ ಟೆಕ್ನಾಲಜಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ರಮೇಶ್ ಕುಂಞಕಣ್ಣನ್ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸಮಾರೋಪ ಸಮಾರಂಭ ಸಂಜೆ 6:30ಕ್ಕೆ ನಡೆಯಲಿದ್ದು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂಡಿಇಎಸ್‌ನ ಕಾರ್ಯದರ್ಶಿ ರೆ.ಸ್ವಾಮಿ ಎಡ್ವರ್ಡ್ ವಿಲಿಯಂ ಸಲ್ಡಾನ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ. ಮೈಸೂರಿನ ಜೆಕೆ ಟೈರ್ಸ್ ಮತ್ತು ಇಂಡಸ್ಟ್ರೀಸ್‌ನ ಉಪಾಧ್ಯಕ್ಷ ಈಶ್ವರ ರಾವ್, ಟೆರೇಶಿಯನ್ ಪದವಿ ಕಾಲೇಜಿನ ಪ್ರಾಂಶುಪಾಲರಾದ ಸಿಸ್ಟರ್ ಡಾ. ರೋಹಿಣಿ ಸಿಎಸ್‌ಎಸ್‌ಟಿ ಮತ್ತು ಇನ್ಫೋಸಿಸ್‌ನ ಮಾನವ ಸಂಪನ್ಮೂಲ ಅಧಿಕಾರಿ ಶಾಜಿ ಮ್ಯಾಥ್ಯೂ ಅವರು ವಿಶೇಷ ಅತಿಥಿಗಳಾಗಿರುವರು. ಆಗಮಿಸಲಿದ್ದಾರೆ ಕಾರ್ಮೆಲ್ ಕ್ಯಾಥೋಲಿಕ್ ಸಂಘದ ಅಧ್ಯಕ್ಷರಾದ ಪ್ರೊ ಜೋಸೆಫ್ ಮ್ಯಾಥ್ಯೂ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಹಿತಿಗಾಗಿ ಸಂಘದ ಕಾರ್ಯದರ್ಶಿ ಎಂ.ಕೆ.ಜಾನಿ ಮೊ: 9448576371 ಅವರನ್ನು ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಾನ್ಸನ್ ಜೋಸೆಫ್, ಪೌಲ್ ಅಂತೋಣಿ ಉಪಸ್ಥಿತರಿದ್ದರು.

## ಶ್ರೀರಾಂಪುರ ಲಿಂಗಾಂಬುದಿ ವೃತ್ತದ ಗೋಪುರಕ್ಕೆ ಗಡಿಯಾರ ಅಳವಡಿಸಿ





ಶ್ರೀರಾಂಪುರದ ಲಿಂಗಾಂಬುದಿ ವೃತ್ತದಲ್ಲಿ ಗೋಪುರ ಕಾಮಗಾರಿ ಅಪೂರ್ಣಗೊಂಡಿರುವುದು ಹಾಗೂ ಗೋಪುರದ ಗಡಿಯಾರ ಇಲ್ಲದೇ ಕೇವಲ ಗಡಿಯಾರದ ಸ್ಟಿಕ್ಕರ್ ಅಂಟಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು. ಗೋಪುರದ ಬುಡದಲ್ಲಿ ಗಿಡಗಂಟಿ ಬೆಳೆದಿರುವುದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.11(ಪಿಎಂ)– ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 65ರ ಲಿಂಗಾಂಬುದಿ ವೃತ್ತದಲ್ಲಿ (ಶ್ರೀರಾಂಪುರ) ಗೋಪುರ ನಿರ್ಮಿಸಿ ಕಳೆದ ಒಂದು ವರ್ಷದಿಂದ ಗಡಿಯಾರ ಅಳವಡಿಸದೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ನಿರ್ಲಕ್ಷ್ಯ ವಹಿಸಿದೆ ಎಂಬ ಆರೋಪ ಕೇಳಿಬಂದಿದೆ.

ಶ್ರೀರಾಂಪುರದ 65ನೇ ವಾರ್ಡ್‌ನ ಲಿಂಗಾಂಬುದಿ ವೃತ್ತದಲ್ಲಿ ಎಂಡಿಎ ವತಿಯಿಂದ ಗಡಿಯಾರ ಗೋಪುರ ನಿರ್ಮಿಸಿದ್ದು, ವರ್ಷ ಕಳೆದರೂ ಗಡಿಯಾರವನ್ನು ಅಳವಡಿಸಿಲ್ಲ. ಗಡಿಯಾರ ಇರುವಂತೆ ಕೇವಲ ಸ್ಟಿಕ್ಕರ್ ಅಂಟಿಸಲಾಗಿದೆ. ಜೊತೆಗೆ ಬಾಕಿ ಉಳಿದ ಕೆಲಸವನ್ನು ಸಂಪೂರ್ಣಗೊಳಿಸದೆ ನಿರ್ಲಕ್ಷ್ಯ ಮಾಡಲಾಗಿದೆ ಎಂದು ಶ್ರೀರಾಂಪುರದ ನಾಗರಿಕ ಹಿತರಕ್ಷಣಾ ಸಮಿತಿ (22 ಬಡಾವಣೆಗಳು) ಆರೋಪಿಸಿದೆ.

40 ಲಕ್ಷ ರೂ. ಮೊತ್ತದ ಕಾಮಗಾರಿ ಪೈಕಿ ಇನ್ನು 10 ಲಕ್ಷ ರೂ. ವೆಚ್ಚದ ಕಾಮಗಾರಿ ಬಾಕಿ ಉಳಿದಿದೆ. ಗೋಪುರದ ಕಾಂಕ್ರಿಟ್ ನಿರ್ಮಾಣದಲ್ಲಿ ಗಿಡ ಗಂಟಿ ಬೆಳೆದು ನಿಂತಿದ್ದು, ಸೌಂದರ್ಯೀಕರಣದಿಂದ ಕಂಗೊಳಿಸಬೇಕಿದ್ದ ಈ ಗೋಪುರ ಅರೆಬರೆ ಕಾಮಗಾರಿ ಹಿನ್ನೆಲೆಯಲ್ಲಿ ಪಾಳು ಮಂಟಪದಂತಾಗಿದೆ.

ಸಂಬಂಧಿಸಿದವರನ್ನು ಹಲವು ಬಾರಿ ಭೇಟಿ ಮಾಡಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಶತಮಾನದ ಇತಿಹಾಸ ಹೊಂದಿರುವ ಪ್ರಾಧಿಕಾರದ ಈ ರೀತಿಯ ನಿರ್ಲಕ್ಷ್ಯ ಸರಿಯಲ್ಲ. ಕೂಡಲೇ ಕಾಮಗಾರಿ ಪೂರ್ಣಗೊಳಿಸಿ, ಗಡಿಯಾರ ಅಳವಡಿಸದೇ ಇದ್ದಲ್ಲಿ ಈ ಸಂಬಂಧ ಮುಖ್ಯಮಂತ್ರಿಗಳಿಗೆ ದೂರು ನೀಡುವುದಾಗಿ ಸದರಿ ಸಮಿತಿ ಎಚ್ಚರಿಸಿದೆ.

### ಸುಪ್ರೀಂಕೋರ್ಟ್‌ನಲ್ಲೂ ಪ್ರಜ್ವಲ್‌ಗೆ ಹಿನ್ನಡೆ

## ಅತ್ಯಾಚಾರ ಪ್ರಕರಣ ಬೇರೆ ಕೋರ್ಟ್‌ಗೆ ವರ್ಗಾವಣೆ ಕೋರಿದ್ದ ಅರ್ಜಿ ವಜಾ



ನವದೆಹಲಿ, ಡಿ.11– ಮನೆಗೆಲಸದ ಮಹಿಳೆಯ ಮೇಲೆ ಪದೇ ಪದೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜೀವಾವಧಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸುಪ್ರೀಂ ಕೋರ್ಟ್‌ನಲ್ಲೂ ಭಾರೀ ಹಿನ್ನಡೆಯಾಗಿದೆ.

ತಮ್ಮ ವಿರುದ್ಧದ ಎರಡು ಅತ್ಯಾಚಾರ ಪ್ರಕರಣಗಳ ವಿಚಾರಣೆಯನ್ನು ಬೇರೆ ಕೋರ್ಟ್‌ಗೆ ವರ್ಗಾಯಿಸಲು ಕೋರಿ ಪ್ರಜ್ವಲ್ ರೇವಣ್ಣ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಗುರುವಾರ ವಜಾಗೊಳಿಸಿದೆ.

ತಮ್ಮ ವಿರುದ್ಧ ಬಾಕಿ ಇರುವ ಇನ್ನೂ ಎರಡು ಅತ್ಯಾಚಾರ ಪ್ರಕರಣಗಳ ವಿಚಾರಣೆಯನ್ನು 81ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್‌ನಿಂದ ಬೇರೆ ಕೋರ್ಟ್‌ಗೆ ವರ್ಗಾಯಿಸಬೇಕೆಂದು ಕೋರಿ ಪ್ರಜ್ವಲ್ ರೇವಣ್ಣ ಅರ್ಜಿ ಸಲ್ಲಿಸಿದ್ದರು.

ಪ್ರಜ್ವಲ್ ರೇವಣ್ಣ ಅವರ ಅರ್ಜಿಯನ್ನು ಸುಪ್ರೀಂಕೋರ್ಟ್‌ನ ಸಿಜೆಐ ಪೀಠ ತಿರಸ್ಕರಿಸಿದೆ. ಸಿಜೆಐ ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠ, ಕೆಳ ನ್ಯಾಯಾಲಯದ ಜಡ್ಜ್ ಅವರ ಅಭಿಪ್ರಾಯಗಳು, ಪೂರ್ವಾಗ್ರಹಪೀಡಿತರಾಗಿದ್ದಾರೆ ಎಂಬುದಕ್ಕೆ ಯಾವುದೇ ಆಧಾರ ಇಲ್ಲ ಎಂದು ಹೇಳಿದೆ.

ಪ್ರಸ್ತುತ ಕೇಸ್‌ನಲ್ಲಿ ಹಾಜರುಪಡಿಸುವ ಸಾಕ್ಷ್ಯಗಳ ಆಧಾರದ ಮೇಲೆ ಜಡ್ಜ್ ತೀರ್ಪು ನೀಡಬೇಕೇ ವಿನಃ ಹಿಂದಿನ ಕೇಸ್ ತೀರ್ಪು ಆಧಾರದ ಮೇಲೆ ಅಲ್ಲ ಎಂದು ಹೇಳಿ, ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

ನಾವು ಜಿಲ್ಲಾ ನ್ಯಾಯಾಂಗದ ನೈತಿಕತೆಯನ್ನು ಸಹ ನೋಡಬೇಕು. ಈ ವ್ಯಕ್ತಿ ಸುಪ್ರೀಂಕೋರ್ಟ್‌ಗೆ ಹೋಗಿ ಜಿಲ್ಲಾ ಕೋರ್ಟ್ ವಿರುದ್ಧ ಆದೇಶ ಪಡೆದಿದ್ದಾರೆ ಎಂಬ ಸಂದೇಶ ಕಳಿಸಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಸಿಜೆ ಹೇಳಿದ್ದಾರೆ. ಜಿಲ್ಲಾ ನ್ಯಾಯಾಂಗದ ನೈತಿಕತೆಯನ್ನು ನಾವು ಉನ್ನತ ಮಟ್ಟದಲ್ಲಿ ಇಡಬೇಕು ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*



# ಬೆಳಗಾವಿ ವಿಧಾನಮಂಡಲ ಅಧಿವೇಶನ



# ರಾಜ್ಯದ ವಿವಿಧ ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ!

**● ವಿಧಾನ ಪರಿಷತ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ**
**● ಕಾಲ ಕಾಲಕ್ಕೆ ಭರ್ತಿಗೆ ನಿಯಮಾನುಸಾರ ಕ್ರಮ**

ಬೆಳಗಾವಿ, ಸುವರ್ಣ ವಿಧಾನಸೌಧ, ಡಿ.11(ಕೆಎಂಶಿ)–ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಪರಿಷತ್‌ನಲ್ಲಿ ಇಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಹನುಮಂತ ನಿರಾಣಿ ಪ್ರಸ್ತಾವಕ್ಕೆ ಉತ್ತರಿಸಿದ ಮುಖ್ಯಮಂತ್ರಿ, ಈ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುವುದಾಗಿ ತಿಳಿಸಿದರು.

ಒಳ ಮೀಸಲಾತಿ ಜಾರಿಯಿಂದಾಗಿ ಖಾಲಿ ಹುದ್ದೆಗಳ ಭರ್ತಿ ತಡವಾಗಿದೆ. ಆರ್ಥಿಕ ಇಲಾಖೆ ಅನುಮೋದನೆ ಪಡೆದು ಭರ್ತಿ ಮಾಡಲಾಗುವುದು.

**ಕಾಲ ಕಾಲಕ್ಕೆ ಭರ್ತಿ ಕ್ರಮ:** ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಯನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಆರ್ಥಿಕ ಇಲಾಖೆ ಅನುಮೋದಿತ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ.

ಕಳೆದ 3 ವರ್ಷಗಳಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳ ಮೂಲಕ 8,157 ಹುದ್ದೆಗಳ ನೇಮಕಾತಿ ಪೂರ್ಣಗೊಳಿಸಲಾಗಿದೆ. 3,081 ಹುದ್ದೆಗಳ ನೇಮಕಾತಿ ಪ್ರಗತಿಯಲ್ಲಿದೆ.

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 24,300 ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ, ಅಧಿಕಾರಿ, ನೌಕರರ ನಿಧನ, ವಯೋ ನಿವೃತ್ತಿ ಮತ್ತು ಸ್ವಯಂ ನಿವೃತ್ತಿಯಿಂದ ತೆರವಾಗುವ ಹುದ್ದೆಗಳನ್ನು, ಆಯಾ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಭರ್ತಿ ಮಾಡಲಾಗುತ್ತಿದೆ.

ಇಲಾಖೆಗಳು ಖಾಲಿ ಇರುವ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯಿಂದ ಒಂದು ಬಾರಿ ಸಹಮತಿ ಪಡೆದ ನಂತರ, ಮತ್ತೊಮ್ಮೆ ಸಹಮತಿ ಕೋರುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ವಿವಿಧ ನಿಗಮ, ಮಂಡಳಿಗಳಲ್ಲಿ 1,01420 ಹುದ್ದೆ, ವಿಶ್ವವಿದ್ಯಾಲಯಗಳಲ್ಲಿ 14,677 ಹುದ್ದೆ ಸೇರಿದಂತೆ ಒಟ್ಟು 1,88,037 ಹುದ್ದೆಗಳು ಖಾಲಿ ಇದ್ದು, ಈಗಾಗಲೇ 24,300 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಆರ್ಥಿಕ ಇಲಾಖೆ ಅನುಮತಿ ದೊರೆತಿದೆ.

ಹೈದರಾಬಾದ್ ಕರ್ನಾಟಕಕ್ಕೆ 371ಜೆ ಅಡಿ 32,132 ಹುದ್ದೆಗಳು ಭರ್ತಿಯಾಗಬೇಕಿದೆ. ಒಟ್ಟು 56,432 ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆ.

ಒಳಮೀಸಲಾತಿಯ ಬಿಕ್ಕಟ್ಟಿನಿಂದಾಗಿ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬ ವುಂಟಾಗಿತ್ತು. ಈಗ ಈ ಸಮಸ್ಯೆ ಬಗೆಹರಿದಿದ್ದು, ಆರ್ಥಿಕ ಇಲಾಖೆಯ ಅನುಮತಿ ಪಡೆದು ಹಂತ ಹಂತವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದರು.

ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಪ್ಯಾರಾ ಏಷಿಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತ ಸಾಧಕ ಕ್ರೀಡಾಪಟುಗಳಿಗೆ ಸರ್ಕಾರದ ಹುದ್ದೆಗಳ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಐವಾನ್ ಡಿಸೋಜ ಪ್ರಸ್ತಾವಕ್ಕೆ ಉತ್ತರಿಸಿದ ಮುಖ್ಯಮಂತ್ರಿ, ಪೊಲೀಸ್ ಇಲಾಖೆಯ ಡಿವೈಎಸ್ಪಿ, ಸಬ್‌ಇನ್ಸ್‌ಪೆಕ್ಟರ್ ಹಾಗೂ ಕಾನ್ಸ್‌ಟೇಬಲ್‌ಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ನೇಮಕಾತಿಯಲ್ಲಿ ಸಾಧಕ ಕ್ರೀಡಾಪಟುಗಳಿಗೆ ಶೇ 3ರಷ್ಟು ಮೀಸಲಾತಿ ಜಾರಿಗೊಳಿಸಲಾಗಿದೆ.

ನೇಮಕಾತಿಯಲ್ಲಿ ಸಾಧಕ ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿ ನೀಡುವ ನಿಯಮ ರೂಪಿಸಲು ಕ್ರಮವಹಿಸಲಾಗುತ್ತಿದೆ. ವಿಶ್ವಮಟ್ಟದ ಕ್ರೀಡೆಗಳಲ್ಲಿ ಪದಕ ವಿಜೇತರಿಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುಂಪು–ಎ, ಗುಂಪು–ಬಿ ಮತ್ತು ಇತರೆ ಹುದ್ದೆಗಳಿಗೆ ವಿಶೇಷ ನೇಮಕಾತಿ ನಿಯಮದಡಿ ಒಟ್ಟು 13 ಕ್ರೀಡಾಪಟುಗಳಿಗೆ ಉದ್ಯೋಗ ಕಲ್ಪಿಸಲಾಗಿದೆ ಎಂದರು.

# ಸಿಎಂ ಹೆಲಿಕಾಪ್ಟರ್, ವಿಮಾನ ಪ್ರಯಾಣ ಬಲು ದುಬಾರಿ; 2025ರ ನವೆಂಬರ್‌ವರೆಗೆ ಖರ್ಚಾಗಿದ್ದು 47.38 ಕೋಟಿ ರೂ.

ಬೆಳಗಾವಿ, ಡಿ.11– 2023 ರಿಂದ 2025 ರ ನವೆಂಬರ್ ವರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಲಿಕಾಪ್ಟರ್ ಮತ್ತು ವಿಮಾನ ಪ್ರಯಾಣಕ್ಕೆ ಸರ್ಕಾರದ ಬೊಕ್ಕಸದಿಂದ ಬರೋಬ್ಬರಿ 47 ಕೋಟಿ 38 ಲಕ್ಷ 24 ಸಾವಿರದ 347 ರೂಪಾಯಿ ಖರ್ಚು ಮಾಡಿದ್ದಾರೆ.

ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಬಿಜೆಪಿ ವಿಧಾನಪರಿಷತ್ ಸದಸ್ಯ ರವಿಕುಮಾರ್ ಅವರ ಪ್ರಶ್ನೆಗೆ ಸರ್ಕಾರದಿಂದ ಕೊಟ್ಟ ಅಂಕಿ ಅಂಶದ ಉತ್ತರದಿಂದ ಈ ಮಾಹಿತಿ ಬಯಲಿಗೆ ಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದಾಗಿನಿಂದ ಈವರೆಗೆ ರಾಜ್ಯದ ಬಹುತೇಕ ಜಿಲ್ಲೆಗಳು ಹಾಗೂ ದೆಹಲಿ, ಹೈದರಾಬಾದ್, ಚೆನ್ನೈ ಮುಂತಾದ ಹೊರ ರಾಜ್ಯಗಳ ಪ್ರಮುಖ ನಗರಗಳಿಗೆ ತೆರಳಲು ಈ ವಿಮಾನಯಾನವನ್ನು ಬಳಸಿಕೊಂಡಿದ್ದಾರೆ. ಈ ಹಿಂದೆ ತಮ್ಮ ಕಾವೇರಿ ನಿವಾಸದ ನವೀಕರಣಕ್ಕೆ ಕೋಟಿ ಕೋಟಿ ರೂಪಾಯಿ ಖರ್ಚು ಮಾಡಿ ಸುದ್ದಿಯಾಗಿದ್ದ ಮುಖ್ಯಮಂತ್ರಿಗಳು, ಇದೀಗ ವಿಮಾನಯಾನಕ್ಕೆ ಮಾಡಿದ ಭಾರೀ ವೆಚ್ಚದಿಂದ ಮತ್ತೆ ಸುದ್ದಿಯಾಗಿದ್ದಾರೆ.

ಸಿಎಂ ಅವರ ಹೆಲಿಕಾಪ್ಟರ್ ಮತ್ತು ವಿಶೇಷ ವಿಮಾನ ಬಳಕೆಗಾಗಿ ಸರ್ಕಾರದ ಬೊಕ್ಕಸದಿಂದ ಬರೋಬ್ಬರಿ



47,38,24,347 ಕೋಟಿ ರೂಪಾಯಿ (47.38 ಕೋಟಿ ರೂ.) ಖರ್ಚಾಗಿದೆ. ಇದು ಕೇವಲ 2023ರಿಂದ 2025ರ ನವೆಂಬರ್ ವರೆಗಿನ ಅವಧಿಯ ಲೆಕ್ಕ.

**ಕಾವೇರಿ ನಿವಾಸ ನವೀಕರಣಕ್ಕೆ ಕೋಟಿ ಕೋಟಿ ಬಳಕೆ:** ಈ ಹಿಂದೆ ಮುಖ್ಯಮಂತ್ರಿಗಳ ಕಾವೇರಿ ನಿವಾಸದ ನವೀಕರಣಕ್ಕಾಗಿ ದೊಡ್ಡ ಮೊತ್ತದ ಅನುದಾನವನ್ನು ಖರ್ಚು ಮಾಡಲಾಗಿತ್ತು. ಆಗಲೂ ಈ ವಿಚಾರ ದೊಡ್ಡ ಸುದ್ದಿಯಾಗಿತ್ತು. ಈಗ ಮತ್ತೆ ವಿಮಾನಯಾನಕ್ಕೆ ಮಾಡಿದ ವೆಚ್ಚದ ಬಗ್ಗೆ ಮಾಹಿತಿ ಹೊರಬಿದ್ದಿದೆ. ಮುಖ್ಯಮಂತ್ರಿಗಳ ವಿಮಾನಯಾನಕ್ಕೆ ಆದ ಒಟ್ಟು ವೆಚ್ಚ 47 ಕೋಟಿ ರೂಪಾಯಿಗಳಿಗೂ ಹೆಚ್ಚು ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಈ ವೆಚ್ಚದಲ್ಲಿ ಹೆಲಿಕಾಪ್ಟರ್ ಮತ್ತು ವಿಮಾನಗಳ ಬಾಡಿಗೆ, ಇಂಧನ, ನಿರ್ವಹಣೆ ಸೇರಿದಂತೆ ಹಲವು ಅಂಶಗಳು ಸೇರಿರುಬಹುದು.

**ಎಲ್ಲೆಲ್ಲಿಗೆ ಯಾವುದಕ್ಕೆ ಸಿಎಂ ಭೇಟಿ:** ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ, ಸಭೆಗಳು ಹಾಗೂ ಇತರ ಅಧಿಕೃತ ಕಾರ್ಯಕ್ರಮಗಳಿಗಾಗಿ ಮುಖ್ಯಮಂತ್ರಿಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡುತ್ತಾರೆ. ಅಲ್ಲದೆ, ರಾಷ್ಟ್ರೀಯ ಮಟ್ಟದ ಸಭೆಗಳು ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ದೆಹಲಿ, ಹೈದರಾಬಾದ್, ಚೆನ್ನೈ ಮುಂತಾದ ನಗರಗಳಿಗೆ ತೆರಳಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಮಯ ಉಳಿತಾಯ ಮತ್ತು ಸುಲಭ ಪ್ರಯಾಣಕ್ಕಾಗಿ ಹೆಲಿಕಾಪ್ಟರ್ ಹಾಗೂ ವಿಮಾನಗಳ ಬಳಕೆಯನ್ನು ಮಾಡಲಾಗುತ್ತದೆ. ಆದರೆ, ಈ ಪ್ರಯಾಣಗಳಿಗೆ ತಗಲುವ ವೆಚ್ಚ ಸರ್ಕಾರದ ಬೊಕ್ಕಸಕ್ಕೆ ಭಾರೀ ಹೊರೆಯಾಗುತ್ತಿದೆ ಎಂಬುದು ಈ ಮಾಹಿತಿಯಿಂದ ಸ್ಪಷ್ಟವಾಗುತ್ತದೆ. ಒಟ್ಟಾರೆಯಾಗಿ, ಮುಖ್ಯಮಂತ್ರಿಗಳ ವಿಮಾನಯಾನಕ್ಕೆ ಆದ ಈ ಭಾರೀ ವೆಚ್ಚ ಸಾರ್ವಜನಿಕ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.

# ವಿದೇಶದಲ್ಲಿ ಇರುವವರಿಗೂ ಗ್ಯಾರಂಟಿ ಲಾಭದ ಬಗ್ಗೆ ಸಿಎಲ್‌ಪಿ ಸಭೆಯಲ್ಲಿ ಪ್ರಸ್ತಾಪ

**ಸಚಿವ ಮಧು ಬಂಗಾರಪ್ಪ ಪ್ರತಿಕ್ರಿಯೆ**



ಬೆಳಗಾವಿ, ಡಿ.11– ವಿದೇಶದಲ್ಲಿರುವವರೂ ಗ್ಯಾರಂಟಿ ಯೋಜನೆ ಅನುಕೂಲ ಪಡೆಯುತ್ತಿದ್ದಾರೆ ಎಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ಕೆಲವರು ಪ್ರಸ್ತಾಪಿಸಿದರು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಬಹಿರಂಗಪಡಿಸಿದರು.

ಸುದ್ದಿಗಾರರ ಜತೆ ಮಾತನಾಡಿ, ಶಾಸಕಾಂಗ ಪಕ್ಷದ ಸಭೆಯಲ್ಲಿ ಕೆಲವರು ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರಸ್ತಾಪಿಸಿದರು. ವಿದೇಶದಲ್ಲಿರುವವರೂ ಗ್ಯಾರಂಟಿ ಯೋಜನೆಗಳ ಅನುಕೂಲ ಪಡೆಯುತ್ತಿದ್ದಾರೆ ಎಂದು ಹೇಳಿದರು. ಯಾರು ಹೇಳಿದರು ಎಂದು ನಾನು ಗಮನ ಕೊಡಲಿಲ್ಲ. ಒಂದು ವೇಳೆ ವಿದೇಶದಲ್ಲಿರುವವರು ಅನುಕೂಲ ಪಡೆದರೆ, ಅದು ತಪ್ಪು ಎಂದರು.

ಅನುದಾನ ಬಿಡುಗಡೆ ವಿಳಂಬದ ಬಗ್ಗೆ ಕೆಲವರು ಸಭೆಯಲ್ಲಿ ಮುಖ್ಯಮಂತ್ರಿಗಳ ಗಮನ ಸೆಳೆದರು. ಸಮಯಕ್ಕೆ ಸರಿಯಾಗಿ ಬಿಡುಗಡೆಯಾದರೆ, ಕೆಲಸ ಮಾಡಲು ಸುಲಭವಾಗುತ್ತದೆ ಎಂದರು. ಇದಕ್ಕೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದರು. ಹಣಕಾಸು ಇಲಾಖೆ ಅಧಿಕಾರಿಗಳ ಸಭೆ ಮಾಡಿ ತಕ್ಷಣ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವುದಾಗಿ ಹೇಳಿದರು ಎಂದು ತಿಳಿಸಿದರು. ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಕೆಲವರು ಹೇಳಿದರು. ಮುಖ್ಯಮಂತ್ರಿಗಳು ರಿವ್ಯೂ ಮೀಟಿಂಗ್ ಮಾಡಿದಾಗ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಲಿದ್ದಾರೆ. ಇನ್ನು ಕೆಲ ವಿಧಾನ ಪರಿಷತ್ ಸದಸ್ಯರು ಸಭೆಯಲ್ಲಿ ಮಾತನಾಡಿದರು ಎಂದು ಸಚಿವ ಮಧು ಬಂಗಾರಪ್ಪ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

# ಕಾಣುವ ಕುರ್ಚಿಗೆ ಹಂಬಲಿಸಿದೆ ಮನ... ಕೂರಬಲ್ಲನೇ ಒಂದು ದಿನ...

**ಡಿ.ಕೆ.ಶಿವಕುಮಾರ್ ಕಾಲೆಳೆದ ಶಾಸಕ ಸುನೀಲ್ ಕುಮಾರ್**



ಸುನೀಲ್

ಬೆಳಗಾವಿ, ಡಿ.11– ಕಾಣುವ ಕುರ್ಚಿಗೆ ಹಂಬಲಿಸಿದೆ ಮನ. ಕೂರಬಲ್ಲನೇ ಒಂದು ದಿನ...! ಹೀಗೆ ಸಿ.ಅಶ್ವಥ್ ಅವರ ಹಾಡನ್ನು ಬದಲಿಸಿ ಉಲ್ಲೇಖಿಸುವ ಮೂಲಕ ಶಾಸಕ ಸುನೀಲ್ ಕುಮಾರ್ ಉಪ ಮುಖ್ಯಮಂತ್ರಿ ಡಿ.ಕೆಶಿವಕುಮಾರ್ ಅವರ ಕಾಲೆಳೆದಿದ್ದು ಇದೊಂದು ಸ್ವಾರಸ್ಯಕರ ಸನ್ನಿವೇಶಕ್ಕೆ ಸಾಕ್ಷಿಯಾಯಿತು.

ವಿಧಾನಸಭೆಯಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಸುನೀಲ್ ಕುಮಾರ್ ಅವರು ನಾಯಕತ್ವ ಬದಲಾವಣೆ ವಿಚಾರವನ್ನು ಪರೋಕ್ಷವಾಗಿ ಪ್ರಸ್ತಾಪಿಸಿ, ಕಾಲೆಳೆದರು.

ಉತ್ತರ ಕರ್ನಾಟಕ ಭಾಗದ ಚರ್ಚೆಯ ಸಂದರ್ಭದಲ್ಲಿ ಮೇಕೆದಾಟು ಯೋಜನೆ ಬಗ್ಗೆ ಸರ್ಕಾರದ ಮೌನದ ಕುರಿತಾಗಿ ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ್ ಪ್ರಸ್ತಾಪ ಮಾಡಿದರು.

ತಮಿಳುನಾಡು ಡಿಎಂಕೆ ಮೈತ್ರಿ ಕಾರಣಕ್ಕಾಗಿ ಮೇಕೆದಾಟು ಕೆಲಸ ಆರಂಭವಾಗಿಲ್ಲವೆ ಎಂದು ಪ್ರಶ್ನಿಸಿದರು. ಈ ವೇಳೆ ಡಿ.ಕೆ.ಶಿವಕುಮಾರ್ ಮಧ್ಯ ಪ್ರವೇಶ ಮಾಡಿ, ನೀವು ಸಿಎಂ ಆಗಬೇಕು ಎಂದು ಕೊಂಡವರು. ವಿಪಕ್ಷ ನಾಯಕರು ಆಗಬೇಕು ಎಂದಿದ್ದವರು. ನಿಮಗೆ ಅನುಭವ ಇದೆ. ಮೊನ್ನೆ ತಾನೆ ನ್ಯಾಯಾಲಯದ ಆದೇಶ ಆಗಿದೆ ಸಿಡಬ್ಲ್ಯೂಸಿಗೆ ಆರು ತಿಂಗಳ ಸಮಯಾವಕಾಶ ನೀಡಲಾಗಿದೆ. ಯೋಜನೆಗೆ ಅನುಮತಿ ನೀಡುವಲ್ಲಿ ಕೇಂದ್ರ ಸರ್ಕಾರ ತೀರ್ಮಾನ ಮಾಡಬೇಕು ಎಂದು ಸುಪ್ರೀಂಕೋರ್ಟ್ ಸೂಚಿಸಿದೆ. ಹೀಗಾಗಿ ನಾನು ನಮ್ರತೆಯಿಂದ ಕೈ ಮುಗಿದು ಕೇಳುತ್ತೇನೆ. ನೀವೆಲ್ಲಾ ಸಹಕಾರ ಕೊಟ್ಟರೆ ಆದಷ್ಟು ಬೇಗ ನಿಮ್ಮ ಜೊತೆ ಭೂಮಿ ಪೂಜೆ ಮಾಡುತ್ತೇನೆ ಎಂದು ಕೈಮುಗಿದು ತಿರುಗೇಟು ನೀಡಿದರು.

ಈ ವೇಳೆ ಸುನೀಲ್ ಕುಮಾರ್ ಮಧ್ಯ ಪ್ರವೇಶ ಮಾಡಿ, ಇಷ್ಟು ನಯ–ವಿನಯ ಎಲ್ಲಿಂದ ಬಂತು ಸರ್ ನಿಮಗೆ. ಇದೇ ಡಿ.ಕೆ. ಶಿವಕುಮಾರಾ, ಹೊಸ ಶಿವಕುಮಾರಾ, ಡಿ.ಕೆ.ಶಿವಕುಮಾರ್ ಎಂಬುವುದಕ್ಕೆ ಒಂದು ಕಲ್ಪನೆ ಇದೆ. ಇಷ್ಟು ನಯ ವಿನಯ ಹೇಗೆ ಬಂತು! ದಿಢೀರ್ ಆಗಿ ಎಂದು ಕಾಲೆಳೆದರು.

ಇದೇ ಸಂದರ್ಭದಲ್ಲಿ ಸಿ ಅಶ್ವಥ್ ಅವರದ್ದು ಒಂದು ಹಾಡು ಉಲ್ಲೇಖ ಮಾಡಿ, 'ಕಾಣದ ಕಡಲಿಗೆ ಹಂಬಲಿಸುತ್ತಿದೇ ಮನ. ಸೇರಬಲ್ಲನೇ ಒಂದು ದಿನ' ಎಂದಿದೆ. ಹಾಗೆ ಡಿ.ಕೆ.ಶಿವಕುಮಾರ್ ಅವರದ್ದು ಈಗ 'ಕಾಣುವ ಕುರ್ಚಿಗೆ ಹಂಬಲಿಸಿದೇ ಮನ. ಕೂರಬಲ್ಲನೇ ಒಂದು ದಿನ' ಎಂದು ಹೇಳುತ್ತಿದ್ದಾರೆ ಎಂದರು.

ಹೀಗಾಗಿ ನಯ ವಿನಯ ಶುರುವಾಯ್ತೊ, ನಿಜವಾಗಿ ವಿರೋಧ ಪಕ್ಷದ ಬಗ್ಗೆ ನಯ–ವಿನಯ ಶುರುವಾಯ್ತೋ, ನಿಮ್ಮ ನಾಯಕತ್ವವನ್ನು ನಾವು ಒಪ್ಪುತ್ತೇವೆ. ನೀವು ಕೈಮುಗಿದು ನಯ ವಿನಯ ತೋರಿಸಿದರೆ ಹೇಗೆ ಎಂದು ಕಾಲೆಳೆದರು.

# ನಂಜನಗೂಡು ರಸಬಾಳೆ ಮಾರುಕಟ್ಟೆ ವಿಸ್ತರಣೆಗೆ ಕ್ರಮ

**ತೋಟಗಾರಿಕೆ ಸಚಿವ ಮಲ್ಲಿಕಾರ್ಜುನ್ ಮಾಹಿತಿ**

ಬೆಳಗಾವಿ ಡಿ.11(ಬಿಎಲ್‌ಯು)– ಪ್ರಸಿದ್ಧ ನಂಜನಗೂಡು ರಸಬಾಳೆ ಬಗ್ಗೆ ಆಸಕ್ತಿ ಮೂಡಿಸಿ, ಮಾರುಕಟ್ಟೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಇಂದು ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದರು.

ನಂಜನಗೂಡು ರಸಬಾಳೆ ತಳಿಯನ್ನು ಹೆಚ್ಚಾಗಿ ಬೆಳೆಸಲು ಸರ್ಕಾರದಿಂದ ಹಲವು ಉತ್ತೇಜನ ಕಾರ್ಯಕ್ರಮ ರೂಪಿಸಲಾಗಿದೆ. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಲ್ಲಿ ಬೆಳೆಯಲು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇಕಡ 90 ರಂತೆ 57,312 ರೂಪಾಯಿ



ಹಾಗೂ ಇತರೆ ರೈತರಿಗೆ ಶೇಕಡ 75 ರಂತೆ 56,093 ರೂಪಾಯಿ ಸಹಾಯಧನ ನೀಡಲಾಗಿದೆ ಎಂದು ಮಲ್ಲಿಕಾರ್ಜುನ್ ತಿಳಿಸಿದರು.

ರಸಬಾಳೆ ತಳಿಯ ಬೇಸಾಯದ ತಾಂತ್ರಿಕತೆ ಬಗ್ಗೆ 340 ರೈತರಿಗೆ ತರಬೇತಿ ನೀಡಲಾಗಿದೆ. ಈ ತಳಿಯನ್ನು 85.30 ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ. ಪ್ರಮುಖವಾಗಿ ನಂಜನಗೂಡು ತಾಲೂಕಿನ ಮಾಡ್ರಹಳ್ಳಿ, ಹನುಮನಪುರ, ಸಿಂಧುವಳ್ಳಿ, ಹೆಮ್ಮರಗಾಲ, ಹಂಪಾಪುರ,




ಕೆ.ಶಿವಕುಮಾರ್

ವೀರದೇವರಪುರ, ತಾಂಡವಪುರ, ಹಗಿನವಾಳು, ಹಳೇಪುರ, ಅಂಬಳೆ, ಕೂಗಲೂರು, ಕುರಹಟ್ಟಿ, ದೇವಿರಮ್ಮನಹಳ್ಳಿ, ಕಾರ್ಯ, ಕಾರಾಪುರ, ಚುಂಚನಹಳ್ಳಿ, ಹರದನಹಳ್ಳಿ, ದೇವರಸನಹಳ್ಳಿ ಹಾಗೂ ಕೋಡಿ ನರಸೀಪುರ ಗ್ರಾಮಗಳಲ್ಲಿ ನಂಜನಗೂಡು ರಸಬಾಳೆ ಬೆಳೆಯಲಾಗುತ್ತಿದೆ ಎಂದು ಹೇಳಿದ್ದಾರೆ. ನಂಜನಗೂಡು ರಸಬಾಳೆ ಸೇರಿದಂತೆ ಇತರೆ ಬಾಳೆಯನ್ನು ರಾಜ್ಯದ 48,853 ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾಹಿತಿ ನೀಡಿದರು.

# ಪೊಲೀಸ್, ಅರಣ್ಯ ಇಲಾಖೆಯಲ್ಲಿ ಕ್ರೀಡಾಪಟುಗಳಿಗೆ ಮೀಸಲಾತಿ

**ಸಿಎಂ ಸಿದ್ದರಾಮಯ್ಯ ಘೋಷಣೆ**



ಬೆಳಗಾವಿ, ಡಿ.11– ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಅರಣ್ಯ, ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಮೀಸಲಾತಿ ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ವಿಧಾನಪರಿಷತ್ತಿನಲ್ಲಿ ಘೋಷಿಸಿದರು.

ಪರಿಷತ್ ಸದಸ್ಯ ಐವಾನ್ ಡಿಸೋಜ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಅರಣ್ಯ ಮತ್ತು ಪೊಲೀಸ್ ಇಲಾಖೆಯಲ್ಲಿ ಶೇ.3 ಮತ್ತಿತರ ವಿವಿಧ ಇಲಾಖೆಗಳಲ್ಲಿ ಶೇ.2 ರಷ್ಟು ಮೀಸಲು ಜಾರಿಗೊಳಿಸುವುದಾಗಿ ತಿಳಿಸಿದರು.

ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಕಾಮನ್ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದ 13 ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರ ನೇಮಕಾತಿ ನೀಡಿದೆ ಎಂದು ಸಿದ್ದಾರಾಮಯ್ಯ ಹೇಳಿದರು.

# ಮಲಗಿ, ಮಲಗಿರಿ, ಜನ ಒದ್ದೋಡಿಸುವವರೆಗೂ ಏಳಬೇಡಿ...

**ಡಿಕೆಶಿಗೆ ಕುಟುಕಿದ ಆರ್.ಅಶೋಕ್**



ಬೆಳಗಾವಿ, ಡಿ.11– 'ಮಲಗಿ, ಮಲಗಿರಿ, ಜನ ಒದ್ದೋಡಿಸುವವರೆಗೂ ಏಳಬೇಡಿ...' ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ವಿಧಾನಪರಿಷತ್ ಕಲಾಪದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿದ್ರೆಗೆ ಜಾರಿರುವ ಚಿತ್ರವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ವಿಧಾನ ಸಭೆ ವಿರೋಧ ಪಕ್ಷ ನಾಯಕ ಆರ್. ಅಶೋಕ್ ಕುಟುಕಿದ ಪರಿಯಿದು. ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಕೇಂದ್ರ ಸರ್ಕಾರವೇ ಉತ್ತರ ಕೊಡಬೇಕು ಎಂದು ಜಾರಿಕೊಂಡು ಸದನದಲ್ಲೇ ಗಾಢ ನಿದ್ರೆಗೆ ಜಾರಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಸಾಹೇಬರಿಗೆ ಪಾಪ ಸಿಎಂ ಕುರ್ಚಿ ಸಿಗದ ನಿರಾಸೆಯಿಂದ ರಾತ್ರಿಯೆಲ್ಲ ನಿದ್ದೆ ಬರುತ್ತಿಲ್ಲ ಅನ್ನಿಸುತ್ತೆ. ಹಾಗಾಗಿ ಸದನದಲ್ಲೇ ವಿಶ್ರಾಂತಿ ಪಡೆಯುತ್ತಿರಬೇಕು ಎಂದು ವ್ಯಂಗ್ಯವಾಡಿದ್ದಾರೆ.

'ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂದು ಸ್ವಾಮಿ ವಿವೇಕಾನಂದರು ಕರೆ ಕೊಟ್ಟಿದ್ದರು. ಆದರೆ ಕಾಂಗ್ರೆಸ್ ನಾಯಕರ ವರಸೆ 'ಮಲಗಿ, ಮಲಗಿರಿ, ಜನ ಒದ್ದೋಡಿಸುವವರೆಗೂ ಏಳಬೇಡಿ' ಎನ್ನುವಂತಿದೆ ಎಂದು ಟೀಕಿಸಿದ್ದಾರೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಬುಧವಾರ ಚಳಿಗಾಲದ ಅಧಿವೇಶನದ ವಿಧಾನಪರಿಷತ್ ಕಲಾಪದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನಿದ್ರೆಗೆ ಜಾರಿದ್ದರು. ಗೃಹ ಸಚಿವ ಪರಮೇಶ್ವರ್ ಮತ್ತು ಸಭಾನಾಯಕ ಎನ್.ಎಸ್.ಬೋಸರಾಜು ಅಕ್ಕಪಕ್ಕದಲ್ಲಿದ್ದರು.

# 16 ಬಾರಿ ಬಜೆಟ್ ಮಂಡಿಸಿದ ಸಿದ್ದರಾಮಯ್ಯ ಸತ್ತ ಸರ್ಕಾರದ ಮುಖ್ಯಮಂತ್ರಿ!

**ಮಾಜಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ**



ಕೆಜಿಎಫ್, ಡಿ.11– ಸಿದ್ದರಾಮಯ್ಯನವರನ್ನು ಹದಿನಾರು ಬಾರಿ ಬಜೆಟ್ ಮಂಡಿಸಿದ ವಿಶ್ವದ ಅರ್ಥ ಶಾಸ್ತ್ರಜ್ಞ ಎಂದು ವ್ಯಂಗ್ಯವಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ ಅವರು, ಸರ್ಕಾರ ಸತ್ತುಹೋಗಿದೆ. ಸತ್ತ ಸರ್ಕಾರದ ಹೆಣವನ್ನು ಸಿದ್ದರಾಮಯ್ಯ ಮುಂದೆ ಹೊರುತ್ತಿದ್ದಾರೆ, ಡಿ.ಕೆ.ಶಿವಕುಮಾರ್ ಹಿಂದೆ ಹೊರುತ್ತಿದ್ದಾರೆ ಎಂದು ತೀಕ್ಷ್ಣವಾಗಿ ಟೀಕಿಸಿದರು.

ಕೆಜಿಎಫ್‌ನಲ್ಲಿ ನಡೆದ ಭೀಮ ನಡಿಗೆ ಕಾರ್ಯಕ್ರಮದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಯಾರೇ ಹೊರಲಿ, ಆದರೆ ಸರ್ಕಾರ ಮಾತ್ರ ಸತ್ತೋಗಿದೆ. ಈ ಸತ್ತ ಸರ್ಕಾರವನ್ನು ತೊಲಗಿಸಲು ರಾಜ್ಯದ ಜನರು ತೀರ್ಮಾನ ಮಾಡಿದ್ದಾರೆ. ನೂರ ನಲವತ್ತು ಸೀಟು ಕೊಟ್ಟ ಜನರು ಮಾಡಿದ ತಪ್ಪಿಗೆ ಜನರು ಮತ್ತು ಮೈಮರೆತ ಬಿಜೆಪಿಯವರು ಅನುಭವಿಸಬೇಕು ಎಂದರು.

**ಜೋಳಿಗೆ ತುಂಬುತ್ತೆ:** ಸಿಎಂ ಸಿದ್ದರಾಮಯ್ಯ ಅವರು ಇನ್ನೂ ಎರಡೂವರೆ ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂಬ ಪುತ್ರ ಯತೀಂದ್ರ ಅವರ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಅಪ್ಪ ಮುಂದುವರೆದರೆ ತನ್ನ ಜೋಳಿಗೆ ತುಂಬುತ್ತೆ ಅಂದುಕೊಂಡಿದ್ದಾರೆ ಎಂದು ಕುಟುಕಿದರು. ಸಿದ್ದರಾಮಯ್ಯ ಅವರು ತಮ್ಮ ಮಗನಷ್ಟೇ ಅಲ್ಲದೆ ಹಲವರಿಂದ ಈ ರೀತಿ ಹೇಳಿಸುತ್ತಿದ್ದಾರೆ. ಹಾಗೆ ಹೇಳಿ ಕೆಲವರ ಮಂತ್ರಿ ಪದವಿಯೇ ಹೋಗಿದೆ. ಬೆಳಗಾವಿಯಲ್ಲಿ ಸತೀಶ್ ಜಾರಕಿಹೊಳಿ ಅವರನ್ನು ಎತ್ತಿಕಟ್ಟುತ್ತಿದ್ದಾರೆಂದು ದೂರಿದರು.

**ಪಂಚ ಗ್ಯಾರಂಟಿ ಯೋಜನೆಗಳ ವೈಫಲ್ಯ:** ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ವೈಫಲ್ಯದ ಬಗ್ಗೆ ವ್ಯಂಗ್ಯವಾಡಿದ ಪ್ರತಾಪ್ ಸಿಂಹ ಅವರು, 'ನಿನ್ನ ಹೆಂಡತಿಗೂ ಫ್ರೀ' ಅಂತ ಹೇಳಿ ಬರೀ ತಮಟೆ ಹೊಡೆಯುತ್ತಿದ್ದಾರೆ. ಹಾಲಿನ ಬಿಲ್ ಜಾಸ್ತಿ ಆಯ್ತು, ಬಸ್ ವ್ಯವಸ್ಥೆ ಹಾಳಾಯ್ತು, ಗೃಹ ಲಕ್ಷ್ಮಿ ಹಣ ಬರ್ತಿಲ್ಲ' ಎಂದು ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದರು. ಅಲ್ಲದೆ, ರಾಜ್ಯದ ಅರ್ಥ ವ್ಯವಸ್ಥೆ ಹಾಳುಮಾಡಿ, ಎಂಟು ಲಕ್ಷ ಕೋಟಿ ಸಾಲ ಮಾಡಿದ ಕುಖ್ಯಾತಿ ಸಿದ್ದರಾಮಯ್ಯ ಅವರಿಗಿದೆ ಎಂದು ಆರ್ಥಿಕ ನಿರ್ವಹಣೆಯ ಬಗ್ಗೆ ತೀವ್ರ ವಾಗ್ದಾಳಿ ನಡೆಸಿದರು.

**ನಾವು ನಿಮ್ಮನ್ನ ಯಾವನೋ ಅಂದರೆ...:** ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಿದ್ದರಾಮಯ್ಯ ಅವರು ಏಕವಚನದಲ್ಲಿ ಮಾತನಾಡಿರುವುದನ್ನು ತೀವ್ರವಾಗಿ ಖಂಡಿಸಿದ ಪ್ರತಾಪ್ ಸಿಂಹ, ನೀವು ಒಬ್ಬ ಹಣಕಾಸು ಸಚಿವರಾಗಿ, ಕೇಂದ್ರದ ಹಣಕಾಸು ಸಚಿವರ ಹೆಸರು ಗೊತ್ತಿಲ್ಲವೇ, ಗೊತ್ತಿದ್ದರೂ ಈ ರೀತಿ ಉಢಾಪೆ ಮಾತಾಡಿದ್ರಾ ಎಂದು ಪ್ರಶ್ನಿಸಿದರು. ನಾವು ನಿಮ್ಮನ್ನ 'ಯಾವನೋ ಅವನು ಮುಡಾದಲ್ಲಿ ಹೆಂಡತಿ ಹೆಸರಲ್ಲಿ 14 ಸೈಟ್ ಹೊಡೆದೋನು' ಅಂದರೆ ನಿಮಗೆ ಹೇಗಾಗುತ್ತೆ. ಕೇಂದ್ರ ಸಚಿವೆ ಹೆಣ್ಣು ಮಗಳ ಬಗ್ಗೆ ಹೀಗೆ ಮಾತಾಡಿ ಸಮಾಜಕ್ಕೆ ಯಾವ ಮೇಲ್ಪಂಕ್ತಿ ಹಾಕಿ ಕೊಡುತ್ತಿದ್ದೀರಿ ಎಂದು ಕಿಡಿಕಾರಿದರು ಇದೇ ವೇಳೆ ದ್ವೇಷ ಬಾಷಣ ಬಿಲ್ ಪಾಸ್ ಆದರೆ ಮೊದಲ ಪ್ರಕರಣ ಸಿದ್ದರಾಮಯ್ಯ ಅವರ ಮೇಲೆ ಹಾಕಬೇಕು. ದೇಶದ ಹೆಣ್ಣು ಮಗಳ ಬಗ್ಗೆ ಅಗೌರವ ತೋರಿರುವ ಸಿದ್ದರಾಮಯ್ಯ ಮೇಲೆ ಕೇಸ್ ದಾಖಲು ಮಾಡಬೇಕು ಎಂದು ಪ್ರತಾಪ್ ಸಿಂಹ ಆಗ್ರಹಿಸಿದರು.

# ದ್ವೇಷ ಭಾಷಣ ಮಸೂದೆ ಜಾರಿಗೆ ರಾಜ್ಯ ಬಿಜೆಪಿ ತೀವ್ರ ವಿರೋಧ

**● ಬಿಜೆಪಿ, ಹಿಂದೂ ಸಂಘಟನೆಗಳು, ಆರ್‌ಎಸ್‌ಎಸ್‌ಗೆ ಕಡಿವಾಣ ಹಾಕಲು ಮಸೂದೆ ಜಾರಿಗೆ ● ಮೈಸೂರಲ್ಲಿ ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ವಾಗ್ದಾಳಿ**



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಮಾತನಾಡಿದರು.

ಮೈಸೂರು, ಡಿ.11(ಜಿಎ)–ರಾಜ್ಯದಲ್ಲಿ ದ್ವೇಷ ಭಾಷಣ ಮಸೂದೆ ಜಾರಿಗೊಳಿಸಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ರಾಜ್ಯ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದೆ.

ರಾಜಕೀಯ ಕಾರಣಕ್ಕಾಗಿ ಬಿಜೆಪಿ ಹಾಗೂ ಹಿಂದೂ ಸಂಘಟನೆಗಳನ್ನು ಧಮನ ಮಾಡಲು, ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಸಲುವಾಗಿ ರಾಜ್ಯ ಸರ್ಕಾರ ದ್ವೇಷ ಭಾಷಣ ಮಸೂದೆ ಜಾರಿಗೊಳಿಸಲು ಮುಂದಾಗಿದೆ.

ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಆರೋಪ ಮಾಡಿದರು. ಬೆಳಗಾವಿ ಅಧಿವೇಶನದಲ್ಲಿ ಕಾಂಗ್ರೆಸ್ ಸರ್ಕಾರ ದ್ವೇಷ ಭಾಷಣ ಮಸೂದೆ ಮಂಡಿಸಿದೆ. ಕಾಂಗ್ರೆಸ್ ಹಿಂದಿನಿಂದಲೂ ದ್ವೇಷ ಸಾಧಿಸಿಕೊಂಡು ಬಂದಿದ್ದು ದ್ವೇಷ ರಾಜಕಾರಣ ಮಾಡುತ್ತಿದೆ ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿದ್ದು, ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿಚಾರಧಾರೆಗಳನ್ನು ಗುರಿಯಾಗಿಸಿಕೊಂಡು ದ್ವೇಷ ಭಾಷಣ ಮಸೂದೆ ಮಂಡನೆ ಮಾಡಿದ್ದಾರೆ. ಕಾಂಗ್ರೆಸ್ ದ್ವೇಷದ ರಾಜಕಾರಣ ಹೊರತುಪಡಿಸಿ ಬೇರೆ ಏನನ್ನೂ ಮಾಡುತ್ತಿಲ್ಲ ಎಂದು ಕಿಡಿ ಕಾರಿದರು.

ತಮಿಳುನಾಡಿನಲ್ಲಿರುವ ಮಧುರೈನ ಸುಬ್ರಮಣ್ಯ ಸ್ವಾಮಿ ದೇವಾಲಯದ ಬೆಟ್ಟದ ಮೇಲೆ ದೀಪ ಹಚ್ಚುವುದನ್ನು ಯುನೆಸ್ಕೊ ಒಪ್ಪಿಕೊಂಡಿದೆ. ಆದರೆ, ತಮಿಳುನಾಡಿನಲ್ಲಿ ಬೆಟ್ಟದ ಮೇಲೆ ದೀಪ ಹಚ್ಚುವುದಕ್ಕೆ ನಿರ್ಬಂಧ ಹೇರಲಾಗಿದೆ. ತಮಿಳುನಾಡು ಹೈಕೋರ್ಟ್ ನೀಡಿದ್ದ ಆದೇಶ ಧಿಕ್ಕರಿಸಿ ನಿರ್ಬಂಧಿಸಲಾಗಿದೆ. ತೀರ್ಪಿನ ವಿರುದ್ಧ ಸಹಿ ಸಂಗ್ರಹ ಅಭಿಯಾನ ಮಾಡಿದ್ದು, ಇದಕ್ಕೆ ರಾಜ್ಯದ ಮೂವರು ಕಾಂಗ್ರೆಸ್ ಸಂಸದರು ಸಹಿ ಹಾಕಿದ್ದಾರೆ. ಹಾಸನದ ಶ್ರೇಯಸ್ ಪಟೇಲ್ ಕೂಡ ಸಹಿ ಹಾಕಿದ್ದು, ಕಾಂಗ್ರೆಸ್ ಹಿಂದೂಗಳ ವಿರೋಧಿಯಾಗಿದೆ ಎಂದು ದೂರಿದರು.

ಸಿಎಂ ಸಿದ್ದರಾಮಯ್ಯ ತಮ್ಮ ಜಿಲ್ಲೆಯ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಮೈಸೂರು ಡ್ರಗ್ಸ್ ಫ್ಯಾಕ್ಟರಿ ಆಗುತ್ತಿದೆ. ರಾಜ್ಯದಾದ್ಯಂತ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಆದರೂ ಸಿಎಂ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಮೈಸೂರಿನ ಯೂನಿಟಿ ಮಾಲ್ ತಡೆಯಾಜ್ಞೆ ಕುರಿತು ಪ್ರತಿಕ್ರಿಯಿಸಿ, ರಾಜಮಾತೆ ಪ್ರಮೋದ ದೇವಿ ಒಡೆಯರ್ ಯೂನಿಟಿ ಮಾಲ್‌ಗೆ ತಡೆಯಾಜ್ಞೆ ತಂದಿರುವುದು ಅವರ ವೈಯಕ್ತಿಕ ವಿಚಾರ. ಅದಕ್ಕೂ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ. ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿವೃದ್ಧಿ ದೃಷ್ಟಿಯಿಂದ ಚಾಲನೆ ನೀಡಿದ್ದಾರೆ. ಯೂನಿಟಿ ಮಾಲ್ ಸ್ಥಾಪನೆಯಾದರೆ ಸ್ಥಳೀಯರಿಗೆ ಹೆಚ್ಚು ಅವಕಾಶ ದೊರೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಪರೀಕ್ಷಿತ್ ರಾಜೇ ಅರಸ್, ರಾಮಚಂದ್ರು, ವಿನಯ್, ನಗರ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ಗ್ರಾಮಾಂತರ ಕಾರ್ಯದರ್ಶಿ, ದಯಾನಂದ್ ಪಟೇಲ್, ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಮಾಧ್ಯಮ ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 12 ಡಿಸೆಂಬರ್ 2025

### ಡಿ.16ಕ್ಕೆ ಮಳವಳ್ಳಿಗೆ ರಾಷ್ಟ್ರಪತಿ ಭೇಟಿ ಹಿನ್ನೆಲೆ

# ಅಂತಿಮ ಹಂತದ ಸಿದ್ಧತೆ ಪರಿಶೀಲಿಸಿದ ಡಿಸಿ



ಜಿಲ್ಲಾಧಿಕಾರಿ ಡಾ.ಕುಮಾರ್ ಕಾರ್ಯಕ್ರಮದ ಪೂರ್ವ ಸಿದ್ಧತೆ ಪರಿಶೀಲಿಸಿದರು.

ಮಳವಳ್ಳಿ, ಡಿ.11– ಪಟ್ಟಣದಲ್ಲಿ ಡಿ.16ರಂದು ನಡೆಯುವ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವಕ್ಕೆ ರಾಷ್ಟ್ರಪತಿ ದ್ರೌಪತಿ ಮುರ್ಮು ಆಗಮಿಸುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಕಾರ್ಯಕ್ರಮದ ಪೂರ್ವ ಸಿದ್ಧತೆಗಳ ಕುರಿತು ಬುಧವಾರ ಮಳವಳ್ಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮಾರೇಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಹೆಲಿಪ್ಯಾಡ್ ಪರಿಶೀಲಿಸಿದ ಅವರು, 3 ಹೆಲಿಕಾಪ್ಟರ್ ಲ್ಯಾಂಡಿಂಗ್‌ಗೆ ಸ್ಥಳ ಸಿದ್ಧಪಡಿಸಲಾಗಿದ್ದು, ಕೂಡಲೇ ಲ್ಯಾಂಡಿಂಗ್ ಸ್ಥಳವನ್ನು ಗುರುತಿಸಲು ಸೂಚನೆ ನೀಡಿದರು.

ಡಿ.14ರ ಭಾನುವಾರದಂದು ಕೇಂದ್ರದಿಂದ ಪರಿಶೀಲನಾ ತಂಡ ಆಗಮಿಸುವುದರಿಂದ ಗುರುತಿಸಿರುವ ಹೆಲಿಪ್ಯಾಡ್ ಅನ್ನು ಸಮತಟ್ಟಾಗಿಸಿ, ನಿಯಮಾನುಸಾರ ಅಂತರ ಕಾಯ್ದುಕೊಳ್ಳುವುದು ಮತ್ತು ಧೂಳು ರಹಿತ ವ್ಯವಸ್ಥೆ ಕಲ್ಪಿಸಿ, ಗ್ರೀನ್ ರೂಂ ನಿರ್ಮಾಣದ ಕುರಿತು ಪರಿಶೀಲನಾ ತಂಡದ ಅಭಿಪ್ರಾಯದ ಮೇರೆಗೆ ಅಂತಿಮವಾಗಿ ನಿರ್ಧಾರ ಕೈಗೊಳ್ಳಿ ಎಂದರು.

ಮಾರ್ಗಸೂಚಿ, ನಿಯಮಾವಳಿಗಳಂತೆ ಹೈಸ್ಪೀಡ್ ಇಂಟರ್ನೆಟ್ ಮತ್ತು ದೂರವಾಣಿ ಸಂಪರ್ಕ ಕಲ್ಪಿಸಿ, ರಾಷ್ಟ್ರಪತಿ ಪ್ರೋಟೋಕಾಲ್ ಅನುಸಾರ ವೇದಿಕೆ, ಕುಳಿತುಕೊಳ್ಳುವ ಆಸನ ಹಾಗೂ ಜಾಗದ ವ್ಯವಸ್ಥೆ ಮಾಡಿ, ವೇದಿಕೆ ಬಳಿಯೇ ತುರ್ತು ವೈದ್ಯಕೀಯ ತಂಡ ಇರುವಂತೆ ಸಮರ್ಪಕವಾಗಿ ಸಿದ್ಧತೆ ಕೈಗೊಳ್ಳಿ, ರಾಷ್ಟ್ರಪತಿಗಳು ಹಾಗೂ ಭದ್ರತಾ ಸಿಬ್ಬಂದಿಗಳ ವಾಹನ ನಿಲುಗಡೆ ಪ್ರದೇಶ ಪರಿಶೀಲಿಸಿ, ಯಾವುದೇ ಸರ್ಕಾರಿ, ಖಾಸಗಿ ವಾಹನಗಳು ಸದರಿ ಪ್ರದೇಶದಲ್ಲಿ ನಿಲ್ಲದಂತೆ ಕ್ರಮ ಕೈಗೊಳ್ಳಿ ಎಂದರು.


ರಾಷ್ಟ್ರಪತಿಗಳು ಆಗಮಿಸುವ ಮಾರ್ಗ ಮತ್ತು ವಾಹನ ನಿಲುಗಡೆ ಜಾಗಗಳನ್ನು ಪರಿಶೀಲಿಸಿ, ಯಾವುದೇ ನಿಯಮಗಳು ಉಲ್ಲಂಘನೆಯಾಗದಂತೆ ಕ್ರಮ ವಹಿಸಿ. ಗಣ್ಯರಿಗೆ, ದೃಶ್ಯ ಹಾಗೂ ಪತ್ರಿಕಾ ಮಾಧ್ಯಮ ಪ್ರತಿನಿಧಿಗಳಿಗೆ ಮತ್ತು ಸಾರ್ವಜನಿಕರಿಗೆ ಸಿದ್ಧಪಡಿಸಿರುವ ಯೋಜನೆಯ ಪ್ರಕಾರ ಪ್ರತ್ಯೇಕ ಆಸನ ವ್ಯವಸ್ಥೆ ಕಲ್ಪಿಸಿ. ವಸ್ತು ಪ್ರದರ್ಶನ ಮತ್ತು ಊಟ ವಿತರಣಾ ಸ್ಥಳಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ಸುಸಜ್ಜಿತವಾಗಿ ಸಾರ್ವಜನಿಕರು ಕುಳಿತುಕೊಳ್ಳುವ ಸ್ಥಳ ಹಾಗೂ ಇನ್ನಿತರೆ ಸೌಲಭ್ಯಗಳ ಕಲ್ಪಿಸಿ, ರಾಷ್ಟ್ರಪತಿಗಳು ಭೇಟಿ ನೀಡಿದ ಸಂದರ್ಭ ಗೌರವ, ಭದ್ರತೆಯಿಂದ ಕೂಡಿರಬೇಕು ಮತ್ತು ಪ್ರೋಟೋಕಾಲ್ ಕಾಪಾಡುವ ದೃಷ್ಟಿಯಿಂದ ಎಲ್ಲಾ ಇಲಾಖೆ ಅಧಿಕಾರಿಗಳು ಸಮಯ ಪಾಲನೆ ಮಾಡಿ ದೋಷರಹಿತವಾಗಿ ಕಾರ್ಯ ನಿರ್ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಸದರಿ ಸ್ಥಳಕ್ಕೆ ಆಗಮಿಸಿದ ಧಾರ್ಮಿಕ ನಾಯಕರಿಗೆ ಜಿಲ್ಲಾಧಿಕಾರಿಗಳು ಕಾರ್ಯಕ್ರಮದ ರೂಪರೇಷೆ ಮತ್ತು ಕೈಗೊಂಡಿರುವ ವ್ಯವಸ್ಥೆ ಸಿದ್ದತೆಗಳ ಕುರಿತು ವಿವರವಾಗಿ ತಿಳಿಸಿದರು.

ಈ ವೇಳೆ ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಸಿ ಶಿವಮೂರ್ತಿ, ಡಿವೈಎಸ್ಪಿ ಯಶವಂತ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ನಾಗರತ್ನ, ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಸೋಮಶೇಖರ್, ವೃತ್ತ ನಿರೀಕ್ಷಕರಾದ ಶ್ರೀಧರ್, ಬಸವರಾಜು, ಜಯಂತಿ ಮಹೋತ್ಸವ ವಿವಿಧ ಸಮಿತಿಗಳ ಪದಾಧಿಕಾರಿಗಳು, ಜೆಎಸ್‌ಎಸ್ ವಿದ್ಯಾಪೀಠದ ಅಧಿಕಾರಿಗಳು ಉಪಸ್ಥಿತರಿದ್ದರು.

# ಚಿನಕುರಳಿಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.

ಚಿನಕುರಳಿ, ಡಿ.11– ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಪಾಂಡವಪುರದ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಕನ್ನಡಕ ವಿತರಣೆ ಕಾರ್ಯಕ್ರಮ ನಡೆಯಿತು.

ಮಾಜಿ ಶಾಸಕ ದಿ.ಕೆ.ಎಸ್.ಪುಟ್ಟಣ್ಣಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಚಿನಕುರಳಿ ಸಿ.ಎಸ್.ಚಿಕ್ಕರಾಮೇಗೌಡ ಹಾಗೂ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಅಣ್ಣೇಗೌಡರ ಸ್ಮರಣಾರ್ಥ ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಪಾಂಡವಪುರ, ಭಗವಾನ್ ಮಹಾವೀರ ದರ್ಶನ ನೇತ್ರ ಆಸ್ಪತ್ರೆ, ಬಾಲ ಭೈರವೇಶ್ವರ ಚಾರಿಟಬಲ್ ಟ್ರಸ್ಟ್ ಬೆಂಗಳೂರು ಹಾಗೂ ಪಾಂಡವಪುರ ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಸಂಸ್ಥೆ ಉಚಿತವಾಗಿ ಕಣ್ಣಿನ ತಪಾಸಣೆ ಶಿಬಿರ ಆಯೋಜಿಸಿ ಅಗತ್ಯವುಳ್ಳವರಿಗೆ ಉಚಿತ ಕನ್ನಡಕ ವಿತರಿಸುವ ಮೂಲಕ ಪುಣ್ಯದ ಕೆಲಸ ಮಾಡುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ವಯೋವೃದ್ಧರು ಆಸ್ಪತ್ರೆಗೆ ತೆರಳಿ ಸಾವಿರಾರು ರೂ. ಖರ್ಚು ಮಾಡಿ ತಮ್ಮ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಲಾಗದೇ ಸಾಕಷ್ಟು ತೊಂದರೆ ಅನುಭವಿಸುತ್ತಾರೆ. ಅಂತಹವರಿಗೆ ಇಂತಹ ಉಚಿತ ಶಿಬಿರಗಳು ಅನುಕೂಲವಾಗುತ್ತವೆ. ಗ್ರಾಮೀಣ ಜನರು ಸಹ ಇಂತಹ ಉಚಿತ ಶಿಬಿರಗಳ ಬಗ್ಗೆ ಮಾಹಿತಿ ಪಡೆದು ತಪಾಸಣೆ ಮಾಡಿಕೊಳ್ಳಬೇಕು. ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಸಂಸ್ಥೆ ಒಂದಲ್ಲ ಒಂದು ಪುಣ್ಯದ ಕೆಲಸ ಮಾಡುವ ಮೂಲಕ ಸಮಾಜಕ್ಕೆ ಮಾದರಿಯಾಗುತ್ತಿದೆ. ಅದರಲ್ಲೂ ನಮ್ಮ ತಂದೆಯಾದ ಚಿಕ್ಕರಾಮೇಗೌಡರ ಸ್ಮರಣಾರ್ಥ ಕಣ್ಣಿನ ತಪಾಸಣೆ ನಡೆಸುತ್ತಿರುವುದು ಸಂತೋಷವಾಗಿದೆ ಎಂದರು.

ಅಧ್ಯಕ್ಷ ಕೆ.ಆರ್.ಸ್ವಾಮಿಗೌಡ ಮಾತನಾಡಿ, ನಮ್ಮ ಲಯನ್ಸ್ ಕ್ಲಬ್ ವತಿಯಿಂದ ಈಗಾಗಲೇ ತಾಲೂಕಿನ ಹಲವು ಗ್ರಾಮಗಳಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆಸಿ ತೊಂದರೆ ಇರುವವರಿಗೆ ಉಚಿತವಾಗಿ ಕನ್ನಡಕ ವಿತರಣೆ ಮಾಡಲಾಗಿದೆ. ನಾವು ನಡೆಸಿದ ಎಲ್ಲಾ ಶಿಬಿರದಲ್ಲೂ ಸಾಕಷ್ಟು ಮಂದಿ ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಗ್ರಾಮೀಣ ಜನರ ಅನುಕೂಲಕ್ಕಾಗಿ ನಡೆಸುತ್ತಿರುವ ಶಿಬಿರದ ಸದ್ಬಳಕೆ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.

ಈ ವೇಳೆ ಲಯನ್ಸ್ ಕ್ಲಬ್ ಕಾರ್ಯದರ್ಶಿ ಪುಟ್ಟಬಸವೇಗೌಡ, ಗ್ರಾಮ ಸದಸ್ಯರಾದ ಸಿ.ಎ.ಲೋಕೇಶ್, ಪರಮೇಶ್, ಮಾಜಿ ಸದಸ್ಯ ಮಹದೇವು, ವಿಎಸ್‌ಎಸ್‌ಎನ್‌ಬಿ ಮಾಜಿ ಅಧ್ಯಕ್ಷ ಮಂಜುನಾಥ್, ಡೈರಿ ಆನಂದ್ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಹಲವರು ಭಾಗವಹಿಸಿದ್ದರು.

# ಮಹಿಳಾ ಸಬಲೀಕರಣಕ್ಕೆ ಧರ್ಮಸ್ಥಳ ಸಂಸ್ಥೆ ವರದಾನ



ಶಿಬಿರದಲ್ಲಿ ಫಲಾನುಭವಿಗಳಿಗೆ ಮಲ್ಲಿಕಾರ್ಜುನ್ ಕನ್ನಡಕಗಳನ್ನು ವಿತರಿಸಿದರು.

ಕೆ.ಆರ್.ಪೇಟೆ, ಡಿ.11– ಗ್ರಾಮೀಣ ಜನರ ಸ್ವಾವಲಂಬಿ ಬದುಕಿಗೆ ಹಾಗೂ ಮಹಿಳಾ ಸಬಲೀಕರಣಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಯೋಜನೆಗಳು ವರದಾನವಾಗಿವೆ ಎಂದು ಶ್ರೀಧರ್ಮಸ್ಥಳ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಆರ್.ಟಿ.ಒ. ಮಲ್ಲಿಕಾರ್ಜುನ್ ತಿಳಿಸಿದರು.

ಪಟ್ಟಣದ ಜಯನಗರದಲ್ಲಿರುವ ಮಲ್ಲಿಕಾರ್ಜುನ್ ಚಾರಿಟಬಲ್ ಟ್ರಸ್ಟ್ ಸಭಾಂಗಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಹುಟ್ಟುಹಬ್ಬದ ಅಂಗವಾಗಿ ನಡೆದ ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿಗೆ ಕನ್ನಡಕಗಳನ್ನು ವಿತರಿಸಿ ಮಾತನಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಪೂಜ್ಯ ಖಾವಂದರು ಗ್ರಾಮೀಣ ಮಹಿಳೆಯರಿಗೆ ವೃತ್ತಿ ಕೌಶಲ್ಯ ಮಾರ್ಗದರ್ಶನ ನೀಡುವ ಜೊತೆಗೆ ಬ್ಯಾಂಕುಗಳ ಮೂಲಕ ಸಾಲ ಕೊಡಿಸಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿದ್ದಾರೆ ಎಂದರು.

ಮಲ್ಲಿಕಾರ್ಜುನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಅಕ್ಕಿಹೆಬ್ಬಾಳಿನ ಹೇಮಾವತಿ ಹೊನ್ನಾರು ವೇದಿಕೆ, ಸಾಕ್ಷಿಬೀಡಿನ ಶ್ರೀಲಕ್ಷ್ಮಿದೇವಿ ದೇವಸ್ಥಾನ ಜೀರ್ಣೋದ್ಧಾರ ಸೇವಾ ಟ್ರಸ್ಟ್, ಅಟ್ಟುಪ್ಪೆ ಗ್ರಾಮದ ಶ್ರೀಮಾರಮ್ಮ ದೇವಸ್ಥಾನ ಹಾಗೂ ತುಳಸಿ ಗ್ರಾಮದ ಶ್ರೀಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ತಲಾ 50 ಸಾವಿರ ರೂ.ಗಳ ಸಹಾಯ ಧನದ ಚೆಕ್ಕುಗಳನ್ನು ವಿತರಿಸಿದರು.

ಶ್ರವಣ ದೋಷದಿಂದ ಬಳಲುತ್ತಿರುವ ಮಂಜೇಗೌಡ, ಜಯಲಕ್ಷ್ಮಿ, ಸೋಮಶೇಖರ್ ಅವರಿಗೆ ಚಿಕಿತ್ಸೆ ಸಹಾಯ ಧನ ನೀಡಿದರು. ಬಿಹಾರದಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ಸೈಕಲ್ ಪೋಲೋ ಕ್ರೀಡಾಕೂಟದಲ್ಲಿ ಭಾಗವಹಿಸಿದ ಅಲಂಬಾಡಿ ಕಾವಲು ಗ್ರಾಮದ ವಿದ್ಯಾರ್ಥಿನಿಗೆ ಪ್ರೋತ್ಸಾಹ ಮತ್ತು ಅಜಯ್ ಅವರಿಗೆ ಆರ್ಥಿಕ ಸಹಾಯ ನೀಡಿ ಸನ್ಮಾನಿಸಲಾಯಿತು.

ಈ ವೇಳೆ ವೇದಿಕೆಯ ಜಿಲ್ಲಾ ಉಪಾಧ್ಯಕ್ಷೆ ನಳಿನಾ, ಸದಸ್ಯರಾದ ಎ.ಆರ್.ರಘು, ಮಂಜು, ಸುನೀತಾ, ಕಸಾಪ ಮಾಜಿ ಅಧ್ಯಕ್ಷ ಎಂ.ಕೆ.ಹರಿಚರಣತಿಲಕ್, ಕೆ.ಆರ್.ನೀಲಕಂಠ, ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ಡಾ.ಯೋಗೀಶ್, ತಾಲೂಕು ಯೋಜನಾಧಿಕಾರಿ ತಿಲಕ್‌ರಾಜ್, ಪ್ರಸಾದ್, ಮೇಲ್ವಿಚಾರಕ ಸಂಗೀತ, ಮಲ್ಲಿಕಾರ್ಜುನ್ ಚಾರಿಟಬಲ್ ಟ್ರಸ್ಟಿ ಮಹೇಶ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಎನ್.ಪ್ರವೀಣ್, ಅಕ್ಕಿಹೆಬ್ಬಾಳು ಸೊಸೈಟಿ ಅಧ್ಯಕ್ಷ ಆರ್.ವಾಸು, ತಾಪಂ ಮಾಜಿ ಅಧ್ಯಕ್ಷ ಪ್ರಭುದೇವೇಗೌಡ, ಗ್ರಾಪಂ ಸದಸ್ಯರಾದ ಮಂಜೇಗೌಡ, ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ಅರುಣ್‌ಕುಮಾರ್ ಸೇರಿದಂತೆ ಇತರರಿದ್ದರು.

# ಗಾಂಧಿ, ಅಂಬೇಡ್ಕರ್ ಆದರ್ಶಗಳನ್ನು ಪಾಲಿಸಿ: ಪ್ರೊ.ಜಯಪ್ರಕಾಶಗೌಡ



ಕಾರ್ಯಕ್ರಮವನ್ನು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ಉದ್ಘಾಟಿಸಿದರು.

ಮಂಡ್ಯ, ಡಿ.11– ಮಹಾತ್ಮ ಗಾಂಧೀಜಿಯವರು ದೇಶದ ಸ್ವತಂತ್ರಕ್ಕಾಗಿ ಹೋರಾಡಿದರೆ, ಡಾ.ಬಿ.ಆರ್.ಅಂಬೇಡ್ಕರ್ ದೇಶದ ಸಮಾನತೆಗಾಗಿ ಹೋರಾಡಿದ್ದಾರೆ. ಅವರ ಚಿಂತನೆ ನಿಲುವು, ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಪಾಲಿಸಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ತಿಳಿಸಿದರು.

ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ ಗಾಂಧಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಗಣಕ ವಿಜ್ಞಾನ ವಿಭಾಗದಿಂದ ಮಂಡ್ಯ ವಿವಿ ಆಡಳಿತ ಭವನದಲ್ಲಿ ಆಯೋಜಿಸಿದ್ದ ಗಾಂಧಿ ವಿಚಾರ ಧಾರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗಾಂಧೀಜಿಯವರ ಆಶಯದಂತೆ ಇಂದು ಹೆಣ್ಣು ಮಕ್ಕಳು ಸ್ವಾತಂತ್ರ ಮತ್ತು ಸಮಾನತೆಯಿಂದ ಬದುಕುತ್ತಿದ್ದಾರೆ. ಗಂಡು ಮಕ್ಕಳನ್ನು ಮೀರಿ ಎಲ್ಲಾ ಕ್ಷೇತ್ರದಲ್ಲೂ ಮುಂದುವರೆಯುತ್ತಿ ದ್ದಾರೆ. ಪ್ರಸ್ತುತ ಮಹಿಳೆಯರು ಪ್ರವೇಶಿಸದಿರುವ ಕ್ಷೇತ್ರವಿಲ್ಲ. ಭಾರತದ ಯಶಸ್ಸಿಗೆ ಹಾಗೂ ಬದಲಾವಣೆಗೆ ಹೆಣ್ಣುಮಕ್ಕಳ ಸಮಾನತೆ ಕಾರಣ ಎಂದರೆ ತಪ್ಪಾಗುವುದಿಲ್ಲ ಎಂದರು.

ಗಾಂಧಿಜೀಯವರು ತಿಳಿಸದ ವಿಷಯವಿಲ್ಲ. ಸ್ವಚ್ಛತೆ, ಶ್ರಮ, ಕೃಷಿ, ಆಹಾರ, ಆರೋಗ್ಯ ಹಾಗೂ ಜೀವನ ಮೌಲ್ಯಗಳ ಬಗ್ಗೆ ಅವರು ಮಾತನಾಡಿದ್ದಾರೆ. ಗಾಂಧೀಜಿಯವರು ಸರಳ ಜೀವನಕ್ಕೆ ಪ್ರಮುಖ ಉದಾಹರಣೆಯಾಗಿದ್ದಾರೆ. ಸರಳತೆಯೇ ಜಗತ್ತಿನ ಸಾರ ಎಂದ ಅವರು ಶಸ್ತ್ರ ಹಿಡಿಯದೆ, ರಕ್ತ ಪಾತವಿಲ್ಲದೆ, ದೇಶಕ್ಕೆ ಸ್ವತಂತ್ರ ತಂದು ಕೊಟ್ಟಿದ್ದಾರೆ. ವಿಶ್ವದಲ್ಲಿಯೇ ಶಾಂತಿ, ಸೌಹಾರ್ದತೆಯಿಂದ ದೇಶಕ್ಕೆ ಸ್ವಾತಂತ್ರ ತಂದ ನಿದರ್ಶನ ಗಾಂಧಿಯವರದ್ದು ಎಂದು ಬಣ್ಣಿಸಿದರು.

ಶಿಕ್ಷಣ ಕೇವಲ ಉದ್ಯೋಗಕ್ಕಾಗಿ ಸೀಮಿತವಲ್ಲ. ಶಿಕ್ಷಣದಿಂದ ಅರಿವು, ಜ್ಞಾನ, ಜೀವನದ ಮೌಲ್ಯ ಎಲ್ಲವೂ ತಿಳಿಯಲು ಸಾಧ್ಯ ವಿದ್ಯಾರ್ಥಿಗಳಾದ ನೀವು ಪ್ರಶ್ನಿಸುವ ಮನೋಭಾವನೆ ಬೆಳೆಸಿಕೊಳ್ಳಬೇಕು. ಜೊತೆಗೆ ಕೇಳಿಸಿಕೊಳ್ಳುವ ಆಸಕ್ತಿಯನ್ನು ಸಹ ಮೈಗೂಡಿಸಿಕೊಳ್ಳಬೇಕು. ವಿಷಯಗಳನ್ನು ಸಂಪೂರ್ಣವಾಗಿ ಕೇಳಿಸಿಕೊಂಡಾಗ ಮಾತ್ರ ವಿಷಯದ ಆಳವಾದ ಮಾಹಿತಿ ಅರ್ಥೈಸಿಕೊಳ್ಳಲು ಸಾಧ್ಯ ಎಂದರು.

ಮಂಡ್ಯ ವಿವಿ ಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ ಮಾತನಾಡಿ, ಗಾಂಧೀಜಿಯವರು ಅಂದಿಗೂ ಇಂದಿಗೂ ಎಂದೆಂದಿಗೂ ಎಲ್ಲರಿಗೂ ಅನ್ವಯವಾಗುವಂತವರು. ಹೀಗಾಗಿ ಗಾಂಧಿಯವರ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು. ಆರ್ಥಿಕವಾಗಿ ಚಿಂತಕರಾಗಿ ದೇಶದಲ್ಲಿ ಬಡತನ ನಿವಾರಣೆಯಾಗಬೇಕು ಹಾಗೂ ದೇಶ ಸ್ವಾವಲಂಬಿ ಆಗಬೇಕು ಎಂಬುದು ಅವರ ಆಶಯವಾಗಿತ್ತು ಎಂದರು.

ಕಾರ್ಯಕ್ರಮದಲ್ಲಿ ಗಾಂಧೀಜಿ ಚಿಂತನೆಗಳ ಪ್ರಸ್ತುತತೆ ಕುರಿತು ಬೆಂಗಳೂರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ನಿರ್ದೇಶಕರಾದ ಜಿ.ಬಿ.ಶಿವರಾಜು ಹಾಗೂ ರಾಜ್ಯ ಸಂಪನ್ಮೂಲ ಕೇಂದ್ರ ನಿವೃತ್ತ ನಿರ್ದೇಶಕ ಎಸ್.ತುಕಾರಾಂ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ಸುಮಾರಾಣಿ ಶಂಭು, ಉಪಕುಲ ಸಚಿವ ಡಾ.ಎಂ ವೈ.ಶಿವರಾಮು, ಜಿ.ವಿ.ವೆಂಕಟರಮಣ, ಗಣಕ ವಿಜ್ಞಾನ ವಿಭಾಗ ಮುಖ್ಯಸ್ಥ ಜಿ.ವಿ.ಪ್ರೇಮ್ ಸಿಂಗ್ ಹಾಜರಿದ್ದರು.

ಒಂದನೇ ಪುಟದಿಂದ

## ಡ್ರಗ್ಸ್ ದಂಧೆ ವಿರುದ್ಧ ಸಮರ

ಮಾರಾಟ ಮಾಡುವುದು ಕಾನೂನಾತ್ಮಕ ಅಪರಾಧ'ವಾಗಿರುತ್ತದೆ. ಗಾಂಜಾ ಸೇವನೆಯಿಂದ ಆಗುವ ದುಷ್ಪರಿಣಾಮಗಳು ಮತ್ತು ಅದರಿಂದಾಗುವ ಶಿಕ್ಷೆಯ ಕುರಿತು ಶಾಲಾ–ಕಾಲೇಜುಗಳಲ್ಲಿ, ಪೊಲೀಸ್ ಠಾಣೆಗಳಲ್ಲಿ ನಿಯಮಿತವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗಿರುತ್ತದೆ ಎಂದು ಹೇಳಿದ್ದಾರೆ.

**ಮಾದಕ ವಸ್ತುವಿನ ದುಷ್ಪರಿಣಾಮ ಮನವರಿಕೆ:** ಮಾದಕ ದ್ರವ್ಯಗಳ ಅಕ್ರಮ ಸಾಗಾಟ ಮತ್ತು ಜಾಲದ ಕುರಿತು ಸ್ಥಳೀಯ ಬಾತ್ಮೀದಾರರು, ಅಪರಾಧ ವಿಭಾಗದ ಸಿಬ್ಬಂದಿ ಹಾಗೂ ಬೀಟ್ ಸಿಬ್ಬಂದಿಯಿಂದ ಮಾಹಿತಿ ಕಲೆ ಹಾಕಲಾಗುತ್ತಿದೆ. ಪೊಲೀಸ್ ಠಾಣೆಯಲ್ಲಿ ಮಾದಕ ದ್ರವ್ಯಗಳ ಅಕ್ರಮ ಸಾಗಾಟದ ಬಗ್ಗೆ ವಿಶೇಷವಾಗಿ ಮಾಹಿತಿಯನ್ನು ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತಿ ತಿಂಗಳು ಶಾಲಾ–ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ಭೇಟಿ ನೀಡಿ, ಮಾದಕ ವಸ್ತುಗಳ ಸೇವನೆ ಯಿಂದ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಸಂಶಯಾಸ್ಪದ ಹೈಸೆಕ್ಯುರಿಟಿ ಸ್ಥಳಗಳಲ್ಲಿ ಬಿಗಿ ನಿಗಾವಣೆ ಇಡಲಾಗಿದೆ. ಪಾರ್ಸಲ್ ಸರ್ವೀಸ್, ಕೋರಿಯರ್ ಸೆಂಟರ್, ರೆಸಾರ್ಟ್/ಫಾರ್ಮ್ ಹೌಸ್‌ಗಳಿಗೆ ದಿಢೀರ್ ಭೇಟಿ ಕೈಗೊಂಡು ನಗರದ ಹೊರವಲಯಗಳಲ್ಲಿ ಡ್ರಗ್ಸ್ ಪಾರ್ಟಿಗಳನ್ನು ತಡೆಗಟ್ಟುವ ಬಗ್ಗೆ ವಿಶೇಷ ಪೆಟ್ರೋಲಿಂಗ್ ನಡೆಸಲಾಗಿರುತ್ತದೆ. ಪ್ರತಿ ತಿಂಗಳಲ್ಲಿ ಜಿಲ್ಲಾಮಟ್ಟದ ಎನ್‌ಸಿಓಆರ್‌ಡಿ ಸಭೆಗಳನ್ನು ನಡೆಸಲು ಎಲ್ಲಾ ಘಟಕಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಪ್ರತಿ ವರ್ಷ ಜೂನ್ 26ರಂದು ಮಾದಕ ವಸ್ತುಗಳ ನಿಗ್ರಹ ದಿನವನ್ನು ಆಚರಣೆ ಮಾಡಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಮಾದಕ ವಸ್ತು ಮಾರಾಟ, ಉತ್ಪಾದನೆ ಬಗ್ಗೆ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆಯಡಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ವಿ.ಸಿ ಮೂಲಕವು ಸಹ ಎಲ್ಲ ಘಟಕಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ ಎಂದು ಮಾಹಿತಿ ನೀಡಿದ್ದಾರೆ

## ವಿದೇಶಿಗರಿಗೆ ಬಾಡಿಗೆಗೆ ನೀಡಿದ ಮನೆ 'ಧ್ವಂಸ'

ಅಧಿಕಾರಿಗಳು ಭೇಟಿ ನೀಡಿ ಡ್ರಗ್ಸ್ ಬಗ್ಗೆ ಪರಿಶೀಲನೆ ನಡೆಸಿ, ಜಾಗೃತಿ ಮೂಡಿಸಿದ್ದಾರೆ. ಎಡಿಜಿಪಿ ನೇತೃತ್ವದಲ್ಲಿ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ ಸ್ಥಾಪಿಸಿ ಡ್ರಗ್ಸ್ ವಿರುದ್ಧ ನಿರಂತರ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ ಅಧಿಕಾರಿಗಳು ರಾಜ್ಯಾದ್ಯಂತ ಮಾದಕವಸ್ತು ಮಾರಾಟ, ಸೇವನೆ, ಸರಬರಾಜು ವಿರುದ್ಧ ಹದ್ದಿನ ಕಣ್ಣಿಟ್ಟಿದೆ ಎಂದರು.

## ಆದೇಶ ರದ್ದುಗೊಳಿಸಿದ ಹೈಕೋರ್ಟ್

ರಾಜ್ಯ ಕಾಂಗ್ರೆಸ್ ಸರ್ಕಾರ, ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಧಾನಿ ಮೋದಿ ಜನಪ್ರಿಯತೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಅಹಿಂದ ಮುಖ್ಯಮಂತ್ರಿ ಎಂಬುದಾಗಿ ಬೊಬ್ಬೆ ಹೊಡೆಯುವ ಸಿದ್ದರಾಮಯ್ಯ, ಹಿಂದುಳಿದ ಸಮುದಾಯಕ್ಕೆ ಸೇರಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪರ ಕಾರ್ಯಕ್ರಮಗಳನ್ನು ಸಹಿಸುತ್ತಿಲ್ಲ. ಕೇಂದ್ರದ ಎನ್‌ಡಿಎ ಸರ್ಕಾರ ಸಾಕಷ್ಟು ಜನಪರ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಕೊಟ್ಟಿದೆ. ಸ್ವಾತಂತ್ರ್ಯಾನಂತರ ಪ್ರಥಮ ಬಾರಿಗೆ ಸತತವಾಗಿ 3ನೇ ಬಾರಿಗೆ ಪ್ರಧಾನಿಯಾಗಿ ಮೋದಿ ಸೇವೆ ಸಲ್ಲಿಸುತ್ತಿದ್ದಾರೆ. ಜನೌಷಧಿ ಮಳಿಗೆಗಳನ್ನು ಸ್ಥಗಿತಗೊಳಿಸುವ ಮೂಲಕ ಪ್ರಧಾನಿ ಮೋದಿ ನೀಡಿರುವ ಜನಪರ ಹಾಗೂ ಬಡವರ ಯೋಜನೆಗೆ ಕಲ್ಲು ಹಾಕುವ ಷಡ್ಯಂತ್ರ ಮತ್ತು ಹುನ್ನಾರ ಸಿದ್ದರಾಮಯ್ಯ ಸರಕಾರದ್ದಾಗಿದೆ ಎಂದು ಟೀಕಿಸಿದರು.

## ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ

ಸೇರಿದ ಶಾಸಕರ ಜೊತೆ ಬೋಜನಕೂಟ ನಡೆಸಿ ಸಿದ್ದರಾಮಯ್ಯ ಕೈಬಲಪಡಿಸುವ ನಿರ್ಣಯ ಮಾಡಿದ್ದಾರೆ. ಅಧಿಕಾರ ಹಸ್ತಾಂತರ ಕುರಿತಂತೆ ಯಾವುದೇ ಹೇಳಿಕೆ ನೀಡಬಾರದು ಮತ್ತು ಈ ಸಂಬಂಧ ಔತಣಕೂಟಗಳನ್ನು ನಡೆಸಬಾರದೆಂಬುದಾಗಿ ಎಐಸಿಸಿಯಿಂದ ಸ್ಪಷ್ಟ ಸಂದೇಶ ನೀಡಿದ್ದರೂ ಲೆಕ್ಕಿಸದೆ, ಸಿದ್ದ ರಾಮಯ್ಯ ಬಣ ಆದೇಶಗಳನ್ನು ಉಲ್ಲಂಘಿಸಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಯತೀಂದ್ರ, ನನ್ನ ತಂದೆಯೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ. ಯತೀಂದ್ರ ಹೇಳಿಕೆ ಬಗ್ಗೆ ಮೌನ ವಹಿಸಿರುವ ಶಿವಕುಮಾರ್ ಬಣ, ಇವರ ಹಿಂದೆ ಯಾರೋ ಇದ್ದಾರೆ, ಅವರ ಅಣತಿಯಂತೆ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ರಾಮನಗರದ ಶಾಸಕ ಇಕ್ಬಾಲ್ ಹುಸೇನ್ ಮಾಧ್ಯಮದವರ ಮುಂದೆ ಹೇಳಿಕೆ ನೀಡಿ, ನಾವು ಮಾತನಾಡಿದರೆ ಬಲಾತ್ಕಾರ, ಅವರು ಮಾತ ನಾಡಿದರೆ ಚಮತ್ಕಾರ, ನಮಗೆ ಮಾತನಾಡಬಾರದೆಂದು ನಾಯಕರಿಂದ ಆದೇಶವಿದೆ ಎಂದರು.

## ಮೇಲ್ಛಾವಣಿ ಕಾಂಕ್ರೀಟ್ ಕುಸಿತ

ಅಕ್ಕಪಕ್ಕದ ಸಣ್ಣ ಪ್ರವೇಶ ಮಾರ್ಗದಲ್ಲಿ ಮಾತ್ರವೇ ವೀಕ್ಷಕರ ಆಗಮನ ಮತ್ತು ನಿರ್ಗಮನಕ್ಕೆ ಅವಕಾಶ ಇದೆ. ಹೀಗಾಗಿ ಕಾಂಕ್ರೀಟ್ ಕುಸಿದ ಸ್ಥಳದಲ್ಲಿ ಯಾರೂ ಇಲ್ಲದ ಹಿನ್ನೆಲೆಯಲ್ಲಿ ಯಾವುದೇ ಅಪಾಯವಾಗಿಲ್ಲ. ಆದರೆ ಇಲ್ಲಿ ನಿಲುಗಡೆ ಮಾಡಿದ್ದ ಹೋಮ್‌ಗಾರ್ಡ್ ಒಬ್ಬರ ಬೈಕ್ ಸಂಪೂರ್ಣ ಜಖಂಗೊಂಡಿದೆ.

ಇಂದು ಬೆಳಗ್ಗೆ 11.30ರ ವೇಳೆಯಲ್ಲಿ ಮೇಲ್ಛಾವಣಿ ಕಾಂಕ್ರೀಟ್ ಕುಸಿದು ಬಿದ್ದಿದೆ. ಸಾಕಷ್ಟು ದ್ವಾರಗಳನ್ನು ಮೈಸೂರು ಅರಮನೆ ಹೊಂದಿದ್ದು, ಅದರಲ್ಲಿ ಇದು ಸಹ ಪ್ರಮುಖ ದ್ವಾರವಾಗಿದೆ. ಒಂದು ವೇಳೆ ಸಿಬ್ಬಂದಿ ಬೈಕ್ ಪಾರ್ಕ್ ಮಾಡುವ ಸಂದರ್ಭದಲ್ಲಿ ಈ ಕುಸಿತ ಉಂಟಾಗಿದ್ದರೆ ಅನಾಹುತ ಸಂಭವಿಸುತ್ತಿತ್ತು. ಗಾಯಗೊಳ್ಳುವ ಅಪಾಯ ಸಹ ಇತ್ತು. ಅದೃಷ್ಟವಶಾತ್ ಆ ಸಂದರ್ಭದಲ್ಲಿ ಸದರಿ ಸ್ಥಳದಲ್ಲಿ ಯಾರು ಇರಲಿಲ್ಲ.

ದ್ವಾರದಲ್ಲಿನ ಕಾಂಕ್ರೀಟ್ ಕಳಚಿದ್ದರಿಂದ ಕಬ್ಬಿಣದ ಸಲಾಕೆಗಳು ಗೋಚರಿಸುತ್ತಿದ್ದು, ಶೀಘ್ರ ದುರಸ್ತಿಪಡಿಸಿದರೆ ಮತ್ತಷ್ಟು ಹಾನಿ ತಪ್ಪಲಿದೆ. ಕುಸಿದು ಬಿದ್ದಿದ್ದ ಕಾಂಕ್ರೀಟ್ ಅನ್ನು ತೆರವುಗೊಳಿಸಿ, ಸ್ಥಳವನ್ನು ಸ್ವಚ್ಛ ಗೊಳಿಸಲಾಗಿದೆ ಶತಮಾನದ ಇತಿಹಾಸ ಹೊಂದಿರುವ ಮೈಸೂರು ಅರಮನೆಗೆ ಕಾಯಕಲ್ಪ ನೀಡಬೇಕೆಂಬ ಚರ್ಚೆ ಇದೀಗ ಆರಂಭವಾಗಿದೆ.

**ಅರಮನೆ ದಕ್ಷಿಣ ದ್ವಾರ:** 1897–1912ರ ಅವಧಿಯಲ್ಲಿ ನಿರ್ಮಿಸಲಾದ ಮೈಸೂರು ಅರಮನೆಯು ಇಂಡೋ–ಸಾರ್ಸೆನಿಕ್ ಶೈಲಿಯನ್ನು ಹೊಂದಿದೆ. ಇಂಗ್ಲಿಷ್ ವಾಸ್ತುಶಿಲ್ಪಿ ಹೆನ್ರಿ ಇರ್ವಿನ್ ಇದರ ವಿನ್ಯಾಸಕಾರರು. ಅರಮನೆಯು ಸುಂದರವಾಗಿ ವಿನ್ಯಾಸಗೊಳಿಸಲಾದ ಚೌಕಾಕಾರದ ಗೋಪುರಗಳನ್ನು ಹೊಂದಿದೆ. ವರಹಾ ದ್ವಾರವು ಅರಮನೆಯ ದಕ್ಷಿಣ ದಿಕ್ಕಿನಲ್ಲಿದ್ದು, ದ್ವಾರದ ಸಮೀಪದಲ್ಲಿ ಶ್ವೇತ ವರಹಾ ಸ್ವಾಮಿ ದೇವಸ್ಥಾನ ಸಹ ಇದೆ.

**ಗೋಡೆಗೆ ಭಾರೀ ಹಾನಿ:** ಮೈಸೂರು ಅರಮನೆಯ ಉತ್ತರ ದಿಕ್ಕಿನಲ್ಲಿರುವ ಜಯರಾಮ ದ್ವಾರದ ಸಮೀಪದ ಶ್ರೀ ಓಂಟೆರಾಮಾಚಾರ್ಯರ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಅರಮನೆ ಕಟ್ಟಡಕ್ಕೂ (ಹಿಂದೆ ಇದ್ದ ಕನ್ನಡ ಸಾಹಿತ್ಯ ಪರಿಷತ್ ಕಚೇರಿ ಕಟ್ಟಡಕ್ಕೆ ಹೊಂದಿಕೊಂಡಿರುವ ಜಾಗ) ಹಾನಿಯಾಗಿದೆ. ಇಲ್ಲಿ ಗೋಡೆಯಿಂದ ಇಟ್ಟಿಗೆಗಳು ಕಳಚಿ ಬಿದ್ದಿದ್ದು, ಸಾಕಷ್ಟು ದೊಡ್ಡದಾಗಿ ಕಿಂಡಿಯೇ ನಿರ್ಮಾಣವಾಗಿದೆ. ಒಮ್ಮೆ ಜೋರು ಮಳೆಯಾದಲ್ಲಿ ಇಡೀ ಗೋಡೆಯೇ ಕುಸಿದು ಭಾರೀ ಹಾನಿಯಾಗುವ ಸಾಧ್ಯತೆಯೂ ಇದೆ.

## ಕುಟುಂಬ ಸಂಖ್ಯೆ

ಉದ್ದೇಶದಿಂದ ಈ ಷರತ್ತು ರೂಪಿಸಲಾಗಿದೆ. ಕುಟುಂಬ ಸಂಖ್ಯೆ ಮತ್ತು ಕುಟುಂಬಗಳ ವಿವರಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಲು ಅಥವಾ ಲಭ್ಯವಿರುವಂತೆ ಮಾಡುವಂತಿಲ್ಲ. ನ್ಯಾಯಾಲಯಗಳ ಆದೇಶದ ಮೇರೆಗಷ್ಟೇ ವಿವರ ಸಾರ್ವಜನಿಕವಾಗಿ ಬಹಿರಂಗಪಡಿಸಬಹುದಾಗಿದೆ. ರಾಜ್ಯ ಸರ್ಕಾರದ ಯಾವುದಾದರೂ ಕಾನೂನಿನ ಪ್ರಕಾರ ಈ ವಿವರಗಳನ್ನು ನೀಡುವುದು ಕಡ್ಡಾಯವಾದ ಸಂದರ್ಭದಲ್ಲಿ ಮಾತ್ರ, ಬಹಿರಂಗಪಡಿಸ ಬಹುದಾಗಿದೆ. ವಿವಿಧ ಇಲಾಖೆಗಳಿಗೆ ನೀಡಿರುವ ಕುಟುಂಬ ಸಂಖ್ಯೆಯ ವಿವರಗಳು, ಸೀಮಿತ ಅವಧಿಯವರೆಗೆ ಮಾತ್ರ ಆ ಇಲಾಖೆಗಳಿಗೆ ಲಭ್ಯವಿರಲಿದೆ. ಆ ಅವಧಿ ಮುಗಿದ ನಂತರ ಇಲಾಖೆಗಳಿಗೆ ನೀಡಲಾಗಿದ್ದ ಕುಟುಂಬ ತಂತ್ರಾಂಶದ ಆಕ್ಸೆಸ್ ಸ್ಥಗಿತವಾಗಲಿದೆ

**ದುರುಪಯೋಗಕ್ಕೆ ದಂಡ, ಜೈಲು ಶಿಕ್ಷೆ:** ಕುಟುಂಬ ಸಂಖ್ಯೆ ಮತ್ತು ವಿವರಗಳನ್ನು ದುರುಪಯೋಗ ಮಾಡಿಕೊಳ್ಳುವವರಿಗೆ ಮೂರು ವರ್ಷಗಳವರೆಗೆ ಜೈಲು ಅಥವಾ ರೂ 55,000ದಿಂದ 1 ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ.

## ಮೋದಿ, ಬಿಜೆಪಿಯೇ ನಿರ್ಧರಿಸಬೇಕು

ತುಂಬಿದ ನಂತರ ನಿವೃತ್ತಿಯಾಗುವ ಕುರಿತ ಚರ್ಚೆ ಮಹತ್ವ ಪಡೆದುಕೊಂಡಿತು. ನಂತರ ಬಿಜೆಪಿ, ನಿರ್ದಿಷ್ಟ ವಯಸ್ಸಿನಲ್ಲಿ ನಿವೃತ್ತರಾಗಬೇಕೆಂದು ಹೇಳುವ ಯಾವುದೇ ನಿಯಮ ಪಕ್ಷದಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಿತ್ತು.

**ಭಕ್ತರೇ ದೇವಾಲಯ ನಿರ್ವಹಿಸಬೇಕು:** ನಂತರ ಕಾರ್ಯಕ್ರಮದಲ್ಲಿ ನಡೆದ ಸಂವಾದದಲ್ಲಿ 'ಭಕ್ತರೇ ದೇವಾಲಯಗಳನ್ನು ನಿರ್ವಹಿಸಬೇಕೆಂಬುದು ಜನರು ಮತ್ತು ನ್ಯಾಯಾಂಗದ ಒಮ್ಮತದ ಅಭಿಪ್ರಾಯವಾಗಿದೆ. ಆದರೆ ಪ್ರಸ್ತುತ ದೇವಾಲಯಗಳನ್ನು, ಸರ್ಕಾರ ನಿರ್ವಹಿಸುತ್ತಿದೆ ಎಂದು ಭಾಗವತ್ ಹೇಳಿದರು. ಖಾಸಗಿ ವ್ಯಕ್ತಿಗಳು ಕೆಲವು ದೇವಾಲಯಗಳನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಅದೇ ರೀತಿ ಕೆಲವು ಸರ್ಕಾರಗಳೂ ದೇವಾಲಯಗಳನ್ನು ಚೆನ್ನಾಗಿ ನಿರ್ವಹಿಸುತ್ತಿವೆ. ಈ ಸಮಸ್ಯೆಯನ್ನು ನಿಭಾಯಿಸಲು ಒಂದು ಸಾಧನ ಬೇಕು. ಅದೇ ಅಖಿಲ ಭಾರತ ಸಮಿತಿ ಪ್ರಾಂತೀಯ ಸಮಿತಿ ಜಿಲ್ಲಾ ಸಮಿತಿ ಮತ್ತು ಸ್ಥಳೀಯ ಸಮಿತಿಗಳ ರಚನೆ ಎಂದು ಭಾಗವತ್ ಹೇಳಿದರು.

ಒಂದು ಸಾರಿ ಈ ಸಾಧನ ಸಿದ್ಧವಾದರೆ ನಂತರ ದೇವಾಲಯಗಳನ್ನು ನಿರ್ವಹಿಸುವುದು ಸರ್ಕಾರವೋ ಭಕ್ತರೋ ಎಂಬ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಆದರೆ ಭಕ್ತರು ದೇವಾಲಯಗಳನ್ನು ನಿರ್ವಹಣೆ ಮಾಡಬೇಕೆಂಬುದಕ್ಕೆ ಸಾಮಾನ್ಯ ಒಮ್ಮತವಿದೆ. ನಾವು ಈ ಕುರಿತು ಹೆಚ್ಚು ಕೆಲಸ ಮಾಡಬೇಕು ಎಂದು ಅವರು ಹೇಳಿದರು.

### ಜನ ವಸತಿ ಇಲ್ಲದ ಕಡೆ ವಾಹನ ನಿಲ್ಲಿಸುವ ಮುನ್ನ ಎಚ್ಚರ

# ರಾಜ್ಯ, ರಾಷ್ಟ್ರೀಯ ಹೆದ್ದಾರಿಯಲ್ಲಿ 3 ವರ್ಷಗಳಲ್ಲಿ 403 ದರೋಡೆ, ಸುಲಿಗೆ



ಬೆಂಗಳೂರು, ಡಿ.11– ಪ್ರವಾಸಕ್ಕೆಂದು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಸಂಚರಿಸುವಾಗ ಮೈಮರೆಯದಿರಿ. ಸ್ವಂತ ಕಾರಿನಲ್ಲಿ ಪ್ರಯಾಣ ಮಾಡುವಾಗಲೂ ಎಚ್ಚರದಿಂದಿರಿ. ಜನ ವಸತಿ ಇಲ್ಲದ ಕಡೆಗಳಲ್ಲಿ ಯಾರಾದರೂ ಕಾರು ನಿಲ್ಲಿಸಲು ಕೋರಿದರೆ ಎಚ್ಚರ ವಹಿಸಿ. ಕಾರಣ ಹೆದ್ದಾರಿಗಳಲ್ಲಿ ದರೋಡೆ, ಸುಲಿಗೆಕೋರರು ಹೆಚ್ಚಾಗಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ 403 ಇಂತಹ ಪ್ರಕರಣ ರಾಜ್ಯದಲ್ಲಿ ವರದಿಯಾಗಿವೆ.

ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಲಿಗೆಕೋರರು ಹಾಗೂ ದರೋಡೆಕೋರರ ಹಾವಳಿ ಹೆಚ್ಚಾಗಿದ್ದು, 2023 ರಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ 81 ಸುಲಿಗೆ ಹಾಗೂ 23 ದರೋಡೆ ಪ್ರಕರಣ ವರದಿಯಾಗಿದೆ. 2024 ರಲ್ಲಿ 66 ಸುಲಿಗೆ ಹಾಗೂ 16 ದರೋಡೆ ಪ್ರಕರಣ ನಡೆದಿದೆ. 2025 ರ ನವೆಂಬರ್ 15 ವರೆಗಿನ ಮಾಹಿತಿಯ ಪ್ರಕಾರ 51 ಸುಲಿಗೆ ಮತ್ತು 14 ದರೋಡೆ ಪ್ರಕರಣ ವರದಿಯಾಗಿದೆ. ಇನ್ನು ರಾಜ್ಯ ಹೆದ್ದಾರಿಯಲ್ಲಿ 2023 ರಲ್ಲಿ 39 ಸುಲಿಗೆ, 17 ದರೋಡೆ ನಡೆದರೆ 2024 ರಲ್ಲಿ 35 ಸುಲಿಗೆ, 22 ದರೋಡೆಗಳು ನಡೆದಿವೆ. 2025 ರಲ್ಲಿ 20 ಸುಲಿಗೆ ಪ್ರಕರಣ ಮತ್ತು 19 ದರೋಡೆ ಪ್ರಕರಣ ನಡೆದಿವೆ. ದರೋಡೆ ಪ್ರಕರಣಗಳನ್ನು ನಿಯಂತ್ರಣ ಮಾಡುವುದು ಪೊಲೀಸರಿಗೆ ಸವಾಲಿನ ಸಂಗತಿಯಾಗಿದೆ. ಪದೇ ಪದೇ ಇಂತಹ ಘಟನೆಗಳು ನಡೆಯುತ್ತಿರುವುದು ಸಾರ್ವಜನಿಕ ವಲಯದಲ್ಲೂ ಆತಂಕ ಮೂಡಿಸಿದೆ.

ಪೊಲೀಸ್ ಠಾಣಾ ಸರಹದ್ದುಗಳಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ಚೆಕ್ ಪೋಸ್ಟ್‌ಗಳನ್ನು ನಿರ್ಮಿಸಿ, ಸಂಶಯಾಸ್ಪದ ವ್ಯಕ್ತಿಗಳನ್ನು ಹಾಗೂ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ ಎಂದು ಗೃಹ ಇಲಾಖೆ ಮಾಹಿತಿ ನೀಡಿದೆ. ಅಲ್ಲದೆ, ರಾತ್ರಿ ಗಸ್ತು ಕರ್ತವ್ಯಕ್ಕೆ ಪ್ರತಿ ಠಾಣೆಗಳಿಗೆ ಸರ್ಕಾರಿ ದ್ವಿಚಕ್ರ ವಾಹನಗಳನ್ನು ಹಂಚಿಕೆ ಮಾಡಲಾಗಿದೆ. ಅಲ್ಲದೇ ವಾಹನಗಳಿಗೆ ಅಳವಡಿಸಲಾದ ಸೈರನ್ ಹಾಗೂ ರೆಡ್ ಲೈಟ್‌ಗಳನ್ನು ಹಚ್ಚಿಕೊಂಡು ರಾತ್ರಿ ಗಸ್ತನ್ನು ಮಾಡಲು ಸೂಚಿಸಲಾಗಿದೆ. ಜೊತೆಗೆ ರಾಜ್ಯದ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಲಿಗೆ ಮತ್ತು ದರೋಡೆಗಳನ್ನು ತಡೆಗಟ್ಟಲು ದಿನದ 24 ಗಂಟೆಗಳಲ್ಲಿ ಮೂರು ಪಾಳಿಯಲ್ಲಿ 112 ಗಸ್ತು (ಪೆಟ್ರೋಲಿಂಗ್) ನಿಯೋಜಿಸ ಲಾಗಿದೆ. ಈ ಹಿಂದೆ ದರೋಡೆ, ಸುಲಿಗೆ ಹಾಗೂ ಇತರೆ ಸ್ವತ್ತಿನ ಅಪರಾಧವೆಸಗಿದ ಆರೋಪಿತರ ಮೇಲೆ ಎಂಓಬಿ ಕಾರ್ಡ್ ತೆಗೆಯಲಾಗಿದೆ. ಅವರನ್ನು ಅನಿರೀಕ್ಷಿತವಾಗಿ ಚೆಕ್ ಮಾಡಲಾಗುತ್ತಿದೆ ಹಾಗೂ ಅವರ ಕಾರ್ಯಚಟುವಟಿಕೆಗಳ ಮೇಲೆ ನಿಗಾ ವಹಿಸಲಾಗಿರುತ್ತದೆ ಎಂದು ತಿಳಿಸಿದೆ.

ಅಪರಾಧಗಳನ್ನು ತಡೆಗಟ್ಟಲು ಬಾರ್ಡರ್ ಕ್ರೈಂ ಮೀಟಿಂಗ್ ಮಾಡಲಾಗುತ್ತಿದೆ ಹಾಗೂ ದರೋಡೆ ಪ್ರಕರಣಗಳಲ್ಲಿ ಭಾಗಿಯಾದ ವ್ಯಕ್ತಿಗಳ ಕುರಿತು ಮಾಹಿತಿಯನ್ನು ನೆರೆ ರಾಜ್ಯ/ಜಿಲ್ಲೆಗಳು/ಪೊಲೀಸ್ ಠಾಣೆಗಳಿಗೆ ಪರಸ್ಪರ ಹಂಚಿಕೊಳ್ಳಲಾಗುತ್ತಿದೆ. ಅಲ್ಲದೆ, ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಹೈವೇ ಪೆಟ್ರೋಲಿಂಗ್ ವಾಹನಗಳನ್ನು ನಿಯಮಿತವಾಗಿ ಗಸ್ತು ಕರ್ತವ್ಯದ ಮೇಲೆ ಇರುವಂತೆ ನೋಡಿಕೊಳ್ಳಲಾಗುತ್ತಿದೆ.

ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬರುವಂತಹ ಟೋಲ್‌ಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳನ್ನು ಕಾಲ ಕಾಲಕ್ಕೆ ಪರಿಶೀಲನೆ ಮಾಡಲಾಗುತ್ತಿದೆ. ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಹಿತದೃಷ್ಟಿಯಿಂದ ಮನೆ–ಮನೆಗೆ ಬಲಪಡಿಸುವ ಪೊಲೀಸ್ ಎಂಬ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ರಾತ್ರಿ ಬೀಟ್ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯವರು ಕಡ್ಡಾಯವಾಗಿ ಆಯುಧ ಮತ್ತು ಮದ್ದು ಗುಂಡುಗಳನ್ನು ತೆಗೆದುಕೊಂಡು ಹೋಗಲು ಸೂಚಿಸಲಾಗಿದೆ ಎಂದು ಗೃಹ ಇಲಾಖೆ ತಿಳಿಸಿದೆ.

## ಬಹಿಷ್ಕಾರ ಹಾಕಿದರೆ 3 ವರ್ಷ ಜೈಲು

ಅಥವಾ ವ್ಯಾಪಾರ ಮಾಡಲು ನಿರಾಕರಿಸು ವುದು; ಸೇವೆಗಳನ್ನು ನಿರಾಕರಿಸಿದರೆ ಜೈಲು ಶಿಕ್ಷೆ ಗ್ಯಾರಂಟಿ ಎಂದು ಹೇಳಲಾಗಿದೆ. ರಾಜ್ಯದ ವಿವಿಧ ಸಮುದಾಯಗಳಲ್ಲಿ ಸಾಮಾಜಿಕ ಬಹಿಷ್ಕಾರ ಹಾಕುವುದು, ಜಾತಿ ಸಭೆ ಅಥವಾ ಸಮುದಾಯ ಪಂಚಾಯತ್ ಗಳ ಮೂಲಕ ವಿವಿಧ ಶಿಕ್ಷೆಗಳನ್ನು ವಿಧಿಸುವ ಅಸಂವಿಧಾನಿಕ ಪದ್ಧತಿಗಳು ಇನ್ನೂ ಆಚರಣೆ ಯಲ್ಲಿವೆ. ಇದರ ಪರಿಣಾಮವಾಗಿ ವ್ಯಕ್ತಿಗಳು ಅಥವಾ ಕುಟುಂಬ ತಮ್ಮ ಜೀವನವನ್ನು ಘನತೆಯಿಂದ ನಡೆಸುವಲ್ಲಿ ಹೆಚ್ಚಿನ ಕಿರುಕುಳ ಅನುಭವಿಸುತ್ತಾರೆ ಎಂದು ಮಸೂದೆಯಲ್ಲಿ ತಿಳಿಸಲಾಗಿದೆ.

**ಗ್ರೇಟರ್ ಬೆಂಗಳೂರು ಆಡಳಿತ(ಎರಡನೇ ತಿದ್ದುಪಡಿ)ಮಸೂದೆ 2025 ಮಂಡನೆ:** ಇದೇ ವೇಳೆ ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಪರವಾಗಿ ಸಚಿವ ಮಹದೇವಪ್ಪ ಅವರು "ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ)ಮಸೂದೆ 2025 ಅನ್ನು ಮಂಡಿಸಿದರು. ಈ ಮಸೂದೆಯಲ್ಲಿ ಲೋಕಸಭೆ, ರಾಜ್ಯಸಭೆ, ರಾಜ್ಯ ವಿಧಾನಸಭೆ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸದಸ್ಯರನ್ನಾಗಿ ಸೇರಿಸಲು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024ಕ್ಕೆ ತಿದ್ದುಪಡಿ ಮಾಡಲಾಗಿದೆ. ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯ ದರ್ಶಿ ಮತ್ತು ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯನ್ನು ಪ್ರಾಧಿಕಾರದ ಎಕ್ಸ್–ಆಫಿಷಿಯೊ ಸದಸ್ಯರನ್ನಾಗಿ ಸೇರಿಸಲು ಸಹ ಇದು ಅವಕಾಶ ನೀಡುತ್ತದೆ. ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯನ್ನು ಕಾರ್ಯ ಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲು ಸಹ ಇದು ಅವಕಾಶ ಕಲ್ಪಿಸುತ್ತದೆ.

## ಮತ್ತೆ ಕ್ರಿಕೆಟ್ ಪಂದ್ಯ

ಭದ್ರತೆ ಜವಾಬ್ದಾರಿಯನ್ನು ಗೃಹ ಇಲಾಖೆಗೆ ನೀಡಲಾಗಿದೆ. ಬುಧವಾರ ಬೆಳಗಾವಿಯ ಸರ್ಕಿಟ್ ಹೌಸ್‌ನಲ್ಲಿ ಕೆಎಸ್‌ಸಿಎ ನೂತನ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ತಮ್ಮನ್ನು ಭೇಟಿ ಮಾಡಿದ ನಂತರ ಮಾತನಾಡಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ನಮಗೆ ಕ್ರಿಕೆಟ್ ಟೂರ್ನಿಗಳನ್ನು ನಿಲ್ಲಿಸಬೇಕು ಎನ್ನುವ ಯಾವುದೇ ಉದ್ದೇಶವಿಲ್ಲ. ಆದರೆ ಜನಜಂಗುಳಿಯ ನಿಯಂತ್ರಣ ಕ್ರಮಗಳ ಬಗ್ಗೆ ಆಲೋಚಿಸಬೇಕು. ಜತೆಗೆ ಮೈಕಲ್ ಡಿ ಕುನ್ಹಾ ಸಮಿತಿ ನೀಡಿರುವ ಸಲಹೆಗಳನ್ನು ಹಂತ ಹಂತವಾಗಿ ಪಾಲನೆ ಮಾಡು ವುದು ನಮ್ಮ ಆಲೋಚನೆ. ಇದನ್ನು ವೆಂಕಟೇಶ್ ಪ್ರಸಾದ್ ಅವರು ಕೂಡ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದ್ದರು.

ನಮ್ಮ ರಾಜ್ಯದ ಗೌರವ, ಸ್ವಾಭಿಮಾನಕ್ಕೆ ಯಾವುದೇ ಧಕ್ಕೆ ಆಗದ ರೀತಿಯಲ್ಲಿ ಕ್ರಿಕೆಟ್ ಅಭಿಮಾನಿಗಳ ಭಾವನೆಗಳಿಗೆ ಸ್ಪಂದಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಐಪಿಎಲ್ ಸೇರಿದಂತೆ ಯಾವುದೇ ಪಂದ್ಯಗಳು ಬೆಂಗಳೂರಿನಿಂದ ಹೊರಗೆ ಹೋಗಲು ಬಿಡುವುದಿಲ್ಲ. ಒಗ್ಗೂಡಿ ಕೆಲಸ ಮಾಡೋಣ ಎಂದು ಕೆಎಸ್‌ಸಿಎ ಪದಾಧಿಕಾರಿಗಳಿಗೆ ತಿಳಿಸಿರುವುದಾಗಿ ಡಿಕೆಶಿ ಹೇಳಿದ್ದರು.

ಮೈಸೂರು ಮಿತ್ರ

ಶುಕ್ರವಾರ 12 ಡಿಸೆಂಬರ್ 2025

# ಮೈಸೂರಲ್ಲಿ ಮೈ ಬಿಲ್ಡ್–25 ಎಕ್ಸ್‌ಪೋಗೆ ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್ ಚಾಲನೆ

● ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ರಜತ ಮಹೋತ್ಸವ ಸಂಭ್ರಮ ● ಎಲೆಕ್ಟ್ರಾನಿಕ್, ಆಟೋ ಮೊಬೈಲ್ ಉಪಕರಣ, ಗೃಹಾಲಂಕಾರ ಉತ್ಪನ್ನಗಳ ಪ್ರದರ್ಶನ-ಮಾರಾಟ






ಮೈಬಿಲ್ಡ್–25 ರಜತ ಮಹೋತ್ಸವ ಹಾಗೂ ಎಕ್ಸ್‌ಪೋ ಕಾರ್ಯಕ್ರಮವನ್ನು ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಮೈ ಬಿಲ್ಡ್ ಎಕ್ಸ್‌ಪೋನ ವಿವಿಧ ಉತ್ಪನ್ನಗಳ ಮಳಿಗೆಗಳು

ಮೈಸೂರು, ಡಿ.11(ವಿವಿಹೆಚ್)– ಮೈಸೂರಿಗರು ಇತಿಹಾಸದೊಂದಿಗೆ ನಡೆಯುವ ಜನ. ಈ ಮಣ್ಣಿನ ಗುಣನೇ ಅಂತದ್ದು, ಇಲ್ಲಿ ಯಾವುದಕ್ಕೆ ಚಾಲನೆ ನೀಡಿದರೂ, ಏನೇ ಅಸ್ತಿತ್ವದಲ್ಲಿದ್ದರೂ ಅದು ಶತಮಾನಗಳ ಇತಿಹಾಸವನ್ನು ಕಾಣುತ್ತದೆ. ಅದರಂತೆ ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ಕೂಡ ಶತಮಾನೋತ್ಸವ ಆಚರಿಸಿಕೊಳ್ಳಲಿ ಎಂದು ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್ ಆಶಿಸಿದರು.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ(ಬಿಎಐ) ಮೈಸೂರು ಸೆಂಟರ್, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಗುರುವಾರ ಆಯೋಜಿಸಿದ್ದ ಮೈಬಿಲ್ಡ್–25 ರಜತ ಮಹೋತ್ಸವ ಹಾಗೂ ಎಕ್ಸ್‌ಪೋ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಸಂಘಟನೆಗಳು ಉಳಿಯುತ್ತಿಲ್ಲ. ಕಾರಣ ಒಬ್ಬರ ಕಾಲನ್ನು ಒಬ್ಬರು ಎಳೆಯುವ ಮನಸ್ಥಿತಿ ಇಲ್ಲಿರುವುದರಿಂದ. ಇದನ್ನೆಲ್ಲ ಮೆಟ್ಟಿ, ಯಾವುದೇ ಲಾಭಾಂಶದ ಬಯಕೆಯಿಲ್ಲದೆ, ಯಾರ ಕಾಲನ್ನು ಎಳೆಯದೆ ಮೈಬಿಲ್ಡ್ 25 ವರ್ಷ ಪೂರೈಸಿರುವುದು ಸಾಧನೆ. ಇವತ್ತಿನ ಕಾಲಘಟ್ಟದಲ್ಲಿ 25 ವರ್ಷಗಳಾದರೂ ಒಂದು ಸಂಘಟನೆ ಉಳಿದುಕೊಂಡಿದೆ ಎಂಬುದು ಹೆಮ್ಮೆಯ ವಿಚಾರ ಎಂದರು.

ಮೈಸೂರು ನಗರಕ್ಕೆ ಅದರದ್ದೇ ಆದ ಉಜ್ವಲ ಭವಿಷ್ಯವಿದ್ದು, ಹೂಡಿಕೆದಾರರು ಈ ನಗರದ ಮೇಲೆ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬೇಡಿ. ಮೈಸೂರು ನಗರದ ಭವಿಷ್ಯದ ಬಗ್ಗೆ ಕೆಲವೊಮ್ಮೆ ಆತಂಕ ಹುಟ್ಟುತ್ತದೆ. ಹಾಗೆಯೇ ವಿಪರೀತವಾದ ಕುತೂಹಲ ಹುಟ್ಟಿಸುತ್ತದೆ. ಜನದಟ್ಟಣೆ ನಗರವೂ ಅಲ್ಲ, ಕಡಿಮೆ ಜನಸಂಖ್ಯೆಯುಳ್ಳ ನಗರವೂ ಅಲ್ಲ. ಇದೊಂದು ಶಾಂತ ರೀತಿಯ ನಗರ. ಹಾಗಾಗಿ ಹೂಡಿಕೆದಾರರು ಹೆಚ್ಚು ಒತ್ತು ನೀಡಿ ಎಂದು ಸಲಹೆ ನೀಡಿದರು.

### ಮೈಬಿಲ್ಡ್ ಎಕ್ಸ್‌ಪೋ

**ಮಹಾರಾಜ ಕಾಲೇಜು ಮೈದಾನದಲ್ಲಿ ಡಿ.15 ರವರೆಗೆ ಆಯೋಜಿಸಲಾಗಿರುವ ಮೈಬಿಲ್ಡ್ ಎಕ್ಸ್‌ಪೋ ನಲ್ಲಿ ಮೈಸೂರು, ಬೆಂಗಳೂರು, ಕೊಯಮತ್ತೂರು ಭಾಗಗಳಿಂದ ಸುಮಾರು 300 ಕಂಪೆನಿಗಳು ಮಳಿಗೆಗಳನ್ನು ತೆರೆದಿದ್ದಾರೆ. ವಾಸ್ತುಶಿಲ್ಪಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ಬಿಲ್ಡರ್ಸ್‌ಗಳು ಭಾಗವಹಿಸಿದ್ದಾರೆ. ಅಲ್ಲದೇ ಗೃಹೋಪಯೋಗಿ ವಸ್ತುಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳು, ಆಟೋಮೊಬೈಲ್ ಉಪಕರಣಗಳು, ಯಂತ್ರೋಪಕರಣಗಳು, ಗೃಹ ಅಲಂಕಾರಿಕ ಉತ್ಪನ್ನಗಳು, ನಾನಾ ಕಾಮಗಾರಿ ಉಪಕರಣಗಳು ಸೇರಿದಂತೆ ಹತ್ತು ಹಲವು ವಸ್ತುಗಳ ಪ್ರದರ್ಶನ, ಮಾರಾಟ ಏರ್ಪಡಿಸಲಾಗಿದೆ.**

ಸಾಮಾನ್ಯ ಜನರಲ್ಲಿ ಬಿಲ್ಡರ್ಸ್‌ಗಳ ಬಗ್ಗೆ ಕಟ್ಟಡದ ಹೆಸರಲ್ಲಿ ಹಣ ಮಾಡಿಕೊಳ್ಳುವವರು ಎಂಬ ಭಾವನೆಯಿದೆ. ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಇಂತಹ ಸಂಸ್ಥೆಗಳು ಸಾಮಾಜಿಕ ಚಟುವಟಿಕೆಗಳ ನಡೆಸುವ ಜೊತೆಗೆ, ತಮ್ಮ ಸಂಘಟನೆಗಳಲ್ಲಿ ಮಹಿಳೆಯರಿಗೆ ಅಗತ್ಯ ಸ್ಥಾನಮಾನ ನೀಡಿ ಅವರ ಬೆಳವಣಿಗೆಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಅಧ್ಯಕ್ಷ ರಾಜೇಂದ್ರ ಸಿಂಗ್ ಕಾಂಬೋ ಮಾತನಾಡಿ, ತಂತ್ರಜ್ಞಾನವು ಭಾರತದ ಭವಿಷ್ಯವಾಗಿದ್ದು, ಕಟ್ಟಡ ನಿರ್ಮಾಣ ವಲಯದ ಹೊಸ ವಿಚಾರಗಳನ್ನು ತಿಳಿಯಲು ಹಾಗೂ ಪರಿಚಯಿಸಲು ಈ ಎಕ್ಸ್‌ಪೋ ಸಹಕಾರಿ ಎಂದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ದಕ್ಷಿಣ ವಲಯ ಉಪಾಧ್ಯಕ್ಷ ಡಿ.ವಿ.ಎನ್. ರೆಡ್ಡಿ ಬಿಎಐ ಮೈಸೂರು ಸೆಂಟರ್ ಛೇರ್ಮನ್ ವಿ.ಶ್ರೀನಾಥ್, ಕಾರ್ಯದರ್ಶಿ ಸಿ.ಡಿ.ಕೃಷ್ಣ, ಮೈಬಿಲ್ಡ್–25 ಛೇರ್ಮನ್ ಆರ್.ರಮೇಶ್ ರಾವ್, ಕಾರ್ಯದರ್ಶಿ ಎನ್.ಲೋಕೇಶ್‌ಗೌಡ ಉಪಸ್ಥಿತರಿದ್ದರು.

## ಮೇಗಳಾಪುರದಲ್ಲಿ ಇ-ಪೌತಿ ಖಾತೆ ಆಂದೋಲನ ಪರಿಶೀಲನೆ ನಡೆಸಿದ ಎಡಿಸಿ



ಮೈಸೂರು, ಡಿ.11(ಎಂಕೆ)– ತಾಲೂಕಿನ ಮೇಗಳಾಪುರ ಗ್ರಾಮದಲ್ಲಿ ನಡೆದ ಇ-ಪೌತಿ ಖಾತೆ ಆಂದೋಲನ ಸ್ಥಳಕ್ಕೆ ಗುರುವಾರ ಭೇಟಿ ನೀಡಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಪರಿಶೀಲನೆ ನಡೆಸಿ ಸಾರ್ವಜನಿಕರೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಪಡೆದುಕೊಂಡರು.

ಸಾರ್ವಜನಿಕರ ಕುಂದು-ಕೊರತೆಗಳನ್ನು ವಿಚಾರಿಸಿದ ಅವರು, ಗ್ರಾಮ ಆಡಳಿತಾಧಿಕಾರಿಗಳು ಹಾಗೂ ಕಂದಾಯ ಅಧಿಕಾರಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಿ, ರೈತರಿಗೆ ಸರ್ಕಾರದ ಸೇವೆಗಳನ್ನು ಕಡ್ಡಾಯವಾಗಿ ಹಾಗೂ ಶೀಘ್ರವಾಗಿ ಒದಗಿಸಬೇಕೆಂದು ಸೂಚನೆ ನೀಡಿದರು.

ಕಂದಾಯ ಇಲಾಖೆ ಮಹತ್ವಾಕಾಂಕ್ಷಿ ಯೋಜನೆ ಹಾಗೂ ರೈತಪರ ಕಾರ್ಯಕ್ರಮವಾಗಿದ್ದು, ಆಯಾ ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಇ-ಪೌತಿ ಖಾತೆಯನ್ನು ಶೀಘ್ರಗತಿಯಲ್ಲಿ ಮತ್ತು ಉಚಿತವಾಗಿ ಮಾಡಿಕೊಡಲಾಗುತ್ತಿದೆ ಎಂದರು. ವರುಣಾ ಹೋಬಳಿಯ ಕಂದಾಯ ಅಧಿಕಾರಿಗಳು ಹಾಗೂ ಗ್ರಾಮ ಆಡಳಿತಾಧಿಕಾರಿಗಳು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

## ಬ್ಯಾಂಕ್ ಲೋಗೋ ದುರ್ಬಳಕೆ; ವೃದ್ಧರ ಬ್ಯಾಂಕ್ ಖಾತೆಯಿಂದ 12.09 ಲಕ್ಷ ವರ್ಗಾವಣೆ

ಮೈಸೂರು, ಡಿ.11– ಬ್ಯಾಂಕ್ ಲೋಗೋ ದುರ್ಬಳಕೆ ಮಾಡಿಕೊಂಡು ವ್ಯಕ್ತಿಯೊಬ್ಬರ ಖಾತೆಗೆ ಕನ್ನ ಹಾಕಿ, ಲಕ್ಷಾಂತರ ರೂ. ಲಪಟಾಯಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಗಂಗೋತ್ರಿ ಬಡಾವಣೆಯ 67 ವರ್ಷದ ವ್ಯಕ್ತಿ, ವಂಚಕರು ಕಳುಹಿಸಿದ್ದ ಸಂದೇಶವನ್ನು ನಂಬಿ 12.09 ಲಕ್ಷ ರೂ. ಕಳೆದುಕೊಂಡಿದ್ದಾರೆ.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಲೋಗೋವನ್ನು ಡಿಪಿಯಲ್ಲಿ ಹಾಕಿದ್ದ ನಂಬರ್‌ನಿಂದ ಡಿ.12ರಂದು ಬೆಳಗ್ಗೆ ವಾಟ್ಸಾಪ್ ಸಂದೇಶ ಬಂದಿದೆ. ಅದರಲ್ಲಿ VYOM ಆಪ್ ಡೌನ್‌ಲೋಡ್ ಮಾಡಿಕೊಂಡು ನಿಮ್ಮ ಬ್ಯಾಂಕ್ ಖಾತೆಯ ಮಾಹಿತಿ ಪಡೆಯಬಹುದು ಎಂದು ತಿಳಿಸಲಾಗಿದೆ. ಇದನ್ನು ನಂಬಿದ ಅವರು, ಎಪಿಕೆ ಫೈಲ್ ಅನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ನಂತರ ಅವರ ಖಾತೆಯಿಂದ ಒಮ್ಮೆ 10 ಲಕ್ಷ ಹಾಗೂ ಮತ್ತೊಮ್ಮೆ 2,09,300 ರೂ. ಸೇರಿ ಒಟ್ಟು 12,09,300 ರೂ. ತ್ವರಿತ ಪಾವತಿ ಸೇವೆ(ಐಎಂಪಿಎಸ್) ಮೂಲಕ ಅಪರಿಚಿತ ಖಾತೆಗೆ ವರ್ಗಾವಣೆಯಾಗಿದೆ.

## ಹಾಡುಹಗಲೇ ಬಾಗಿಲು ಮುರಿದು ಮನೆಯಲ್ಲಿ ಕಳ್ಳತನ

ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳವು

ಮೈಸೂರು, ಡಿ.11– ಹಾಡುಹಗಲೇ ಬಾಗಿಲು ಮೀಟಿ ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿ ನಡೆದಿದೆ.

ಎನ್.ಆರ್.ಮೊಹಲ್ಲಾ, ಎ.ಜಿ.ಬ್ಲಾಕ್ ನಿವಾಸಿ ಸೋಮಶೇಖರ್ ಮನೆಯಲ್ಲಿ ಡಿ.9ರಂದು ಈ ಘಟನೆ ನಡೆದಿದ್ದು ನೆಕ್ಲೆಸ್, ಓಲೆ-ಜುಮುಕಿ ಸೇರಿದಂತೆ ಒಟ್ಟು 1.45 ಲಕ್ಷ ಮೌಲ್ಯದ ಚಿನ್ನಾಭರಣವನ್ನು ಖದೀಮರು ಕದ್ದೊಯ್ದಿದ್ದಾರೆ.

ಸೋಮಶೇಖರ್ ಪುತ್ರಿ ವಾಹನ ಶೋರೂಂನಲ್ಲಿ ಜೂನಿಯರ್ ಅಕೌಂಟೆಂಟ್ ಆಗಿದ್ದು, ಅಂದು ಬೆಳಗ್ಗೆ ಕೆಲಸಕ್ಕೆ ತೆರಳಿದ ಬಳಿಕ ಅವರ ಸಹೋದರ ಮನೆಗೆ ಬೀಗ ಹಾಕಿಕೊಂಡು ಕಾಲೇಜಿಗೆ ಹೋಗಿದ್ದ. ಸಂಜೆ 5 ಗಂಟೆಗೆ ಸೋಮಶೇಖರ್ ಮನೆಗೆ ಬಂದಾಗ ಬಾಗಿಲು ಮೀಟಿತ್ತು. ಒಳಹೋಗಿ ನೋಡಿದಾಗ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ವಿಷಯ ತಿಳಿದ ಅವರ ಪುತ್ರಿ ಮನೆಗೆ ಬಂದು ಪರಿಶೀಲಿಸಿದಾಗ ಕೊಠಡಿಯಲ್ಲಿದ್ದ ಕಬ್ಬಿಣದ ಬೀರುವಿನ ಬೀಗ ಮುರಿದು, ಅದರಲ್ಲಿದ್ದ ಚಿನ್ನಾಭರಣ ಕಳವು ಮಾಡಿರುವುದು ತಿಳಿಯಿತು.

ಈ ಸಂಬಂಧ ಸೋಮಶೇಖರ್ ಪುತ್ರಿ ನೀಡಿದ ದೂರಿನನ್ವಯ ಎನ್.ಆರ್. ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಶ್ರೀಗಂಧದ ಮರ ಸಾಗಿಸುತ್ತಿದ್ದ ಆರೋಪಿ ಬಂಧನ

ಒಂದೂವರೆ ಲಕ್ಷ ಮೌಲ್ಯದ ಶ್ರೀಗಂಧದ ತುಂಡು ವಶ





ಆರೋಪಿ ನವಾಜ್ ಷರೀಫ್, ವಶಪಡಿಸಿಕೊಂಡ ಶ್ರೀಗಂಧದ ತುಂಡುಗಳು

ಮೈಸೂರು, ಡಿ.11(ಬಿಎಲ್‌ಯು)– ಅಕ್ರಮವಾಗಿ ಶ್ರೀಗಂಧದ ತುಂಡುಗಳ ಸಾಗಿಸುತ್ತಿದ್ದ ಆರೋಪಿಯನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಕೆಸರೆಯ ಉಸ್ಮಾನಿಯಾ ಬ್ಲಾಕ್ ವಾಸಿ ನವಾಜ್ ಷರೀಫ್ ಎಂಬಾತನೆ ಬಂಧಿತ ಆರೋಪಿಯಾಗಿದ್ದಾನೆ.

ಸಿಸಿಬಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಹಾಗೂ ಸಿಬ್ಬಂದಿ ಕೆಸರೆಯ ಕಾಮನಕೆರೆ ಹುಂಡಿಯಲ್ಲಿ ಗಸ್ತಿನಲ್ಲಿದ್ದರು. ಆ ವೇಳೆ ಚೀಲದೊಂದಿಗೆ ವ್ಯಕ್ತಿಯೊಬ್ಬ ನಿಂತಿರುವುದನ್ನು ಗಮನಿಸಿದರು.

ಪೊಲೀಸರನ್ನು ನೋಡಿ ಭಯಭೀತನಾದ ನವಾಜ್ ಷರೀಫ್ ಬೈಕ್‌ನಲ್ಲಿ ಪರಾರಿಯಾಗಲು ಯತ್ನಿಸಿದನು. ಕೂಡಲೇ ಕಾರ್ಯ ಪ್ರವೃತ್ತರಾದ ಪೊಲೀಸರು ಆರೋಪಿಯನ್ನು ಬೆನ್ನಟ್ಟಿ ಹಿಡಿದರು.

ತರುವಾಯ ಆತನಲ್ಲಿದ್ದ ಚೀಲವನ್ನು ಪರಿಶೀಲಿಸಿದಾಗ ಅಲ್ಲಿ ಶ್ರೀಗಂಧದ ಮರಗಳಿರುವುದು ಕಂಡು ಬಂದಿತು.

ಆತ ಶ್ರೀಗಂಧದ ಮರಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವುದು ವಿಚಾರಣೆ ವೇಳೆ ತಿಳಿದು ಬಂದಿತು. ನಂತರ ಪೊಲೀಸರು ಆರೋಪಿ ನವಾಜ್ ಷರೀಫ್‌ನಿಂದ ಒಂದೂವರೆ ಲಕ್ಷ ರೂಪಾಯಿ ಮೌಲ್ಯದ 33,600 ಕೆ.ಜಿ. ಶ್ರೀಗಂಧದ ಮರಗಳನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲದೆ ಶ್ರೀಗಂಧದ ಮರಗಳನ್ನು ಮಾರಾಟ ಮಾಡಲು ಬಳಸಿದ ಬೈಕ್ (ಕೆಎ 03, ಹೆಚ್ ಸಿ-5702) ಹಾಗೂ ಮೊಬೈಲ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಅಣ್ಣನನ್ನೇ ಕೊಂದ ತಮ್ಮನಿಗೆ ಜೀವಾವಧಿ ಶಿಕ್ಷೆ

ಕೆ.ಆರ್.ಪೇಟೆ, ಡಿ.11– ಅಣ್ಣನನ್ನೇ ಕೊಂದ ತಮ್ಮನಿಗೆ ಶ್ರೀರಂಗಪಟ್ಟಣದ ಮೂರನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.

ತಾಲೂಕಿನ ಸಂತೇಬಾಚಹಳ್ಳಿ ಹೋಬಳಿ ನಾಗರಘಟ್ಟ ಗ್ರಾಮದ ನಿವಾಸಿ ದಿ.ದೇವರಾಜೇಗೌಡ ಅವರ ಪುತ್ರ ಎಂ.ಆರ್.ಉಮೇಶ್ ಶಿಕ್ಷೆಗೆ ಗುರಿಯಾದವನಾಗಿದ್ದು, ಈತ 2019ರ ಮಾ.25ರಂದು ತನ್ನ ಅಣ್ಣ ಸತೀಶ್ ಅವರನ್ನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹತ್ಯೆಗೈದಿದ್ದ. ಈ ಸಂಬಂಧ ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅಂದಿನ ಸಿಪಿಐ ಸುಧಾಕರ್ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಜ್ಯೋತ್ಸ್ನಾ ಅವರು ಹಂತಕನಿಗೆ ಉಮೇಶ್‌ಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರ ವಿಶೇಷ ಸರ್ಕಾರಿ ಅಭಿಯೋಜಕ ಎಂ.ಎನ್.ರಘು ವಾದ ಮಂಡಿಸಿದ್ದರು.

## ನಾಗರತ್ನಮ್ಮ ನಿಧನ



ಕೆ.ಆರ್.ಪೇಟೆ, ಡಿ.11– ಮೂಲತಃ ತಾಲೂಕಿನ ಬೊಮ್ಮಲಾಪುರ ಗ್ರಾಮದವರಾಗಿದ್ದು, ಹಾಲಿ ಪಟ್ಟಣದ ಜಯನಗರ ಬಡಾವಣೆಯಲ್ಲಿ ವಾಸಿಸುತ್ತಿದ್ದ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಡಿ.ಗೋವಿಂದಯ್ಯ ಅವರ ಪತ್ನಿ ನಾಗರತ್ನಮ್ಮ(65) ಬುಧವಾರ ನಿಧನರಾದರು. ಮೃತರು ಪುತ್ರ ಪುರಸಭಾ ಸದಸ್ಯ ಬಿ.ಜಿ.ಗಿರೀಶ್, ಪುತ್ರಿ ವಿದ್ಯಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ರಾಜ್ಯದಲ್ಲಿ ಮೈಕೊರೆಯುವ ಚಳಿ: ಎಚ್ಚರ ವಹಿಸಲು ಸೂಚನೆ

ಮೈಸೂರು, ಡಿ.11(ಎಂಕೆ)– ರಾಜ್ಯದಲ್ಲಿ ಹಿಂಗಾರು ಮಳೆ ದುರ್ಬಲಗೊಂಡಿದ್ದು, ಮುಂದಿನ 6 ದಿನಗಳ ಕಾಲ ಮೈಕೊರೆಯುವ(ಶೀತದ ಅಲೆ) ಚಳಿ ಇರಲಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಎಚ್ಚರಿಸಿದೆ.

ಡಿ.12 ರಿಂದ 16ರವರೆಗೆ ಉತ್ತರ ಮತ್ತು ದಕ್ಷಿಣ ಒಳನಾಡಿನ ಕರ್ನಾಟಕ ಪ್ರದೇಶಗಳು ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ 4 ರಿಂದ 6 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆಯಾಗಲಿದ್ದು, ಕೆಲವು ಸ್ಥಳಗಳಲ್ಲಿ 'ಶೀತ ಅಲೆ(Cold Wave)' ಉಂಟಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ.

ಡಿ.14 ರಿಂದ 16ರವರೆಗೆ ಕರಾವಳಿ ಕರ್ನಾಟಕದಾದ್ಯಂತ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಕಡಿಮೆಯಾಗುವ ಸಾಧ್ಯತೆಯಿದ್ದು, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದೆ. ಮುಖ್ಯವಾಗಿ ಬೆಚ್ಚಗಿನ ವಾತಾವರಣದಲ್ಲಿರಬೇಕು, ಪ್ರಯಾಣ ಕಡಿಮೆ ಮಾಡಬೇಕು, ಕೈಗವಸುಗಳ ಬಳಕೆ, ಬಿಸಿ ಪಾನೀಯಗಳ ಸೇವನೆ, ನೀರಿನ ಸಂಗ್ರಹಣೆ, ಕೈ–ಕಾಲು ಬೆರಳುಗಳು ಮರಗಟ್ಟುವಿಕೆ ಬಗ್ಗೆ ಎಚ್ಚರವಹಿಸುವಂತೆ ಸೂಚಿಸಿದೆ. ಹಾಗೆಯೇ ಹೈಪೋಥರ್ಮಿಯಾ(ದೇಹದ ತಾಪಮಾನವು 35 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಾಗುವ ಸಂದರ್ಭಗಳಲ್ಲಿ) ಸೂಕ್ತ ಚಿಕಿತ್ಸೆ ಜೊತೆಗೆ ಬೆಚ್ಚಗಿನ ವಾತಾವರಣದಲ್ಲಿರಬೇಕು. ಮದ್ಯಪಾನ ಮಾಡಬಾರದು ಎಂದು ತಿಳಿಸಿದೆ.

ಅದೇ ರೀತಿ ಜಾನುವಾರುಗಳು ಶೆಡ್‌ನೊಳಗೆಯೇ ಇರುವಂತೆ ನೋಡಿಕೊಳ್ಳಬೇಕು. ಪ್ರಾಣಿಗಳು ಆರೋಗ್ಯವಾಗಿರಲು ಫೀಡ್ ಸಾಂದ್ರತೆ ಹೆಚ್ಚಿಸಬೇಕು. ಗೋಧಿ ಧಾನ್ಯಗಳ ಜೊತೆಗೆ ಬೆಲ್ಲ ನೀಡುವುದು. ಕೋಳಿ ಸಾಕಣೆ ಕೇಂದ್ರಗಳಲ್ಲಿ ಕೃತಕ ಬೆಳಕನ್ನು ಒದಗಿಸುವ ಮೂಲಕ ಮರಿಗಳನ್ನು ಬೆಚ್ಚಗಿಡಬೇಕು. ಮುಂಜಾನೆಯೇ ದನ–ಕರುಗಳನ್ನು ಮೇಯಲು ಬಿಡಬಾರದು ಮತ್ತು ರಾತ್ರಿ ವೇಳೆ ತೆರೆದ ಸ್ಥಳದಲ್ಲಿ ಕಟ್ಟಿಹಾಕಬಾರದು ಎಂದು ಸಲಹೆ ನೀಡಿದೆ.

## ಶ್ರೀರಂಗಪಟ್ಟಣ ಕೆ.ಶೆಟ್ಟಿಹಳ್ಳಿಯ 'ನಿರ್ದಿಗಂತ' ಆವರಣದಲ್ಲಿ ನಾಳೆ, ನಾಳಿದ್ದು ಮಕ್ಕಳ ಹಬ್ಬ

— ಮಕ್ಕಳ ರಂಗಪ್ರತಿಭೆ ಅನಾವರಣ —

ಮೈಸೂರು, ಡಿ.11– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣದ ಕೆ.ಶೆಟ್ಟಿಹಳ್ಳಿಯಲ್ಲಿರುವ 'ನಿರ್ದಿಗಂತ' ಸಂಸ್ಥೆ ಆವರಣದಲ್ಲಿ ಡಿ.13 ಹಾಗೂ 14ರಂದು 'ಮಕ್ಕಳ ಹಬ್ಬ' ಆಯೋಜಿಸಲಾಗಿದೆ.

ಸಂಸ್ಥೆಯು ಶಾಲಾರಂಗ ವಿಕಾಸ ಯೋಜನೆ ಅಡಿಯಲ್ಲಿ ರಾಜ್ಯದ ನಾನಾ ಶಾಲೆಗಳಿಗೆ ರಂಗ ತರಬೇತುದಾರರನ್ನು ನೇಮಿಸಿ, ಶೈಕ್ಷಣಿಕ ಶಿಕ್ಷಣದೊಂದಿಗೆ ರಂಗಭೂಮಿಯನ್ನು ಪಠ್ಯದ ಭಾಗವಾಗಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮುಂದುವರೆಸಿದ್ದು, ಈ ಬಾರಿ ಐವರು ರಂಗ ಶಿಕ್ಷಕರಿಂದ ಕಲಿತಿರುವ ವಿವಿಧೆಡೆಯ ಮಕ್ಕಳು ತಮ್ಮ ರಂಗ ಪ್ರತಿಭೆ ಅನಾವರಣಗೊಳಿಸಲಿದ್ದಾರೆ.

ಡಿ.13ರಂದು ಬೆಳಗ್ಗೆ 11ಕ್ಕೆ ಹಿರಿಯ ಸಾಹಿತಿ ದೇವನೂರು ಮಹಾದೇವ ಹಾಗೂ ನಿರ್ದಿಗಂತ ಸಂಸ್ಥಾಪಕರಾದ ನಟ ಪ್ರಕಾಶ್ ರಾಜ್ ಉಪಸ್ಥಿತಿಯಲ್ಲಿ 'ಮಕ್ಕಳ ಹಬ್ಬ'ಕ್ಕೆ ಚಾಲನೆ ದೊರಕಲಿದ್ದು, ಅಂದು ಮಧ್ಯಾಹ್ನ 12ಕ್ಕೆ ಹಾವೇರಿ ಜಿಲ್ಲೆ, ಶಿಗ್ಗಾವಿ ತಾಲೂಕು ಜಕ್ಕನಕಟ್ಟಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಕ್ಕಳು 'ತುಂಗಾ' ನಾಟಕ, ಸಂಜೆ 4ಕ್ಕೆ ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲೂಕು ಅಳ್ಳಂಕಿಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮಕ್ಕಳು 'ಚಂದ್ರಹಾಸ' ನಾಟಕ ಪ್ರದರ್ಶಿಸಲಿದ್ದಾರೆ. ಸಂಜೆ 5.30ಕ್ಕೆ ವಿವಿಧ ಶಾಲೆ ಮಕ್ಕಳಿಂದ ರಂಗಗೀತೆ, ಕಥೆ–ಕವನಗಳ ಪ್ರಸ್ತುತಿ ಇರಲಿದೆ. ಸಂಜೆ 7ಕ್ಕೆ ಮೈಸೂರಿನ ಕಲಿಯುವ ಮನೆ ಮಕ್ಕಳು 'ರೂಪಾಂತರ' ನಾಟಕ ಪ್ರದರ್ಶಿಸಲಿದ್ದಾರೆ.

ಡಿ.14ರಂದು ಬೆಳಗ್ಗೆ 10ಕ್ಕೆ ಪಿರಿಯಾಪಟ್ಟಣ ತಾಲೂಕು ಗಿರಗೂರಿನ ಮಿಳಿಂದ ಶಾಲೆಯ ಮಕ್ಕಳು 'ನಂಗ ಜಮ್ಮ' ನಾಟಕ ಪ್ರದರ್ಶಿಸಲಿದ್ದು, ಬೆಳಗ್ಗೆ 11.30ಕ್ಕೆ ಕಲಿಯುವ ಮನೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಕ್ಕಳು ರಂಗಗೀತೆ, ಕತೆ–ಕವನ ಪ್ರಸ್ತುತಪಡಿಸಲಿದ್ದಾರೆ. ಮಧ್ಯಾಹ್ನ 12.30ಕ್ಕೆ ಹೊನ್ನಾವರ ತಾಲೂಕು ಅಳ್ಳಂಕಿಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮಕ್ಕಳು 'ದೊಡ್ಡಾರಿ–ಚಿಕ್ಕಾರಿ' ನಾಟಕ, ಮಧ್ಯಾಹ್ನ 3ಕ್ಕೆ ಉಡುಪಿ ಜಿಲ್ಲೆ ಆರೂರು ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಕ್ಕಳು 'ಮೃಗ ಮತ್ತು ಸುಂದರಿ' ನಾಟಕ ಪ್ರದರ್ಶಿಸಲಿದ್ದು, ಸಂಜೆ 4ಕ್ಕೆ ಮಕ್ಕಳ ಹಬ್ಬ ಸಮಾರೋಪಗೊಳ್ಳಲಿದೆ.


## ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆಗೆ ಸಿದ್ಧತೆ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಆಚರಣೆ ಸಂಬಂಧ ಗುರುವಾರ ಮೈಸೂರಲ್ಲಿ ಜೆಡಿಎಸ್ ಮುಖಂಡರು ಪೂರ್ವಭಾವಿ ಸಭೆ ನಡೆಸಿದರು.



ಕುಮಾರಸ್ವಾಮಿ



ಸಾ.ರಾ.ಮಹೇಶ್

ಮೈಸೂರು, ಡಿ.11– ಕೇಂದ್ರ ಸಚಿವ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ಮೈಸೂರಿನಲ್ಲಿ ಅದ್ಧೂರಿಯಾಗಿ ಆಚರಿಸಲು ಜೆಡಿಎಸ್ ಮುಖಂಡರು ನಿರ್ಧರಿಸಿದ್ದಾರೆ.

ನಗರದ ರಾಮವಿಲಾಸ ರಸ್ತೆಯಲ್ಲಿರುವ ಮಾಜಿ ಸಚಿವ ಸಾ.ರಾ.ಮಹೇಶ್ ಕಚೇರಿಯಲ್ಲಿ ಅವರ ಅಧ್ಯಕ್ಷತೆಯಲ್ಲಿ ಗುರುವಾರ ಪೂರ್ವಭಾವಿ ಸಭೆ ನಡೆಸಿ, ಡಿ.16ರಂದು ಹೆಚ್‌ಡಿಕೆ ಅವರ ಹುಟ್ಟುಹಬ್ಬವನ್ನು ಆಚರಿಸಲು ತೀರ್ಮಾನಿಸಲಾಯಿತು.

ಹೆಚ್.ಡಿ.ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗಲೂ ರಾಜಕೀಯ ಸಂದಿಗ್ಧತೆ ನಡುವೆಯೂ ಅತ್ಯುತ್ತಮ ಆಡಳಿತ ನೀಡಿದ್ದಾರೆ. ಕಡಿಮೆ ಅವಧಿಯಲ್ಲೇ ರೈತರು, ಮಹಿಳೆಯರು, ಯುವಜನತೆಗೆ ಅನುಕೂಲವಾಗುವ ಸಾಕಷ್ಟು ಯೋಜನೆ, ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮೊದಲ ಬಾರಿ ಸಿಎಂ ಆಗಿದ್ದಾಗ ಲಾಟರಿ, ಸಾರಾಯಿ ನಿಷೇಧ ಮಾಡಿದ್ದನ್ನು ಇಂದಿಗೂ ಜನ ಸ್ಮರಿಸುತ್ತಾರೆ. ಸದ್ಯ ಬೃಹತ್ ಕೈಗಾರಿಕಾ ಮತ್ತು ಉಕ್ಕು ಖಾತೆ ಸಚಿವರಾಗಿ ರಾಜ್ಯದ ಅಭಿವೃದ್ಧಿಗೆ ಸಹಕರಿಸುತ್ತಿದ್ದಾರೆ. ಕುಮಾರಸ್ವಾಮಿ ಅವರ ಬಗ್ಗೆ ರಾಜ್ಯದ ಜನ ವಿಶೇಷ ಪ್ರೀತಿ–ವಿಶ್ವಾಸ ಹೊಂದಿದ್ದಾರೆ. ಹಾಗಾಗಿ ಅವರ ಹುಟ್ಟುಹಬ್ಬವನ್ನು ಮೈಸೂರು ನಗರ ಸೇರಿದಂತೆ ಎಲ್ಲಾ ತಾಲೂಕು ವ್ಯಾಪ್ತಿಯಲ್ಲೂ ಅರ್ಥಪೂರ್ಣವಾಗಿ, ಅದ್ಧೂರಿಯಾಗಿ ಆಚರಿಸಬೇಕು ಎಂದು ಹಲವು ಮುಖಂಡರು ಸಭೆಯಲ್ಲಿ ಅಭಿಪ್ರಾಯಿಸಿದರು.

ಸಭೆಯಲ್ಲಿ ಮಾಜಿ ಶಾಸಕರಾದ ಕೆ.ಮಹದೇವ, ಅಶ್ವಿನ್ ಕುಮಾರ್, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ರವಿಕುಮಾರ್, ರಾಜೇಶ್ವರಿ ಸೋಮು, ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ, ಜಿಪಂ ಮಾಜಿ ಸದಸ್ಯ ದ್ವಾರಕೀಶ್, ನಗರ ಕಾರ್ಯಾಧ್ಯಕ್ಷ ಪ್ರಕಾಶ ಪ್ರಿಯಾದರ್ಶನ್, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಶಿವಣ್ಣ, ಹಿರಿಯ ಮುಖಂಡರಾದ ರಾಮು, ಬನ್ನೂರು ಕುಮಾರ್, ಸಂತೋಷ, ರಾಜೇಂದ್ರ, ಪಾಲ್ಕನ್ ಬೋರೆಗೌಡ ಮತ್ತಿತರರು ಭಾಗವಹಿಸಿದ್ದರು.

## ಪಾರಂಪರಿಕ ನಗರ ಅಭಿವೃದ್ಧಿ ಕಾನೂನು ನೀತಿಗೆ ಸಂಸದ ಯದುವೀರ್ ಆಗ್ರಹ



ನವದೆಹಲಿ, ಡಿ.11– ಸಾಂಸ್ಕೃತಿಕ ರಾಜಧಾನಿ ಮೈಸೂರು ಸೇರಿದಂತೆ ದೇಶದಲ್ಲಿರುವ ಪಾರಂಪರಿಕ ನಗರಗಳ ಅಭಿವೃದ್ಧಿಗೆ ಪೂರಕವಾದ ಕಾನೂನು ಚೌಕಟ್ಟು ರೂಪಿಸಲು ನಗರಾಭಿವೃದ್ಧಿ ಸಚಿವಾಲಯ ಮುಂದಾಗಬೇಕು ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಂಸತ್ ಕಲಾಪದಲ್ಲಿ ಒತ್ತಾಯಿಸಿದ್ದಾರೆ.

ಮೈಸೂರು ಸೇರಿದಂತೆ ಭಾರತದ ಪಾರಂಪರಿಕ ನಗರಗಳು ಈಗ ಸಾಕಷ್ಟು ಆತಂಕ ಎದುರಿಸುತ್ತಿವೆ. ಅನಿಯಂತ್ರಿತ ಹಾಗೂ ಅವೈಜ್ಞಾನಿಕ ನಗರೀಕರಣದಿಂದ ಸಾಕಷ್ಟು ಸಮಸ್ಯೆಗಳು ಎದುರಾಗಿವೆ. ಪಾರಂಪರಿಕತೆಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸೂಕ್ತ ಕಾನೂನು ಚೌಕಟ್ಟು, ನೀತಿ ರೂಪಿಸುವ ಅಗತ್ಯವಿದೆ. ಈ ಸಂಬಂಧ ನಗರಾಭಿವೃದ್ಧಿ ಸಚಿವಾಲಯ ತ್ವರಿತ ಕ್ರಮ ಕೈಗೊಳ್ಳಬೇಕಿದೆ. ಖಾಸಗಿ ಪಾಲುದಾರಿಕೆಯಲ್ಲಿ ಪರಿಣಾಮಕಾರಿ ಪಾರಂಪರಿಕ ಸುರಕ್ಷೆ, ಡಿಜಿಟಲ್ ಮ್ಯಾಪಿಂಗ್, ನಗರ ಪಾರಂಪರಿಕ ನಗರ ಸಾರಿಗೆ ವಹಿವಾಟು, ನಾಗರಿಕತೆಯನ್ನು ಸುರಕ್ಷಿಸಬೇಕಿದೆ ನಮ್ಮ ಸಂಸ್ಕೃತಿ, ಸ್ಮರಣೆ, ಭಂಡಾರಗಳನ್ನು ರಕ್ಷಿಸುವುದು ಅತ್ಯವಶ್ಯವಾಗಿದೆ ಎಂದು ಆಗ್ರಹಿಸಿದ್ದಾರೆ.

# ಕರ್ನಾಟಕ ಬಿಜೆಪಿ ಸಂಸದರೊಂದಿಗೆ ಪ್ರಧಾನಿ ಮೋದಿ ವಿಶೇಷ ಸಭೆ: ಸೋಷಿಯಲ್ ಮೀಡಿಯಾ ಪರಿಣಾಮಕಾರಿಯಾಗಿ ಬಳಸಿಕೊಳ್ಳಿ

ಹಿರಿಯರ ಕೆಲಸ ಮಾಡಿಕೊಡಿ, ಅವರೇ ನಿಮ್ಮ ಪರ ಪ್ರಚಾರ ಮಾಡ್ತಾರೆ


ನವದೆಹಲಿ, ಡಿ.11– ಪ್ರಧಾನಮಂತ್ರಿ ನರೇಂದ್ರಮೋದಿಯವರು ಮಂಗಳವಾರ ಸಂಸತ್ ಭವನದ ಸಭಾಂಗಣದಲ್ಲಿ ಕರ್ನಾಟಕದ ಲೋಕಸಭೆ ಮತ್ತು ರಾಜ್ಯಸಭೆಯ ಬಿಜೆಪಿ ಸದಸ್ಯರೊಂದಿಗೆ ಸುಮಾರು 45 ನಿಮಿಷಗಳ ಕಾಲ ವಿಶೇಷ ಸಭೆ ನಡೆಸಿ, ಪಕ್ಷದ ಸಂಘಟನೆ, ಸಾರ್ವಜನಿಕ ಸಂಪರ್ಕ, ಸಾಮಾಜಿಕ ಮಾಧ್ಯಮದ ಬಳಕೆ ಮತ್ತು ಕ್ಷೇತ್ರದ ಕಾರ್ಯಶೀಲತೆ ಕುರಿತು ಮಾರ್ಗದರ್ಶನ ನೀಡಿದ್ದಾರೆ.

ಸಭೆಯಲ್ಲಿ ಕರ್ನಾಟಕದ ಸದ್ಯದ ರಾಜಕೀಯ ಪರಿಸ್ಥಿತಿ, ಸರ್ಕಾರದ ವೈಫಲ್ಯಗಳು ಮತ್ತು ವಿರೋಧ ಪಕ್ಷದ ಪಾತ್ರಗಳ ಕುರಿತು ಪರೋಕ್ಷವಾಗಿ ಬೇಸರ ವ್ಯಕ್ತಪಡಿಸಿದ್ದಾರೆ.

ಸಭೆಯ ಆರಂಭದಲ್ಲೇ ಮೋದಿ, 'ಪ್ರಧಾನಮಂತ್ರಿ ಮ್ಯೂಸಿಯಂ ನೋಡಿದ್ದೀರಾ, ನಿಮ್ಮ ಕುಟುಂಬಕ್ಕೂ ತೋರಿಸಿದ್ದೀರಾ' ಎಂದು ಕೇಳಿ, ಸಂಸದರು ರಾಷ್ಟ್ರದ ಇತಿಹಾಸವನ್ನು ತಿಳಿದುಕೊಳ್ಳುವ ಅಗತ್ಯವಿದೆ ಎಂದು ಸಂದೇಶ ನೀಡಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಸಕ್ರಿಯತೆಯ ಕೊರತೆಯ ಬಗ್ಗೆ ಪ್ರಶ್ನೆ ಮಾಡಿ, ಸಂಸದರ ಡಿಜಿಟಲ್ ಹಾಜರಾತಿಯ ಕೊರತೆಯನ್ನು ಉಲ್ಲೇಖಿಸಿದ್ದಾರೆ.

ಸೋಶಿಯಲ್ ಮೀಡಿಯಾದಲ್ಲಿ ಸಕ್ರಿಯರಾಗಿದ್ದೀರಾ, ಯಾರು ಏನು ಮಾಡುತ್ತಿದ್ದಾರೆ ಎಂಬುದು ನಿಮಗೆ ಗೊತ್ತೇ, ಸಂಸದರ ಫಾಲೋವರ್ಸ್ ಎಷ್ಟು, ನೀವು ಯಾವ ವಿಷಯಗಳನ್ನು ಪೋಸ್ಟ್ ಮಾಡಿದ್ದೀರಿ ಎಂದು ಮೋದಿಯವರು ನೇರವಾಗಿ ಫಾಲೋವರ್ಸ್ ಮತ್ತು ಪೋಸ್ಟಿಂಗ್ ಕುರಿತು ತಿಳಿದಿರುವುದಾಗಿ ಹೇಳಿದ್ದು ಸಂಸದರ ನಡುವೆ ಗಂಭೀರ ಚರ್ಚೆಗೆ ಕಾರಣವಾಗಿದೆ.

ಸಂಸದರು, ಕ್ಷೇತ್ರ ಕಾರ್ಯದಲ್ಲಿ ಖುದ್ದಾಗಿ ಇದ್ದು ಕೆಲಸ ಮಾಡಬೇಕೆಂದು ಒತ್ತಿ ಹೇಳಿದರು. ಜನರಿಗೆ ನೀವು ನಾಟಕ ಮಾಡುತ್ತಿದ್ದೀರಿ ಎನಿಸಬಾರದು. ನಿಮ್ಮ ಕ್ಷೇತ್ರದಲ್ಲಿ ಒಬ್ಬ 70 ವರ್ಷದ ವೃದ್ಧನಿಗೆ ಆಗಬೇಕಾದ ಕೆಲಸವನ್ನ ನೀವೇ ಹೋಗಿ ಮಾಡಿಕೊಡಿ. ಚುನಾವಣೆಯಲ್ಲಿ ಅದೇ ವ್ಯಕ್ತಿ ನಿಮ್ಮ ಪರ ಪ್ರಚಾರ ಮಾಡುತ್ತಾನೆ ಎಂದರು.



ತಾವೆಲ್ಲರೂ ಜನರ, ಅವರ ಕಷ್ಟದ ಜೊತೆ ಸದಾ ಇರಬೇಕು. ಮದುವೆಗೆ, ಸಾವಿಗೆ ಎಲ್ಲದಕ್ಕೂ ನೀವು ಹೋಗುತ್ತೀರಿ. ಅದನ್ನು ಹೊರತುಪಡಿಸಿ ಜನರ ಜೊತೆ ಹೇಗೆ ಕನೆಕ್ಟ್ ಆಗಬಹುದು ಎಂದು ಯೋಚಿಸಿ ನೋಡಿ. ಸೋಶಿಯಲ್ ಮೀಡಿಯಾ ವ್ಯಾಪಕವಾಗಿ ಬಳಸಿ, ಇಂದು ಜನರು ಉಳಿದ ಮಾಧ್ಯಮಕ್ಕಿಂತ ಸೋಶಿಯಲ್ ಮೀಡಿಯಾ ಹೆಚ್ಚು ಬಳಸುತ್ತಾರೆ. ಸಂಸದರ ಫಾಲೋವರ್ಸ್ ಎಷ್ಟು, ನೀವು ಏನನ್ನೂ ಸೋಶಿಯಲ್ ಮೀಡಿಯಾಗೆ ಹಾಕಿದ್ದೀರಿ. ಯಾವುದು ಹಾಕಿಲ್ಲ ಎಂದು ಮೋದಿ ಗುರುತಿಸಿ ಹೇಳಿದರು.

ಒಂದು ಸರ್ಕಾರ ತಪ್ಪು ಮಾಡಿದಾಗ ಅದನ್ನು ವಿರೋಧ ಪಕ್ಷ ಎನ್‌ಕ್ಯಾಶ್ ಮಾಡಿಕೊಳ್ಳದಿದ್ದರೆ ಹೇಗೆ? ಕೇವಲ ಪಾಸಿಂಗ್ ರಿಮಾರ್ಕ್ ಮಾಡಿದರೂ ಸರ್ಕಾರದ ವೈಫಲ್ಯಗಳ ಬಗ್ಗೆ ಮಾತನಾಡುವುದು ಬಹಳ ಮುಖ್ಯ ಎಂದರು. ಇಷ್ಟೆಲ್ಲ ಪ್ರಶ್ನೆಗಳು ಕರ್ನಾಟಕ ಬಿಜೆಪಿ ನಾಯಕತ್ವದ ಮೇಲಿನ ಮೋದಿ ಅಸಮಾಧಾನವೆಂಬ ರಾಜಕೀಯ ವಲಯದ ಚರ್ಚೆಗೆ ಕಾರಣವಾಗಿದೆ.

ಇಂದು ಭಾರತದಲ್ಲಿ ಜನರು ಟಿವಿ, ಪತ್ರಿಕೆಗೆ ಹೋಲಿಸಿದರೆ ಸೋಶಿಯಲ್ ಮೀಡಿಯಾವನ್ನು ಹೆಚ್ಚು ಬಳಸುತ್ತಾರೆ. ನೀವು ಯಾವುದನ್ನೂ ಪೋಸ್ಟ್ ಮಾಡದೇ ಇದ್ದರೆ ಜನರಿಗೆ ಅದು ಗೊತ್ತಾಗುತ್ತದೆ. ರಿಯಾಕ್ಟ್ ಆಗಬೇಕಾದ ಸಮಯಕ್ಕೆ ತಕ್ಷಣ ಪ್ರತಿಕ್ರಿಯಿಸಬೇಕು ಎಂದರು.

ಸಭೆಯ ಅಂತ್ಯದಲ್ಲಿ ಪ್ರಧಾನಿ ಮೋದಿ ನೇರವಾಗಿ ಸಂಸದರ ವರದಿ ಕಾರ್ಡ್ ಬಗ್ಗೆ ಪ್ರಶ್ನಿಸಿದ್ದಾರೆ. ಕ್ಷೇತ್ರಕ್ಕೆ ಕೊಡುಗೆ ಏನು, ಪಕ್ಷಕ್ಕೆ, ಕಾರ್ಯಕರ್ತರಿಗೆ ನಿಮ್ಮ ಕೊಡುಗೆ ಏನು, ಅಂತಿಮವಾಗಿ ನಿಮ್ಮ ಕುಟುಂಬಕ್ಕೆ ನಿಮ್ಮ ಕೊಡುಗೆ ಏನು ಎಂದು ಪ್ರಶ್ನಿಸಿದ್ದು, ಈ ವೇಳೆ ಸಂಸದರು ದಂಗಾಗಿದ್ದಾರೆ.

### ಪ್ರಧಾನಿ ಮೋದಿ ಬಗ್ಗೆ ಅವಹೇಳನಕಾರಿ ವೀಡಿಯೊ ಖಂಡಿಸಿ

# ಬಿಜೆಪಿಯಿಂದ ಪ್ರತಿಭಟನೆ, ಕಾಲ್ನಡಿಗೆ ಜಾಥಾ, ಅಂಗಡಿಗೆ ಮುತ್ತಿಗೆ






ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಅವಹೇಳನದ ವೀಡಿಯೊ ಹರಿಬಿಟ್ಟ ಪ್ರಕರಣವನ್ನು ಖಂಡಿಸಿ ಜಿಲ್ಲಾ ಬಿಜೆಪಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ಮಡಿಕೇರಿ,ಡಿ.11– ನಗರದ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಬಳಿ ಇರುವ ಸ್ಪೈಸಸ್ ಅಂಗಡಿಯೊಂದರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕುರಿತು ಅವಹೇಳನದ ವೀಡಿಯೊ ಹರಿಬಿಟ್ಟ ಪ್ರಕರಣವನ್ನು ಖಂಡಿಸಿ ಜಿಲ್ಲಾ ಬಿಜೆಪಿ ಪ್ರತಿಭಟನೆ ನಡೆಸಿತು.


ನಗರದ ಇಂದಿರಾ ಗಾಂಧಿ ವೃತ್ತದಲ್ಲಿ ಮಾಜಿ ಶಾಸಕ ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ ಮತ್ತು ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ನೇತೃತ್ವದಲ್ಲಿ ಪಕ್ಷ ಪ್ರಮುಖರು ಮತ್ತು ವಿವಿಧ ಹಿಂದೂ ಪರ ಸಂಘಟನೆಗಳ ಪ್ರಮುಖರು ಜಮಾಯಿಸಿ ಘಟನೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ವೋಟ್ ಬ್ಯಾಂಕ್‌ಗಾಗಿ ನೀಡುತ್ತಿರುವ ಕುಮ್ಮಕ್ಕುಗಳು ಇಂತಹ ಘಟನೆಗೆ ಕಾರಣವಾಗಿದೆ ಎಂದು ಪ್ರತಿಭಟನಾಕಾರರು ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಅಸಮಾಧಾನ ವ್ಯಕ್ತಪಡಿಸಿದರು.

ಪೊಲೀಸ್ ಇಲಾಖೆ ಆರೋಪಿ ಯುವಕರನ್ನು ಬಂಧಿಸಿದ್ದು, ಅವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಶಾಂತಿ ಕದಡಲು ಪ್ರಯತ್ನಿಸಿದ ಆರೋಪಿಗಳನ್ನು ತಕ್ಷಣವೇ ಗಡಿಪಾರು ಮಾಡಲು ಕ್ರಮ ಕೈಗೊಳ್ಳಬೇಕು. ಸ್ಪೈಸಸ್ ಅಂಗಡಿ ಮಾಲೀಕರನ್ನು ಕೂಡ ವಿಚಾರಣೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಸರ್ಕಾರದ ಪರ ಪ್ರತಿಭಟನಾಕಾರರು ಜಯ ಘೋಷಗಳನ್ನು ಮೊಳಗಿಸಿದರು. ಬಳಿಕ ಇಂದಿರಾ ಗಾಂಧಿ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ರಚಿಸುವ ಮೂಲಕ ಪ್ರಧಾನಿಗಳ ಅವಹೇಳನ ಘಟನೆಯನ್ನು ತೀವ್ರವಾಗಿ ಖಂಡಿಸಲಾಯಿತು.

**ಕಾಲ್ನಡಿಗೆ ಜಾಥಾ–ಮಳಿಗೆಗೆ ಮುತ್ತಿಗೆ:** ಬಳಿಕ ಮಾಜಿ ಶಾಸಕದ್ವಯರ ಸಹಿತ ಬಿಜೆಪಿ ಮುಖಂಡರು ಮತ್ತು ಪಕ್ಷದ ಕಾರ್ಯಕರ್ತರು ಬಸ್ ಡಿಪೋ ಬಳಿ ಇರುವ ಸ್ಪೈಸಸ್ ಮಳಿಗೆ ವರೆಗೆ ಕಾಲ್ನಡಿಗೆ ಜಾಥಾ ತೆರಳಿ ಮಳಿಗೆಗೆ ಮುತ್ತಿಗೆ ಹಾಕಲು ಮುಂದಾದರು. ಬಿಜೆಪಿ ಕಾರ್ಯಕರ್ತರು ಏಕಾಏಕಿ ಬಂದ್ ಮಾಡಲಾಗಿದ್ದ ಅಂಗಡಿಯ ಬಾಗಿಲುಗಳಿಗೆ ಹಾನಿಪಡಿಸಲು ಯತ್ನಿಸಿದರು. ಇಂತಹ ಘಟನೆ ನಡೆಯುವ ಸಾಧ್ಯತೆಯನ್ನು ಅಂದಾಜಿಸಿದ್ದ ಪೊಲೀಸ್ ಇಲಾಖೆ ಮಡಿಕೇರಿ ಡಿವೈಎಸ್‌ಪಿ ಸೂರಜ್.ಪಿ. ನೇತೃತ್ವದಲ್ಲಿ ಅಂಗಡಿ ಮುಂಭಾಗ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿತ್ತು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಅಂಗಡಿಗೆ ಮುತ್ತಿಗೆ ಹಾಕಲು ಯತ್ನಿಸಿದ ಸಂದರ್ಭ ಪೊಲೀಸ್ ಅಧಿಕಾರಿಗಳು ಮತ್ತು ಪಕ್ಷದ ಮುಖಂಡರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಇದೇ ವೇಳೆ ಪ್ರತಿಭಟನಾಕಾರರ ಗುಂಪಿನ ನಡುವಿನಿಂದ ಕಲ್ಲೊಂದು ತೂರಿ ಬಂದು ಮಳಿಗೆಯ ಬಾಗಿಲಿಗೆ ಅಪ್ಪಳಿಸಿದ ಘಟನೆಯೂ ನಡೆಯಿತು.

ಡಿವೈಎಸ್‌ಪಿ ಸೂರಜ್ ಮತ್ತು ವೃತ್ತ ನಿರೀಕ್ಷಕ ಪಿ.ಕೆ.ರಾಜು ಮಾತನಾಡಿ, ಈಗಾಗಲೇ ಪ್ರಕರಣದಲ್ಲಿ ಭಾಗಿಯಾದವರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಘಟನೆಯ ತನಿಖೆ ಪ್ರಗತಿಯಲ್ಲಿದೆ. ಕಾನೂನಿನ ಅನ್ವಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪ್ರತಿಭಟನಾಕಾರರಿಗೆ ಮಾಹಿತಿ ನೀಡಿದರು.

ಪ್ರತಿಭಟನೆಯ ಸಂದರ್ಭ ಬಿಜೆಪಿ ಪಕ್ಷ ಪ್ರಮುಖರಾದ ಮನು ಮುತ್ತಪ್ಪ, ವಿ.ಕೆ. ಲೋಕೇಶ್, ಕಾಂಗೀರ ಸತೀಶ್, ಸುವಿನ್ ಗಣಪತಿ, ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ಸದಸ್ಯರಾದ ಅರುಣ್ ಶೆಟ್ಟಿ ಕೆ.ಎಸ್. ರಮೇಶ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ಬಿಜೆಪಿ ನಗರ ಅಧ್ಯಕ್ಷ ಬಿ.ಕೆ.ಅರುಣ್ ಕುಮಾರ್, ಹೊಸೂರು ಸತೀಶ್ ಜೋಯಪ್ಪ, ಕನ್ನಂಡ ಸಂಪತ್, ಬಿ.ಕೆ.ಜಗದೀಶ್, ಬಿ.ಪಿ.ಡಿಶು, ಮಹಿಳಾ ಸದಸ್ಯರಾದ ಉಷಾ ಕಾವೇರಪ್ಪ, ಶ್ವೇತಾ ಪ್ರಶಾಂತ್, ಮಂಜುಳ, ಮಹಿಳಾ ಮೋರ್ಚಾ ಕನ್ನಿಕೆ, ಮನು ಮಂಜುನಾಥ್, ಉಣ್ಣಿಕೃಷ್ಣ, ಪಿ.ಎಂ.ರವಿ, ಮತ್ತಿತ್ತರರು ಹಾಜರಿದ್ದರು.



ಈ ದೇಶದ ಅನ್ನ, ನೀರು, ಗಾಳಿ ಸೇವಿಸಿ ದೇಶದ ಪ್ರಧಾನಿಗಳ ವಿರುದ್ಧವೇ ಕೆಲಸ ಮಾಡುವವರು ಕಾಂಗ್ರೆಸ್ ಕುಮ್ಮಕ್ಕಿನಿಂದ ಬಂದಿದ್ದಾರೆ. ಇಂತಹ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇವೆ. ಆರೋಪಿಗಳನ್ನು ಜಿಲ್ಲೆಯಿಂದ ಗಡಿಪಾರು ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು. – ಅಪ್ಪಚ್ಚು ರಂಜನ್, ಮಾಜಿ ಶಾಸಕರು.

## ಹಮಾಲಿ ಕಾರ್ಮಿಕರ ಬೇಡಿಕೆ ಈಡೇರಿಸಲು ಆಗ್ರಹಿಸಿ ಮನವಿ ಸಲ್ಲಿಕೆ



ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರಿಗೆ ಮನವಿ ಸಲ್ಲಿಸಿದ ಮುಖಂಡರು.


ಮಡಿಕೇರಿ,ಡಿ.11– ಉದ್ಯೋಗ ಭದ್ರತೆ ಹಾಗೂ ಸಾಮಾಜಿಕ ಭದ್ರತೆ ಸೇರಿದಂತೆ ಹಮಾಲಿ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ಕೊಡಗು ಜಿಲ್ಲಾ ಸಮಿತಿ ಆಗ್ರಹಿಸಿದೆ.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ ಸಮಿತಿಯ ಪ್ರಮುಖರು ಹಾಗೂ ಪದಾಧಿಕಾರಿಗಳು ಹಮಾಲಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದರು. ಈ ಸಂದರ್ಭ ಮಾತನಾಡಿದ ಸಮಿತಿಯ ಜಿಲ್ಲಾಧ್ಯಕ್ಷ ಪಿ.ಆರ್. ಭರತ್ ಬಿಪಿಎಂಸಿ, ಮಿಲ್ ಗೋಡೌನ್, ವೇರ್‌ಹೌಸ್, ನಗರ ಗ್ರಾಮೀಣ ಬಜಾರ್, ಬಸ್ ಸ್ಟ್ಯಾಂಡ್, ರೈಲ್ವೆ ಸ್ಟೇಷನ್, ಬಂದರುಗಳಲ್ಲಿ ಲೋಡಿಂಗ್ ಅನ್‌ಲೋಡಿಂಗ್ ಕೆಲಸ ನಿರ್ವಹಿಸುವವರು ಅಸಂಘಟಿತ ಕಾರ್ಮಿಕರಲ್ಲಿಯೇ ಅತ್ಯಂತ ಶ್ರಮದಾಯಕ ಕೆಲಸ ನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರ ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿಯಿಂದ ಅಂಬೇಡ್ಕರ್ ಸಹಾಯ ಹಸ್ತ ಸ್ಮಾರ್ಟ್ ಕಾರ್ಡ್ ಪಡೆದ ಹಮಾಲಿ ಕಾರ್ಮಿಕರು ಸೇರಿದಂತೆ 85ಕ್ಕೂ ಹೆಚ್ಚು ವಲಯದ ಅಸಂಘಟಿತ ಕಾರ್ಮಿಕರಿಗೆ ಕೇವಲ ಅಪಘಾತ ಸಂಬಂಧಿಸಿದ ಕೆಲ ಪರಿಹಾರ ನೀಡುವ ಯೋಜನೆಗಳನ್ನು ಜಾರಿ ಮಾಡಿದೆ. ಆದರೆ ಸರ್ಕಾರ ನಿರ್ದಿಷ್ಟವಾಗಿ ಹಣಕಾಸಿನ ನೆರವು ನೀಡಿಲ್ಲ ಎಂದರು.

ರಾಜ್ಯದ ಲೋಡಿಂಗ್ ಅನ್‌ಲೋಡಿಂಗ್ ಕಾರ್ಮಿಕರಿಗೆ ಉದ್ಯೋಗ ಭದ್ರತೆ ಹಾಗೂ ಸಾಮಾಜಿಕ ಭದ್ರತೆ ಒದಗಿಸಲು ಪ್ರತ್ಯೇಕ ಕಲ್ಯಾಣ ಮಂಡಳಿ ರಚಿಸಬೇಕು. ಕಾರ್ಮಿಕರಿಗೆ ಜಾರಿ ಮಾಡುತ್ತಿರುವ ಸೌಲಭ್ಯಗಳೊಂದಿಗೆ ಸಹಜ ಮರಣಕ್ಕೂ 1 ಲಕ್ಷ ರೂ. ಪರಿಹಾರ ನೀಡಬೇಕು. ಶವ ಸಂಸ್ಕಾರ ಪರಿಹಾರದ ಮೊತ್ತವನ್ನು 25 ರೂ. ಸಾವಿರಕ್ಕೆ ಹೆಚ್ಚಿಸಬೇಕು. ಹಮಾಲಿ ಕಾರ್ಮಿಕರು ಸೇರಿದಂತೆ ಅಸಂಘಟಿತ ಕಾರ್ಮಿಕರಿಗೆ 'ಕರ್ನಾಟಕ ಅಸಂಘಟಿತ ಕಾರ್ಮಿಕರ ಭವಿಷ್ಯನಿಧಿ ಯೋಜನೆ' ಜಾರಿ ಮಾಡಬೇಕು. ಕಡ್ಡಾಯವಾಗಿ ಕಾರ್ಮಿಕ ಕಾನೂನುಗಳು ಜಾರಿಯಾಗುವಂತೆ ಕ್ರಮ ವಹಿಸಬೇಕು. ಕೇಂದ್ರ ಸರ್ಕಾರದ ಈ–ಶ್ರಮ ಕಾರ್ಡ್ ಪಡೆದ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭ ಎ.ಕೆ.ಸುಲೈಮಾನ್, ಆರ್. ಎನ್.ರಾಜು, ಎ.ಗೋಪಿ ಹಾಜರಿದ್ದರು.

## ಡಿ.15,ಅರೆಭಾಷೆ ದಿನಾಚರಣೆ



**ನಾಪೋಕ್ಲು:** ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಅರೆ ಭಾಷೆ ದಿನಾಚರಣೆ ಡಿ.15ರಂದು ಮೂರ್ನಾಡಿನ ಗೌಡ ಸಮಾಜದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ವಹಿಸಲಿದ್ದು, ಕಾರ್ಯಕ್ರಮವನ್ನು ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಕೊಲ್ಯದ ಗಿರೀಶ್ ಉದ್ಘಾಟಿಸಲಿದ್ದಾರೆ.

# ಕೊಡವ ಮುಸ್ಲಿಂ ಸ್ಪೋರ್ಟ್ಸ್ ಅಕಾಡೆಮಿ ಲೋಕಾರ್ಪಣೆ



ಕಕ್ಕಬ್ಬೆಯ ಡಾ.ಅಂಬೇಡ್ಕರ್ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಕ್ರೀಡಾ ಪರಿಕರಗಳನ್ನು ನೀಡುವ ಮೂಲಕ ಕೊಡವ ಮುಸ್ಲಿಂ ಸ್ಪೋರ್ಟ್ಸ್ ಅಕಾಡೆಮಿಯನ್ನು ಉದ್ಘಾಟಿಸಲಾಯಿತು.

ಪೊನ್ನಂಪೇಟೆ,ಡಿ.11– ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪ್ರತಿಭಾನ್ವಿತ ಕ್ರೀಡಾಪಟುಗಳಿದ್ದಾರೆ. ಆದರೆ ಅವರಿಗೆ ಪೂರಕ ವ್ಯವಸ್ಥೆ ಇಲ್ಲದಿರುವ ಕಾರಣ ಯಶಸ್ಸು ಸಾಧಿಸಲಾಗುತ್ತಿಲ್ಲ. ಆದ್ದರಿಂದ ಅರ್ಹ ಕ್ರೀಡಾ ಪ್ರತಿಭೆಗಳಿಗೆ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರೋತ್ಸಾಹ ತೀರಾ ಅಗತ್ಯ ಎಂದು ಕೊಡಗು ಜಿಲ್ಲಾ ಕೆಡಿಪಿ ಸದಸ್ಯರಾದ ಬಾಚಮಂಡ ಲವ ಚಿಣ್ಣಪ್ಪ ಹೇಳಿದರು.

ಕಕ್ಕಬ್ಬೆಯ ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಲ್ಲಿನ ಮಕ್ಕಳಿಗೆ ವಿವಿಧ ಕ್ರೀಡಾ ಪರಿಕರಗಳನ್ನು ವಿತರಿಸುವ ಮೂಲಕ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಕೊಡವ ಮುಸ್ಲಿಂ ಸ್ಪೋರ್ಟ್ಸ್ ಅಕಾಡೆಮಿ (ಕೆ.ಎಂ.ಎಸ್.ಎ.) ಅನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ) ಪ್ರಧಾನ ಕಾರ್ಯದರ್ಶಿ ಈತಲತಂಡ ರಫೀಕ್ ತೂಚಮಕೇರಿ, ಅಕಾಡೆಮಿ ಅಧ್ಯಕ್ಷ ಆಲೀರ ರಶೀದ್ ಮಾತನಾಡಿದರು. ನಂತರ ಕೆಎಂಎಸ್‌ಎ ಲೋಕಾರ್ಪಣೆಯ ನೆನಪಿಗಾಗಿ ಕಕ್ಕಬ್ಬೆಯ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಲಿಚಿ ಗಿಡವೊಂದನ್ನು ನೆಟ್ಟು ಅದನ್ನು ಪೋಷಿಸಿ ಬೆಳೆಸುವ ಪ್ರತಿಜ್ಞೆ ಕೈಗೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಕೆಎಂಎಸ್‌ಎ ಉಪಾಧ್ಯಕ್ಷರಾದ ಕುಂಡಂಡ ಎ. ರಜ್ಜಾಕ್, ಕೋಶಾಧಿಕಾರಿ ಆಲೀರ ಎ. ಅಜ್ಜೀಜ್, ಜಂಟಿ ಕಾರ್ಯದರ್ಶಿ ಕಣ್ಣಪ್ಪಣೆ ವೈ. ಅಶ್ರಫ್, ನಿರ್ದೇಶಕರಾದ ಆಲೀರ ಎ. ಹುಸೈನ್, ಕೋಳುಮಂಡ ರಫೀಕ್, ಆಲೀರ ಬಿ. ಮೂಸಾ, ಪುಂಜೆರ ಹೆಚ್. ಅಬ್ದುಲ್ಲ, ಕುಪ್ಪೋಡಂಡ ಮಹಮ್ಮದ್, ಮಂದಮಾಡ ರಫೀಕ್ (ಮುನ್ನ), ಪರವಂಡ ಎ. ಸಿರಾಜುದ್ದೀನ್, ಕಕ್ಕಬ್ಬೆ ಡಾ. ಅಂಬೇಡ್ಕರ್ ವಸತಿ ಶಾಲೆಯ ಮುಖ್ಯ ಶಿಕ್ಷಕಿ ಎಂ.ಹೆಚ್. ರಜ್ಜಿನಾ, ಸಹ ಶಿಕ್ಷಕರಾದ ನಸೀಮ, ಜಲಜಾಕ್ಷಿ ಮೊದಲಾದವರು ಉಪಸ್ಥಿತರಿದ್ದರು. ಕೆ.ಎಂ.ಎಸ್.ಎ. ಪ್ರಧಾನ ಕಾರ್ಯದರ್ಶಿ ಮೀತಲತಂಡ ಇಸ್ಮಾಯಿಲ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಸಂಸ್ಥೆಯ ಕ್ರೀಡಾ ಸಂಚಾಲಕ ಕತ್ತಣಿರ ಹೆಚ್. ಅಬ್ದುಲ್ ರಹಿಮಾನ್ (ಅಂದಾಯಿ) ವಂದಿಸಿದರು.

## ಮೊಣ್ಣಮ್ಮಯ್ಯ ನಿಧನ



ನಾಪೋಕ್ಲು, ಡಿ.11– ಇಲ್ಲಿಗೆ ಸಮೀಪದ ಹಳೆ ತಾಲೂಕು ನಿವಾಸಿ ಪಾಡಿಯಮ್ಮಂಡ ಮೊಣ್ಣಮ್ಮಯ್ಯ (ಯೋಗೇಶ್) ಗುರುವಾರ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆ ಗುರುವಾರ ಹಳೇ ತಾಲೂಕಿನ ಪಾಡಿಯಮ್ಮಂಡ ಕುಟುಂಬಸ್ಥರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ದಾಯನ ಶಿವಾಜಿ



**ನಾಪೋಕ್ಲು :** ಇಲ್ಲಿಗೆ ಸಮೀಪದ ಚೇರಂಬಾಣೆ ಗ್ರಾಮ ಪಂಚಾಯಿತಿಯ ಕೋಪಟ್ಟಿ ಗ್ರಾಮದ ನಿವಾಸಿ ದಾಯನ ಶಿವಾಜಿ (75) ಗುರುವಾರ ನಿಧನರಾದರು. ಚೇರಂಬಾಣೆ ಅರುಣ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ದಾಯನ ಶಿವಾಜಿ ಅವರ ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ಜರುಗಲಿದೆ. ಮೃತರು ತಾಯಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಬಂದು ಬಾಂಧವರನ್ನು ಅಗಲಿದ್ದಾರೆ.

## ಜೀರ್ಣೋದ್ಧಾರಗೊಂಡ ದೇವಾಲಯ ಲೋಕಾರ್ಪಣೆ



ಗುಂಡ್ಲುಪೇಟೆ, ಡಿ.11– ಪಟ್ಟಣದ ಸೋಮೇಶ್ವರ ವಿದ್ಯಾರ್ಥಿನಿಲಯ ಪಕ್ಕದಲ್ಲಿರುವ ಶ್ರೀ ಮಹಾ ಗಣಪತಿ, ವಾಸುಕಿ ಮತ್ತು ಸುಬ್ರಹ್ಮಣ್ಯ ಸ್ವಾಮಿಯವರ ಜೀರ್ಣೋದ್ಧಾರಗೊಂಡ ದೇವಾಲಯವನ್ನು ಗುರುವಾರ ಲೋಕಾರ್ಪಣೆಗೊಳಿಸಲಾಯಿತು.

ತಾಲೂಕಿನ ಕೆಬ್ಬೇಪುರದ ಅಶ್ವಥ್‌ಪುರಿ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಈ ವೇಳೆ ಬಡಾವಣೆ ನಿವಾಸಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಉಪಸ್ಥಿತರಿದ್ದರು.

## ಸ್ಕೂಟರ್‌ಗೆ ಬೈಕ್ ಡಿಕ್ಕಿ: ಸವಾರ ಸಾವು

ಚಾಮರಾಜನಗರ, ಡಿ.11– ಪೆಟ್ರೋಲ್ ಬಂಕ್‌ನಿಂದ ಹೊರ ಬರುತ್ತಿದ್ದ ಸ್ಕೂಟರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಸಂತೇಮರಹಳ್ಳಿಯಲ್ಲಿ ನಡೆದಿದೆ.

ಯಳಂದೂರು ತಾಲೂಕಿನ ಹೊನ್ನೂರು ಗ್ರಾಮದ ಮಹದೇವಸ್ವಾಮಿ(50) ಸಾವನ್ನಪ್ಪಿದವರು. ಈತ ಟಿವಿಎಸ್ ಎಕ್ಸ್‌ಎಲ್ ಸ್ಕೂಟರ್‌ಗೆ ಪೆಟ್ರೋಲ್ ಹಾಕಿಸಿಕೊಂಡು ಪೆಟ್ರೋಲ್ ಬಂಕ್‌ನಿಂದ ಹೆದ್ದಾರಿಗೆ ಬರುತ್ತಿದ್ದ ವೇಳೆ ಬಂದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಹದೇವಸ್ವಾಮಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಮಿಸಿದ ಸಂತೇಮರಹಳ್ಳಿ ಠಾಣೆ ಪೊಲೀಸರು ಪರಿಶೀಲಿಸಿ ಶವವನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ಸಂತೇಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಚಾ.ನಗರದಲ್ಲಿ ಜೆಎಸ್‌ಎಸ್ ರಂಗೋತ್ಸವಕ್ಕೆ ವಿಧ್ಯುಕ್ತ ಚಾಲನೆ

### ಭೂಮಿಯಷ್ಟೇ ತೂಕದ ಹೆಸರಿದ್ದರೆ ಅದು ರಂಗಭೂಮಿಗೆ ಮಾತ್ರ: ವಿ.ಎನ್.ಮಲ್ಲಿಕಾರ್ಜುನಸ್ವಾಮಿ




ಜೆಎಸ್‌ಎಸ್ ರಂಗೋತ್ಸವಕ್ಕೆ ಚಂಡೆ ಬಾರಿಸುವ ಮೂಲಕ ಚಾಲನೆ ನೀಡಲಾಯಿತು.

ಚಾಮರಾಜನಗರ, ಡಿ.11– ಮಕ್ಕಳ ಮನೋವಿಕಾಸ ವೃದ್ಧಿಯಾಗಲು ರಂಗ ಚಟುವಟಿಕೆಗಳು ಪೂರಕವಾಗಿದ್ದು, ಭೂಮಿಯಷ್ಟೇ ತೂಕದ ಹೆಸರಿದ್ದರೆ ಅದು ರಂಗಭೂಮಿಗೆ ಮಾತ್ರ ಎಂದು ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಲಾ ಮಂಟಪ ಹಾಗೂ ಚಾಮರಾಜನಗರ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಗುರುವಾರ 3 ದಿನಗಳ ಜೆಎಸ್‌ಎಸ್ ರಂಗೋತ್ಸವಕ್ಕೆ ಚಂಡೆ ಬಾರಿಸುವ ಮೂಲಕ ವಿಧ್ಯುಕ್ತ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ಯುವಜನತೆ ರಂಗಭೂಮಿ ಬಗ್ಗೆ ಆಸಕ್ತಿಯನ್ನೇ ಕಳೆದುಕೊಂಡು ತಾನಾಯಿತು, ತನ್ನ ಸಂಪಾದನೆಯಾಯಿತು ಎಂದು ಹಣ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ. ಒಂದು ವೇಳೆ ಅವರಿಗೆ ಮಕ್ಕಳಾದರೂ, ಅವರಿಗೆ ಸಂಸ್ಕಾರ, ಸಂಸ್ಕೃತಿ ಹೇಳಿ ಕೊಡುವವರಿಲ್ಲ. ಹಳ್ಳಿಗಾಡಿನಿಂದ ನಗರಕ್ಕೆ ಮನೆಗೆಲಸಕ್ಕೆ ಬರುವವರು ಮಕ್ಕಳ ತಾಯಾಗುವ ಸ್ಥಿತಿ ಇದೆ. ಇಂತಹ ಕಾಲಘಟ್ಟದಲ್ಲಿ ಕಳೆದ 14 ವರ್ಷಗಳಿಂದ ಜೆಎಸ್‌ಎಸ್ ಕಲಾ ಮಂಟಪ ಜೆಎಸ್‌ಎಸ್ ರಂಗೋತ್ಸವ ಹೆಸರಿನಲ್ಲಿ ಓದಿನ ಜೊತೆಗೆ ಮಕ್ಕಳಲ್ಲಿರುವ ಪ್ರತಿಭೆಗಳನ್ನು ಹೊರತರುವ ಕೆಲಸ ಮಾಡುತ್ತಿದೆ. ಸಂಸ್ಥೆಯು ಶಿಕ್ಷಣದ ಜೊತೆಗೆ ಮಕ್ಕಳಲ್ಲಿ ರಂಗಭೂಮಿ ಮಹತ್ವ ಉಣಬಡಿಸುತ್ತಿರುವುದು ಪ್ರಶಂಸನೀಯ ಎಂದರು.

ಜಿಪಂ ಸಿಇಓ ಮೋನಾರೋತ್ ಮಾತನಾಡಿ, ಓದಿನ ಜೊತೆಗೆ ಮಕ್ಕಳು ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಲು ಪಠ್ಯೇತರ ಚಟುವಟಿಕೆಗಳು ಪೂರಕವಾಗಿವೆ. ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಮಕ್ಕಳ ವ್ಯಕ್ತಿತ್ವ ವಿಕಸನಗೊಳ್ಳುವುದರ ಜೊತೆಗೆ ಅವರ ಮುಂದಿನ ಭವಿಷ್ಯ ಉಜ್ವಲಗೊಳ್ಳಲಿದೆ ಎಂದರು.

ಜೆಎಸ್‌ಎಸ್ ರಂಗೋತ್ಸವ ಸಂಯೋಜಕ ಚಂದ್ರಶೇಖರ ಹೆಗ್ಗೋಠಾರ ಮಾತನಾಡಿ, 2011ರಿಂದ ಜೆಎಸ್‌ಎಸ್ ಕಲಾ ಮಂಟಪದಿಂದ ಜೆಎಸ್‌ಎಸ್ ರಂಗೋತ್ಸವ ಹೆಸರಿನಲ್ಲಿ ಮಕ್ಕಳ ನಾಟಕೋತ್ಸವ ಆರಂಭಿಸಲಾಯಿತು. 2012ರಲ್ಲಿ ಬೆಂಗಳೂರಿಗೆ ಜೆಎಸ್‌ಎಸ್ ರಂಗೋತ್ಸವ ವಿಸ್ತರಿಸಲಾಯಿತು. 2013ರಲ್ಲಿ ಚಾಮರಾಜನಗರ, ಗುಂಡ್ಲುಪೇಟೆಗೂ ವಿಸ್ತರಣೆ ಮಾಡಿ, ಅಂದಿನಿಂದಲೂ ರಂಗೋತ್ಸವ ಅತ್ಯಂತ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ಈವರಗೆ 1800ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಾಟಕಗಳಲ್ಲಿ ಅಭಿನಯಿಸಿದ್ದಾರೆ ಎಂದರು.

ಕಾರ್ಯಕ್ರಮದ ನಂತರ ಮಧ್ಯಾಹ್ನ ಹಾಗೂ ಸಂಜೆ ಮಂಜುನಾಥ್ ಬೆಳಕೆರೆ ರಚನೆಯ ಶಕುಂತಲಾ ಹೆಗಡೆ ನಿರ್ದೇಶನದ 'ಶರೀಫ' ನಾಟಕವನ್ನು ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳು ಮನೋಜ್ಞವಾಗಿ ಅಭಿನಯಿಸಿ ಜನಮನಸೂರೆಗೊಂಡರು. ಈ ವೇಳೆ ಪ್ರಾಂಶುಪಾಲ ಡಾ.ಎನ್.ಮಹದೇವಸ್ವಾಮಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಾರ್ವಜನಿಕ ಸಂಪರ್ಕಾಧಿಕಾರಿ ಆರ್. ಎಂ.ಸ್ವಾಮಿ ಸೇರಿದಂತೆ ಮೈಸೂರು ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆ ವಿದ್ಯಾರ್ಥಿಗಳು, ಮೈಸೂರು ಶಿಕ್ಷಕರ ಬಡಾವಣೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಭಾಗವಹಿಸಿದ್ದರು.

ರಂಗಭೂಮಿ ಸೇರಿದಂತೆ ವ್ಯಕ್ತಿತ್ವ ವಿಕಸನಗೊಳಿಸುವ ಯಾವುದೇ ಚಟುವಟಿಕೆಯಲ್ಲಾದರೂ ಮಕ್ಕಳು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕೀಳರಿಮೆ ಬಿಟ್ಟು ಬಂದ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. – ರೇಖಾ ರೋಹಿತ್, ಚಿತ್ರನಟಿ.

# ಕಾಡು ಪ್ರಾಣಿಗಳ ಹಾವಳಿ ತಡೆಗೆ ಒತ್ತಾಯಿಸಿ ಪ್ರತಿಭಟನೆ



ಕಾಡು ಪ್ರಾಣಿಗಳ ಹಾವಳಿ ತಡೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಡಿ.11– ಕಾಡು ಪ್ರಾಣಿಗಳ ಹಾವಳಿ ತಡೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಾಮೂಹಿಕ ನಾಯಕತ್ವದಲ್ಲಿ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಬೈಕ್ ರ್‍ಯಾಲಿ ಮೂಲಕ ಬಿಆರ್‌ಟಿ ಡಿಎಫ್‌ಓ ಕಚೇರಿ ಹಾಗೂ ಸೆಸ್ಕ್ ಕಚೇರಿಗೆ ತೆರಳಿದ ಪ್ರತಿಭಟನಾಕಾರರು, ಅಧಿಕಾರಿಗಳಿಗೆ ಮನವಿ ಸಲ್ಲಿಸಿದ ಬಳಿಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು.

ತಾಲೂಕಿನ ಪುಣಜನೂರು ಗ್ರಾಮದ ಜಮೀನುಗಳಿಗೆ ಲಗ್ಗೆ ಹಾಕುವ ಕಾಡಾನೆಗಳು ಫಸಲನ್ನು ತುಳಿದು, ತಿಂದು ನಾಶಪಡಿಸುತ್ತಿವೆ. ಅಲ್ಲದೇ ಜಮೀನಿನ ಕಡೆ ತೆರಳುವ ರೈತರ ಮೇಲೆ ಹುಲಿ, ಚಿರತೆ ದಾಳಿ ಮಾಡುತ್ತಿವೆ. ಆದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಕಾಡುಪ್ರಾಣಿಗಳ ಹಾವಳಿ ತಪ್ಪಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು. ನಮ್ಮ ಜಮೀನುಗಳಿಗೆ ರೈಲ್ವೆ ಕಂಬಿಗಳನ್ನು ಅಳವಡಿಸಬೇಕು ಎಂದು ಆಗ್ರಹಿಸಿದರು.

ಮುಂಜಾನೆ 2ರಿಂದ 9ರವರೆಗೆ ದಿನನಿತ್ಯ ತ್ರಿಫೇಸ್ ವಿದ್ಯುತ್ ಕೊಡಲಾಗುತ್ತಿದೆ. ಆದರೆ ಕಾಡು ಪ್ರಾಣಿಗಳ ಹಾವಳಿಯಿಂದಾಗಿ ರಾತ್ರಿ ವೇಳೆ ಜಮೀನುಗಳಿಗೆ ತೆರಳಲು ಭಯಪಡುವಂತಾಗಿದೆ. ಆದ್ದರಿಂದ ಈ ಹಿಂದಿನಂತೆ ಬೆಳಗ್ಗೆ 9ರಿಂದ ಸಂಜೆ 4 ರವರೆಗೆ ವಿದ್ಯುತ್ ನೀಡಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಹೊನ್ನೂರು ಪ್ರಕಾಶ್, ನಟರಾಜು, ಸತೀಶ್, ನಾಗರಾಜು, ಜಡೇಸ್ವಾಮಿ, ಮಾದೇಶ, ನಂಜುಂಡನಾಯ್ಕ, ಶಿವಲಿಂಗಸ್ವಾಮಿ ಸೇರಿದಂತೆ ಇತರರು ಇದೇ ವೇಳೆ ಉಪಸ್ಥಿತರಿದ್ದರು.

## ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.11– ಚಾಮರಾಜನಗರ, ಹರದನಹಳ್ಳಿ ಮತ್ತು ಬೇಗೂರು ಉಪವಿಭಾಗಗಳ ವ್ಯಾಪ್ತಿ 3ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಡಿ.13ರಂದು ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ಕೋಡಿಮೋಳೆ, ಚಾಮರಾಜನಗರ ಟೌನ್–1, ಜಿಲ್ಲಾಧಿಕಾರಿ ಕಚೇರಿ, ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣ, ರೈಲ್ವೆ ಬಡಾವಣೆ, ಕೆಹೆಚ್‌ಪಿ ಕಾಲೋನಿ, ಪೊಲೀಸ್ ಕ್ವಾರ್ಟಸ್, ಜೂನಿಯರ್ ಕಾಲೇಜ್, ಗುಂಡ್ಲುಪೇಟೆ ರಸ್ತೆ, ಮಾದಾಪುರ, ದೊಡ್ಡರಾಯಪೇಟೆ, ಮಂಗಲ, ಕಾಗಲವಾಡಿ, ಹರದನಹಳ್ಳಿ, ಬೇಡರಪುರ, ಟಿ.ಕೆ.ಮೋಳೆ, ಶಿವಪುರ, ರಾಮಸಮುದ್ರ, ಕರಿನಂಜನಪುರ, ಕೋರ್ಟ್ ರಸ್ತೆ, ಗೂಳಿಪುರ, ಹೊಂಗನೂರು ಹಾಗೂ ಕಬ್ಬಳ್ಳಿ, ಸೋಮಳ್ಳಿ, ಪಡಗೂರು, ಬಲಚವಾಡಿ, ನಿಟ್ರೆ, ಅಗತಗೌಡನಹಳ್ಳಿ, ಮೂಡ್ನಾಕೂಡು, ಮುಕ್ಕಡಹಳ್ಳಿ, ಉಡಿಗಾಲ, ಕಲ್ಪುರ, ದೇವಲಾಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಶುದ್ಧ ಮನಸ್ಸುಳ್ಳ, ವಿನಯವಂತ ರಾಜಕಾರಣಿ ಜಯಣ್ಣ

### ನಳಂದ ಬುದ್ಧ ವಿಹಾರದ ಬೋಧಿ ರತ್ನ ಬಂತೇಜಿ ಬಣ್ಣನೆ




ಪುಣ್ಯಸ್ಮರಣೆಯಲ್ಲಿ ನಳಂದ ಬುದ್ಧ ವಿಹಾರದ ಬೋಧಿ ರತ್ನ ಬಂತೇಜಿ ಮಾತನಾಡಿದರು.

ಯಳಂದೂರು, ಡಿ.11– ಬುದ್ಧ ಮಾರ್ಗದಲ್ಲಿ ಸಮಾಜಕ್ಕೆ ಒಳಿತನ್ನು ಬಯಸಿ ಸೇವೆಯನ್ನೇ ಗುರಿಯಾಗಿಟ್ಟುಕೊಂಡ ವಿರಳ ರಾಜಕಾರಣಿಗಳಲ್ಲಿ ಮಾಜಿ ಶಾಸಕ ಜಯಣ್ಣ ಒಬ್ಬರಾಗಿದ್ದರು ಎಂದು ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಬಣ್ಣಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ಎಸ್.ಜಯಣ್ಣ ಅಭಿಮಾನಿ ಬಳಗದಿಂದ ಹಮ್ಮಿಕೊಂಡಿದ್ದ ಮಾಜಿ ಶಾಸಕ ಎಸ್.ಜಯಣ್ಣ ಅವರ ಮೊದಲ ವರ್ಷದ ಪುಣ್ಯಸ್ಮರಣೆಯಲ್ಲಿ ಮಾತನಾಡಿದ ಅವರು, ಅವರೊಬ್ಬ ಶುದ್ಧ ಮನಸ್ಸುಳ್ಳ, ವಿನಯವಂತ, ಜನಾನುರಾಗಿ ರಾಜಕಾರಣಿ. ಇಂತಹವರು ಇಂದು ವಿರಳರಾಗಿದ್ದಾರೆ. ದೇಶದೆಲ್ಲೆಡೆ ಇಂದು ಅಶಾಂತಿ ತಾಂಡವವಾಡುತ್ತಿದೆ. ಇದಕ್ಕೆ ರಾಜಕೀಯ ಪ್ರೇರಣಾ ಶಕ್ತಿಗಳು ಕಾಣದ ಕೈಗಳಾಗಿ ಕೆಲಸ ಮಾಡುತ್ತಿದೆ. ಇಂತಹ ಮನಃ ಸ್ಥಿತಿಯಲ್ಲಿ ಜಯಣ್ಣರಂತಹ ತಮ್ಮ ರಾಜಕೀಯ ವಿರೋಧಿಗಳಿಗೂ ಒಳಿತನ್ನು ಬಯಸುವ ಶುದ್ಧ ಮನಸ್ಸಿನ ವ್ಯಕ್ತಿಗಳ ಅಗತ್ಯವಿದೆ. ಇದನ್ನು ಈಗಿನ ರಾಜಕಾರಣಿಗಳು ಪಾಲಿಸಿಕೊಂಡು ಬರುವ ಅಗತ್ಯವಿದೆ ಎಂದ ಅವರು, ಜಯಣ್ಣ ಅವರು ತಾವು ಕೂಡ ಬಂತೇಜಿಯಾಗಬೇಕೆಂಬ ಇಂಗಿತ ವ್ಯಕ್ತಪಡಿಸಿದ್ದರು ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್ ಮಾತನಾಡಿ, ಮಾಜಿ ಶಾಸಕ ಎಸ್.ಜಯಣ್ಣ ತಮಗೆ ಅತ್ಯಂತ ಆಪ್ತರಾಗಿದ್ದರು. ಅಲ್ಲದೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಪ್ತ ಬಳಗದಲ್ಲಿ ಇವರು ಒಬ್ಬರಾಗಿದ್ದರು. ತಾವು ಶಾಸಕರಾಗಿದ್ದ ಕಾಲದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ಅನುದಾನ ತಂದು ಶಾಶ್ವತ ಕೆಲಸಗಳನ್ನು ಮಾಡಿದ್ದಾರೆ. ಕೊಳ್ಳೇಗಾಲ ಕ್ಷೇತ್ರ ಮಾದರಿ ಮಾಡುವ ದೂರದೃಷ್ಟಿ ಹೊಂದಿದ್ದರು. ಕೊಟ್ಟ ಮಾತಿಗೆ ತಪ್ಪದ ರಾಜಕಾರಣಿಯಾಗಿದ್ದರು. ಇವರು ತಮ್ಮ ಅಧಿಕಾರವಧಿಯಲ್ಲಿ ಯಾರೊಂದಿಗೂ ವಿರೋಧ ಕಟ್ಟಿಕೊಳ್ಳಲಿಲ್ಲ. ಬ್ರಹ್ಮಚಾರಿಯಾಗಿಯೇ ಇದ್ದು ಸೇವೆಯನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡ ಮಾದರಿ ರಾಜಕಾರಣಿಯಾಗಿದ್ದರು ಎಂದರು.

ಅಭಿಮಾನಿ ಬಳಗದ ಅಧ್ಯಕ್ಷ ವಡಗೆರೆ ಡಾ.ವಿ.ಎನ್.ಮಹದದೇವಯ್ಯ ಮಾತನಾಡಿ, ಎಸ್.ಜಯಣ್ಣ 2 ಬಾರಿ ಶಾಸಕರಾಗಿ, ಉಗ್ರಾಣ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರೂ, ಯಾವುದೇ ಆಸ್ತಿ ಮಾಡಲಿಲ್ಲ. ತಾವು ಸಾಯುವ ಕೊನೆ ಘಳಿಗೆಯಲ್ಲಿ ಮನೆ ಕಟ್ಟಿಕೊಂಡರು. ತಮ್ಮ ಆಪ್ತರಿಗೆಲ್ಲಾ ಹೊಸ ಮನೆಗೆ ಕರೆಸಿ ಊಟ ಹಾಕಿಸಬೇಕು ಎಂಬ ಇವರ ಆಸೆ ಕೊನೆಗೂ ಈಡೇರಲಿಲ್ಲ. ಹೀಗಾಗಿ ನಾವೆಲ್ಲಾ ಸೇರಿ ಈ ಕಾರ್ಯಕ್ರಮ ಆಯೋಜಿಸಿದ್ದೇವೆ ಎಂದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ರಾಜ್ಯ ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್, ಜಿಪಂ ಮಾಜಿ ಸದಸ್ಯ ಎನ್.ಕಮಲ್ ನಾಗರಾಜು, ಅಂಬೇಡ್ಕರ್ ಸೇವಾ ಸಮಿತಿ ಅಧ್ಯಕ್ಷ ಸಿದ್ದರಾಜು, ಭಾಗ್ಯ, ಚೇತನ್ ಮಾತನಾಡಿದರು.

ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ನಗರಸಭಾ ಮಾಜಿ ಅಧ್ಯಕ್ಷ ಶಾಂತರಾಜು, ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ನಾಗರಾಜು, ನಂಜುಂಡಸ್ವಾಮಿ, ವೆಂಕಟೇಶ್, ರಾಮಚಂದ್ರ, ನಾಗರತ್ನ ಸೇರಿದಂತೆ ಇತರರಿದ್ದರು.



# ಲ್ಯಾಂಡ್‌ಲಾರ್ಡ್

## ರಾಜ್ ಬಿ.ಶೆಟ್ಟಿ ವಿಲನ್

ಜಡೇಶ್ ಕೆ.ಹಂಪಿ ನಿರ್ದೇಶನದ 'ಲ್ಯಾಂಡ್‌ಲಾರ್ಡ್' ಚಿತ್ರದಲ್ಲಿ ರಾಜ್ ಬಿ.ಶೆಟ್ಟಿ ವಿಲನ್ ಆಗಿ ಕಾಣಿಸಿಕೊಂಡಿದ್ದು, ಅವರ ಪಾತ್ರ ಪರಿಚಯಿಸುವ ದಿ ರೂಲರ್ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ದುನಿಯಾ ವಿಜಯ್ ಹಾಗೂ ಅವರ ಪುತ್ರಿ ರಿತನ್ಯಾ, ರಚಿತರಾಮ್ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ವೇದಿಕೆಯಲ್ಲಿ ರಾಜ್ ಬಿ.ಶೆಟ್ಟಿ ಮಾತನಾಡಿ, ಈ ಚಿತ್ರದಲ್ಲಿ ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡುವಂತಹ ಕೆಟ್ಟ ವ್ಯಕ್ತಿಯ ಪಾತ್ರ ಮಾಡಿದ್ದು, ಕೋಲಾರ ಭಾಷೆಯಲ್ಲಿ ಮಾತಾಡಿದ್ದೇನೆ. ದುನಿಯಾ ವಿಜಯ್ ಅವರ ಜೊತೆಗೆ ಮೊದಲ ಬಾರಿಗೆ ನಟಿಸಿದ್ದು ಖುಷಿಯಾಗಿದೆ ಎಂದರು. ನಾನು ಇಪ್ಪತ್ತು ವರ್ಷಗಳ ಹಿಂದೆ ಏನೂ ಇಲ್ಲದೆ ಬಂದೆ. ರಾಜ್ ಬಿ.ಶೆಟ್ಟಿ ಅವರು ಒಂದು ಮೊಟ್ಟೆ ಇಟ್ಟುಕೊಂಡು ಬಂದವರು. ಆಗ ನಮ್ಮನ್ನು ಎಷ್ಟು ಜನ ಆಡಿಕೊಂಡಿದ್ದಾರೆ. ಕೊನೆಗೆ ನಾನೇ ಸರ್ವೈವರ್, ಅವರೇ ರೂಲರ್ ಆಗಿದ್ದೇವೆ. ಜ.23ರಂದು ನಮ್ಮ ಚಿತ್ರ ಬಿಡುಗಡೆಯಾಗುತ್ತಿದೆ ಎಂದು ನಾಯಕ ದುನಿಯಾ ವಿಜಯ್ ಹೇಳಿದರು.

ನಿರ್ದೇಶಕ ಜಡೇಶ್ ಕೆ.ಹಂಪಿ ಮಾತನಾಡುತ್ತಾ, ನಮ್ಮ ಚಿತ್ರದಲ್ಲಿ ದುನಿಯಾ ವಿಜಯ್ ಅವರು 50 ವರ್ಷದ ವ್ಯಕ್ತಿಯಾಗಿ, ರಚಿತರಾಮ್ ಒಂದು ಮಗುವಿನ ತಾಯಿಯಾಗಿ ಕಾಣಿಸಿಕೊಂಡಿದ್ದಾರೆ. ರಾಜ್ ಬಿ. ಶೆಟ್ಟಿ ಅವರು ದಿ ರೂಲರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದರು.

ಕಳೆದ ತಿಂಗಳು ನಮ್ಮ ಚಿತ್ರದ ದಿ ಸರ್ವೈವರ್ ಟೀಸರ್ ಬಿಡುಗಡೆಯಾಗಿತ್ತು. ಈಗ ದಿ ರೂಲರ್ ಟೀಸರ್ ಅನಾವರಣವಾಗಿದೆ. ನಮ್ಮ ಚಿತ್ರದಲ್ಲಿ ದುನಿಯಾ ವಿಜಯ್ ಹಾಗೂ ರಾಜ್ ಬಿ.ಶೆಟ್ಟಿ ಇಬ್ಬರೂ ನಟಿಸಿದ್ದು ದೊಡ್ಡ ವ್ಯಾಲ್ಯೂ ತಂದುಕೊಟ್ಟಿದೆ ಎಂದು ನಿರ್ಮಾಪಕ ಹೇಮಂತ್‌ಗೌಡ ಹೇಳಿದರು.

# ಸೂಪರ್‌ಹಿಟ್ ಚಿತ್ರದ ಟೀಸರ್



ಕೃಷ್ಣ ಟಾಕೀಸ್ ಖ್ಯಾತಿಯ ವಿಜಯಾನಂದ್ ನಿರ್ದೇಶನದ ಮತ್ತೊಂದು ಚಿತ್ರ ಸೂಪರ್‌ಹಿಟ್. ಬಿಗ್‌ಬಾಸ್ ಖ್ಯಾತಿಯ ಗಿಲ್ಲಿ ನಟ, ಗೌರವ್ ಶೆಟ್ಟಿ ಹಾಗೂ ಶ್ವೇತಾ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆಯಾಯಿತು.

ಒಂದು ಸಿನಿಮಾ ಯಶಸ್ವಿಯಾದಾಗ ಅದನ್ನು ಸೂಪರ್‌ಹಿಟ್ ಎನ್ನುತ್ತೇವೆ, ಆದರೆ, ಈ ತಂಡ ಸೂಪರ್‌ಹಿಟ್ ಎಂಬ ಟೈಟಲ್‌ನಲ್ಲೇ ಸಿನಿಮಾ ಮಾಡಿದೆ ರನ್ನಿಂಗ್ ಸಕ್ಸಸ್ ಫುಲಿ ಎಂಬ ಟ್ಯಾಗ್‌ಲೈನ್ ಕೂಡ ಇದಕ್ಕಿದೆ. ಈ ಚಿತ್ರದ ಟೈಟಲ್ ಬಗ್ಗೆ ಇಂಟರೆಸ್ಟಿಂಗ್ ಸಂಗತಿಯನ್ನು ನಿರ್ದೇಶಕರು ಹಂಚಿಕೊಂಡಿದ್ದಾರೆ. ನಿರ್ಮಾಪಕ ಜಿ.ಉಮೇಶ್ ಒಂದು ಸೂಪರ್‌ಹಿಟ್ ಸಿನಿಮಾ ಮಾಡಬೇಕೆಂಬ ಕನಸಿಟ್ಟುಕೊಂಡಿದ್ದರಂತೆ. ಹಾಗಾಗಿ ನಿರ್ದೇಶಕರು ಮಾಡಿಕೊಂಡಿದ್ದ ಕಥೆಗೂ ಇದೇ ಟೈಟಲ್ ಸೂಟ್ ಆಗುತ್ತೆ ಅಂತ ಸೂಪರ್‌ಹಿಟ್ ಟೈಟಲ್ ಇಟ್ಟಿದ್ದು ಕಮರ್ಷಿಯಲ್ ಜತೆಗೆ ಕಾಮಿಡಿ, ಥ್ರಿಲ್ಲರ್ ಕಥೆ ಹೆಣೆದು ಈ ಚಿತ್ರ ಮಾಡಿರುವುದಾಗಿ ವಿವರಿಸಿದರು. ಆರ್.ಡಿ.ನಾಗಾರ್ಜುನ ಅವರ ಛಾಯಾಗ್ರಹಣ, ಡಾ.ವಿ.ನಾಗೇಂದ್ರಪ್ರಸಾದ್ ಅವರ ಸಾಹಿತ್ಯ ಮತ್ತು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

# ಈ ವಾರ ತೆರೆ ಮೇಲೆ 'ಪದ್ಮಗಂಧಿ'ಯ ಪರಿಮಳ




ಹಿರಿಯ ನಟ ಸುಚೇಂದ್ರ ಪ್ರಸಾದ್ ಅವರ ನಿರ್ದೇಶನದ ಪದ್ಮಗಂಧಿ ಚಿತ್ರದ ಟ್ರೈಲರ್ ಹಾಗೂ ಹಾಡು ಬಿಡುಗಡೆಯಾಗಿ ಸಂಗೀತಪ್ರಿಯರ ಗಮನ ಸೆಳೆದಿದ್ದು, ಚಿತ್ರ ಈ ಶುಕ್ರವಾರ ತೆರೆ ಕಾಣುತ್ತಿದೆ. ಮಾಜಿ ಎಂಎಲ್ಸಿ, ನಿವೃತ್ತ ಪ್ರೊಫೆಸರ್ ಎಸ್.ಆರ್.ಲೀಲಾ ಅವರ ರಚನೆ ಹಾಗೂ ನಿರ್ಮಾಣ ಈ ಚಿತ್ರಕ್ಕಿದೆ.

ಈ ಚಿತ್ರದಲ್ಲಿ ವಿದ್ಯಾರ್ಥಿನಿಯಾಗಿ ಕು.ಮಹಾಪದ್ಮ, ಗುರುಮಾತೆಯಾಗಿ ಪರಿಪೂರ್ಣ ಚಂದ್ರಶೇಖರ್, ಡಾ.ಗೌರಿ ಸುಬ್ರಹ್ಮಣ್ಯ, ಡಾ.ಪ್ರೇಮಾ, ಡಾ.ಹೇಮಂತ್ ಕುಮಾರ್, ಆಚಾರ್ಯ ಮೃತ್ಯುಂಜಯ ಶಾಸ್ತ್ರಿ, ಪಂಡಿತ ಪ್ರಸನ್ನ ವೈದ್ಯ, ಡಾ. ದೀಪಕ್ ಪರಮಶಿವನ್ ನಟಿಸಿದ್ದಾರೆ. ಡಾ.ದೀಪಕ್ ಪರಮಶಿವನ್ ಅವರ ಸಂಗೀತ ಸಂಯೋಜನೆ, ಮನು ಯಪ್ಲಾರ್, ನಾಗರಾಜ್ ಅದ್ವಾನಿ, ಗಿರಿಧರ ದಿವಾನ್ ಅವರ ಛಾಯಾಗ್ರಹಣ, ಎನ್.ನಾಗೇಶ್ ನಾರಾಯಣಪ್ಪ ಅವರ ಸಂಕಲನ ಈ ಚಿತ್ರಕ್ಕಿದೆ.

ಪದ್ಮಗಂಧಿ ಚಿತ್ರವು ಆದಿಯಿಂದ ಅಂತ್ಯದವರೆಗೂ ಪದ್ಮಗಂಧಿಯ ಪರಿಮಳವನ್ನು ಪಸರಿಸುತ್ತಲೇ ಸಾಗುತ್ತದೆ. ದೈವೀಕ ಗಂಧ ಮೆತ್ತಿಕೊಂಡಿರುವ ಕಮಲದ ಹೂವಿನ ಬಗ್ಗೆಯೇ ಈ ಚಿತ್ರದ ಕಥೆ ಇರುವುದು ವಿಶೇಷ. ನಮ್ಮಲ್ಲಿ ದೈವೀಕ ಅನುಭೂತಿ ಸ್ಫುರಿಸುವ ಕಮಲ ಪುಷ್ಪದ ಬಗ್ಗೆ ಆಳವಾಗಿ ವಿವರಿಸುತ್ತಾ, ಅದರ ಅಗಾಧತೆ ಮೊಗೆದರೂ ಮುಗಿಯದ ಅಕ್ಷಯ ಪಾತ್ರೆಯಂತೆ ಭಾಸವಾಗಲಿದೆ. ನಿರ್ದೇಶಕರು ನನ್ನ ಮನಸ್ಸಿನಲ್ಲಿರುವಂತೆ ತೆರೆ ಮೇಲೆ ತೋರಿಸಿದ್ದಾರೆ. ನೀವು ನಮ್ಮಂಥವರ ಸಣ್ಣ ಚಿತ್ರಗಳಿಗೆ ಪ್ರಚಾರ ನೀಡಿದರೆ ನಮ್ಮ ಶ್ರಮ ಸಾರ್ಥಕವಾದಂತೆ ಎಂದು ನಿರ್ಮಾಪಕಿ ಎಸ್.ಆರ್.ಲೀಲಾ ಹೇಳಿದರು. ಈ ಚಿತ್ರವನ್ನು ಸುಚಿತ್ ಫಿಲಂಸ್ ಮೂಲಕ ವೆಂಕಟ್‌ಗೌಡ ಅವರು ನಿರ್ಮಿಸುತ್ತಿದ್ದಾರೆ.

# ತಂದೆ-ಮಕ್ಕಳ ಕಥೆ 'ಆಲ್ಫಾ'



ತಂದೆ ಮಕ್ಕಳ ಸುತ್ತ ನಡೆಯುವ ಕಥಾಹಂದರ ಒಳಗೊಂಡ ಚಿತ್ರ 'ಆಲ್ಫಾ'. ಮಾಲೂರಿನ ಹೇಮಂತ್‌ಕುಮಾರ್ ಈ ಚಿತ್ರದ ಮೂಲಕ ನಾಯಕನಾಗಿ ಎಂಟ್ರಿ ಕೊಡುತ್ತಿದ್ದಾರೆ. ಆನಂದ್‌ಕುಮಾರ್ ಅವರ ನಿರ್ಮಾಣದ ಈ ಚಿತ್ರಕ್ಕೆ ಗೀತಾ, ಹೊಯ್ಸಳ ಖ್ಯಾತಿಯ ವಿಜಯ್ ಆಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ನಡೆಯಿತು.

ನಿರ್ದೇಶಕ ವಿಜಯ್ ಮಾತನಾಡುತ್ತಾ, ಹೇಮಂತ್‌ಕುಮಾರ್ ಅವರು ಒಂದೊಳ್ಳೆ ಕಥೆ ಇದ್ದರೆ ಹೇಳಿ ಸಿನಿಮಾ ಮಾಡೋಣ ಎಂದರು. ಆಗ ನಾನು 'ಆಲ್ಫಾ' ಕಥೆ ಹೇಳಿದೆ. ಅವರಿಗೂ ಇಷ್ಟವಾಗಿ, ಚಿತ್ರ ಆರಂಭಿಸಿದರು. ಇದು ಆಕ್ಷನ್, ಥ್ರಿಲ್ಲರ್ ಜತೆಗೆ ಸೆಂಟಿಮೆಂಟ್ ಕಾನ್ಸೆಪ್ಟ್ ಒಳಗೊಂಡ ಚಿತ್ರ. ಮೂವರು ತಂದೆ ಹಾಗೂ ಮಕ್ಕಳ ಸುತ್ತ ನಡೆಯುವ ಕಥೆಯಿದು. ತಂದೆಯ ತಂಟೆಗೆ ಯಾರಾದರೂ ಬಂದರೆ ಮಕ್ಕಳ ಪ್ರತೀಕಾರ ಹೇಗಿರುತ್ತದೆ ಎಂದು ತಿಳಿಸುವ ಕಥೆಯೂ ಹೌದು. ಕೇರಳದ ಗೋಪಿಕಾ ಸುರೇಶ್ ಹಾಗೂ ಆಯನಾ ನಾಯಕಿಯರಾಗಿ ನಟಿಸಿದ್ದಾರೆ. ಬಿಗ್‌ಬಾಸ್ ಕಾರ್ತಿಕ್ ಮಹೇಶ್ ವಿಶೇಷ ಪಾತ್ರದಲ್ಲಿದ್ದಾರೆ.

ನಾನು ಈ ಚಿತ್ರದಲ್ಲಿ ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಕಾರ್ತಿಕ್ ಮಹೇಶ್ ಹೇಳಿದರೆ, ಪೊಲೀಸ್ ಅಧಿಕಾರಿಯಾಗಿ ನಟಿಸಿರುವುದಾಗಿ ನಾಯಕಿ ಆಯನಾ, ನಾಯಕನ ಪ್ರೇಯಸಿಯ ಪಾತ್ರ ಮಾಡಿರುವುದಾಗಿ ಗೋಪಿಕ ಸುರೇಶ್ ಹೇಳಿದರು. ಅನೂಪ್ ಸೀಳಿನ್ ಅವರ ಸಂಗೀತ, ಕಾರ್ತಿಕ್ ಅವರ ಛಾಯಾಗ್ರಹಣ ಚಿತ್ರಕ್ಕಿದೆ.

# ಡೆವಿಲ್ ಬಿಡುಗಡೆ; ಅಭಿಮಾನಿಗಳ ಹಬ್ಬ



ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ ಬಹುನಿರೀಕ್ಷಿತ ಸಿನಿಮಾ 'ದಿ ಡೆವಿಲ್' ಚಿತ್ರ ಅವರ ಅನುಪಸ್ಥಿತಿಯಲ್ಲೇ ಗುರುವಾರ 300ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದೆ, ಬೆಳಗ್ಗೆ 6.30ರಿಂದಲೇ ರಾಜ್ಯದೆಲ್ಲೆಡೆ ಪ್ರಥಮ ಪ್ರದರ್ಶನಗಳು ಆರಂಭವಾದವು, ಟಿಕೆಟ್ ದರ 400ರಿಂದ 600ರೂ. ಇದ್ದರೂ ಬಹುತೇಕ ಚಿತ್ರ ಮಂದಿರಗಳು ಭರ್ತಿಯಾಗಿದ್ದವು. ಅಭಿಮಾನಿಗಳು ರಾತ್ರಿಯಿಂದಲೇ ಥಿಯೇಟರ್ ಮುಂದೆ ನಿಲ್ಲಿಸಿದ್ದ ಕಟೌಟ್‌ಗೆ ಹೂವಿನಹಾರ ಹಾಕಿ, ಹಾಲಿನ ಅಭಿಷೇಕ ಮಾಡಿ ಸಂಭ್ರಮಾಚರಣೆ ಮಾಡಿದರು. ಬೆಂಗಳೂರಿನ ಕೆಲ ಚಿತ್ರಮಂದಿರಗಳಲ್ಲಿ ಚಿತ್ರವೀಕ್ಷಿಸಲು ಬಂದವರಿಗೆ ಉಪಹಾರ ವ್ಯವಸ್ಥೆ ಕೂಡ ಮಾಡಲಾಗಿತ್ತು. ದರ್ಶನ್ ಜೈಲಿನಲ್ಲಿದ್ದುಕೊಂಡೇ ಪತ್ರ ಬರೆಯುವ ಮೂಲಕ ಚಿತ್ರವನ್ನು ಗೆಲ್ಲಿಸುವಂತೆ ಫ್ಯಾನ್ಸ್‌ಗೆ ಮನವಿ ಮಾಡಿಕೊಂಡಿದ್ದಾರೆ. ದರ್ಶನ್ ಬರೆದ ಬಹಿರಂಗ ಪತ್ರವನ್ನು ಪತ್ನಿ ವಿಜಯಲಕ್ಷ್ಮೀ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ

# 'ಕ್ಲಾಸ್ ಆಫ್ ಮೈಸೂರ್' ಮುಹೂರ್ತ




ಮನುಷ್ಯ ತನ್ನ ನಿವೃತ್ತಿಯ ಜೀವನದಲ್ಲಿ ಏನನ್ನು ಕಳೆದುಕೊಂಡಿರುತ್ತಾನೋ ಅದನ್ನು ಅನುಭವಿಸಿದರೆ ಹೇಗಿರುತ್ತೆ ಎಂದು ನಿರ್ದೇಶಕ ಗೌತಂ ಬಸವರಾಜು ಅವರು 'ಕ್ಲಾಸ್ ಆಫ್ ಮೈಸೂರು' ಚಿತ್ರದ ಮೂಲಕ ಹೇಳ ಹೊರಟಿದ್ದಾರೆ. ಈ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ನಡೆಯಿತು. ಈ ಹಿಂದೆ 'ಯಥಾಭವ' ಎಂಬ ಚಿತ್ರ ನಿರ್ದೇಶಿಸಿದ್ದ ಗೌತಂ ಬಸವರಾಜು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುವ ಜತೆಗೆ ನಿರ್ಮಾಣ ಸಹ ಮಾಡಿದ್ದಾರೆ. ಈ ಚಿತ್ರದ ಮುಹೂರ್ತಕ್ಕಾಗಿಯೇ ಶ್ರೀ ಬಂಡಿ ಮಾಂಕಾಳಮ್ಮ ದೇವಸ್ಥಾನದ ಮುಂದೆ ಮೈಸೂರು ಅರಮನೆ, ಅಂಬಾರಿಯ ಸೆಟ್ ನಿರ್ಮಿಸಲಾಗಿತ್ತು. ಜತೆಗೆ ಕಲಾವಿದರೆಲ್ಲ ಸಾಂಪ್ರದಾಯಿಕ ಉಡುಗೆ ಧರಿಸಿ ಮುಹೂರ್ತಕ್ಕೆ ಹಾಜರಾಗಿದ್ದುದು ವಿಶೇಷವಾಗಿತ್ತು.

ಈವೇಳೆ ನಿರ್ದೇಶಕ ಗೌತಂ ಬಸವರಾಜು ಮಾತಾಡುತ್ತಾ, ಇಲ್ಲಿರುವ ಅರಮನೆ, ಅಂಬಾರಿ ಸೆಟ್ ಸಿನಿಮಾದ ಕಥೆಯನ್ನು ಹೇಳುತ್ತದೆ. ಇದು ಮೈಸೂರು ಭಾಗದಲ್ಲಿ ನಡೆಯುವ ಕತೆಯಾಗಿದ್ದು, ಪ್ರತಿ ಫ್ರೇಮ್‌ನಲ್ಲಿ ಎಲ್ಲಾ ಕಲಾವಿದರು ಕಾಣಿಸಿ ಕೊಳ್ಳುತ್ತಾರೆ. ಚಿತ್ರದಲ್ಲಿ ನಾಯಕಿಯರಿದ್ದು, ಹುಡುಕಾಟ ನಡೆಯುತ್ತಿದೆ. ಗೋವಾ, ಮಂಗಳೂರು, ಕೂರ್ಗ್ ಹಾಗೂ ಬೆಂಗಳೂರು ಸುತ್ತಮುತ್ತ ಎರಡು ಹಂತಗಳಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಿದೆ ಎಂದು ಹೇಳಿದರು.


ನಟಿ ತಾರಾ ಮಾತನಾಡುತ್ತಾ, ಈ ಚಿತ್ರದ ಪ್ರತಿ ಪಾತ್ರಕ್ಕೂ ಒಂದೊಂದು ಕಥೆಯಿರುತ್ತದೆ. ಆ ಎಲ್ಲಾ ಪಾತ್ರಗಳಿಗೂ ಅದರದೇ ಆದ ಆಯಕಟ್ಟು ಮಾಡಿದ್ದಾರೆ. ಈಗಿನ ಕಾಲದ ವಸ್ತುಸ್ಥಿತಿ ಹೊರತುಪಡಿಸಿ ಬೇರೆ ಆಯಾಮದ ವಿಷಯ ಇಟ್ಟುಕೊಂಡು ಈ ಚಿತ್ರ ಮಾಡಿದ್ದಾರೆ. ಮಕ್ಕಳಿಗೆ ಜೀವನ ಅರ್ಥ ಮಾಡಿಕೊಡುವುದು ತಾಯಿ, ಜೀವನ ನಡೆಸೋದು ತಾಯಿ, ಜೀವನವನ್ನು ಸರಿದಾರಿಗೆ ಇಲ್ಲವೆ ತಪ್ಪುದಾರಿಗೆ ಕರೆದುಕೊಂಡು ಹೋಗುವುದು ತಾಯಿ. ಅಂತಹ ಒಂದು ತೂಕದ ಪಾತ್ರವನ್ನು ನಾನಿಲ್ಲಿ ನಿಭಾಯಿಸುತ್ತಿದ್ದೇನೆ. ಈ ಚಿತ್ರದಲ್ಲಿ ಮೈಸೂರನ್ನು ಸಾಂಕೇತಿಕವಾಗಿ ತೆಗೆದುಕೊಂಡು ಅದನ್ನು ಸಿನಿಮಾರೂಪದಲ್ಲಿ ತೋರಿಸುತ್ತಿರುವುದು ಜವಾಬ್ದಾರಿಯುತ ಕೆಲಸ ಎಂದು ಹೇಳಿದರು. ನಾಗಾರ್ಜುನ ಶರ್ಮ ಅವರ ಸಾಹಿತ್ಯದ ನಾಲ್ಕು ಹಾಡುಗಳಿಗೆ ಜೋಕೋಸ್ಟ್ ಅವರ ಸಂಗೀತ ಸಂಯೋಜನೆ, ಎಸ್.ಕೆ.ರಾವ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



# ಸಿನಿಪದಬಂಧ-606



ಉಮ್ಮತ್ತೂರು ಇಂದುಶೇಖರ್
ಮೊ.9880820462




ಹೆಸರು ____________________

ವಿಳಾಸ ____________________

____________________

ದೂರವಾಣಿ ಸಂಖ್ಯೆ ____________________

## ಎಡದಿಂದ ಬಲಕ್ಕೆ

1. ಅಂಬರೀಷ್ ಅಭಿನಯದಿ ಉರುಳಿದ ಸಮಯದ ಬಂಡಿ 4
3. ಅಂಬಿಯ ಹುಟ್ಟಿನ ಸಂಖ್ಯೆ 4
6. ತವರಿನಲ್ಲಿ ಎಳೆದ ರಥ 2
7. 'ವಿರಸವೆಂಬ ವಿಷಕೆ ಬಲಿಯಾದೆ ಏತಕೇ.. ಸುಖ ಶಾಂತಿ ನಾಶಕೆ _ _ _', 3
8. 'ಕುಬೇರ'ನ ನಾಯಕಿ 3
9. ಹುಟ್ಟಿದ ಗೃಹದಲ್ಲಿ ರಾಧಿಕಾ ಪಾಲಿಗೆ ಹೆತ್ತಾಕೆ ನೆನಪಷ್ಟೇ 8
10. ಕಾಶೀನಾಥ್ – ಅಭಿನಯ ನಟಿಸಿದ ಚಿತ್ರವಿದು 4
16. ಶಿವಣ್ಣ ಅಭಿನಯಕ್ಕೆ ಜಿ. ವಿ. ಆರ್. ವಾಸು ನಿರ್ದೇಶಕ 3
17. ವೃಕ್ಷದ ನಡುವೆ ದ್ವೇಷ ಅಡಗಿದೆ 3
18. ವಿಷ್ಣುವರ್ಧನ್ ಅಭಿನಯದ ಮೃಗರಾಜನ ಕೂಗು 5
19. ತಣ್ಣನೆ ಗಾಳಿಯಲಿ ಕಾಡೆಲ್ಲ ಅಲೆದು ಬಂದವನು 4

## ಮೇಲಿನಿಂದ ಕೆಳಕ್ಕೆ

1. ಎಂ.ಪಿ.ಶಂಕರ್ ನಿರ್ಮಿಸಿದ ಅರಣ್ಯದಲ್ಲಿ ಗೌಪ್ಯತೆಯಿದೆ 6
2. ಚಕ್ರವ್ಯೂಹ ಚಿತ್ರದ ಚುಮು ಚುಮು ಹಾಡು ಆಹಾ ಆಹಾ ಎನಿಸಿದೆ 11
3. 'ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ.... ', ಗೀತೆಯ ಕರ್ತೃ 6
4. ಶಿವಣ್ಣ ಅಭಿನಯದಲ್ಲಿ ಬಂದ ಹುಟ್ಟಿನ ಕಾರಣಕರ್ತ 5
5. ಟೈಗರ್ ಪ್ರಭಾಕರ್ ಶಿವನಾಗಿ ಅಲ್ಲೋಲ – ಕಲ್ಲೋಲ ಎಬ್ಬಿಸಿದ್ದಾನೆ 5
11. ಲವ್ಲಿ ಚಿತ್ರದ ಹೀರೋ 5
12. ವಿನಯ ಪ್ರಸಾದ್ ನಿಜ ತಿಳಿಯಲು ಘರ್ಷಣೆಗೆ ಇಳಿದಿದ್ದಾಳೆ 5
13. ಸುರೇಶ್ ಹೆಬ್ಳಿಕರ್‌ನ ಬೆಲ್ಲ ಮಾಡುವ ಸ್ಥಳ 4
14. ಅನಂತ್‌ನಾಗನಿಗೆ ಮನಸ್ಸಿನಿಂದ ಬಂದ ಧೃಡ ನಿರ್ಧಾರ 3
15. ಈ ನಟಿ ದೇವಲೋಕದ ಕಾಮಧೇನು 3

## ಸಿನಿ ಪದಬಂಧ 605ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| | ಒಂ | ದೇ | ರ | ಕ್ತ | | ಶ್ವೇ | ತಾ | ಚಿಂ | ಗ | ಪ್ಪ |
| | | | ತಿ | | | | ಯಿ | | ರ್ವ | |
| ಮೀ | ನಾ | | ವಿ | | ಪ್ರೇ | ಮ | ಕ | ಥೆ | | |
| | ನು | | ಜ್ಞಾ | | ಮ್ | | ನ | | | ಮ |
| | ನಾ | ನು | ನ | ನ್ನ | ಕ | ನ | ಸು | | ಕಂ | ದ |
| | ನೇ | | | | ಹಾ | | | | | ಕ |
| ಮು | | ವಿ | | ಮು | ನಿ | ಯ | ನ | ಮಾ | ದ | ರಿ |
| ಗ್ದ | | ಜ | | ದ್ದಿ | | ಮ | | | | ನಾ |
| ಮಾ | ಗಿ | ಯ | ಕ | ನ | ಸು | | | ಸು | | ಯ |
| ನ | | ಖ | | ಸೊ | | ನಾ | ಗ | ಕ | ನ್ನಿ | ಕ |
| ವ | | ಡ್ಗ | | ಸೆ | | | | ನ್ಯ | | |

ವಿಜೇತರು: ಚಿನ್ಮಯಿ, ನಂ.41, 14ನೇ ಕ್ರಾಸ್, 4ನೇ ಮೇನ್, ವಿದ್ಯಾರಣ್ಯಪುರಂ, ಮೈಸೂರು-08



ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

# ಹುಣಸೂರಿನಲ್ಲಿ ಅನುಮತಿ ಇಲ್ಲದೆ ಅಕ್ರಮ ಕಟ್ಟಡ ನಿರ್ಮಾಣ

## ಹುಣಸೂರು ಕ್ಲಬ್‌ನಿಂದ 30ಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳ ನಿರ್ಮಾಣ, ಸರ್ಕಾರಕ್ಕೆ ಭಾರೀ ನಷ್ಟ

ಹುಣಸೂರು, ಡಿ.11– ಹುಣಸೂರಿನ ಹೃದಯ ಭಾಗದಲ್ಲಿರುವ ದೊಡ್ಡ ಹುಣಸೂರು ಸ.ನಂ 250ರಲ್ಲಿ ಕೋಟ್ಯಾಂತರ ರೂ. ಬೆಲೆ ಬಾಳುವ ಸರ್ಕಾರಿ ಜಾಗದಲ್ಲಿ ನಗರ ಸಭೆಯಿಂದ ಯಾವುದೆ ಅನುಮತಿ ಪಡೆಯದೆ ಹುಣಸೂರು ಕ್ಲಬ್‌ನವರು ಅಕ್ರಮವಾಗಿ ವಾಣಿಜ್ಯ ಕಟ್ಟಡಗಳನ್ನು ಕಟ್ಟಿ ಬಾಡಿಗೆ ವಸೂಲಿ ಮಾಡುವ ಮೂಲಕ ನಗರ ಸಭೆಗೆ ಮತ್ತು ಸರ್ಕಾರಕ್ಕೆ ಅನ್ಯಾಯವೆಸಗಿರುವ ಘಟನೆ ಬೆಳಕಿಗೆ ಬಂದಿದೆ.

ಪಟ್ಟಣದ ಮುನೇಶ್ವರ ಕಾವಲ್ ಮೈದಾನದ ಮುಂಭಾಗದಲ್ಲಿರುವ ಜಾಗದಲ್ಲಿ ಹುಣಸೂರು ಕ್ಲಬ್ 1990 ರಿಂದ 2025 ರವರೆಗೆ 35 ವರ್ಷಗಳ ಅವಧಿಯಲ್ಲಿ ಯಾವುದೇ ಪ್ಲಾನ್ ಮತ್ತು ಬಿಲ್ಡಿಂಗ್ ಲೈಸೆನ್ಸ್ ಸಹ ಪಡೆಯದೆ 30ಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳು ಮತ್ತು ಇನ್ಸೂರೆನ್ಸ್ ಅಫೀಸ್ ಹಾಗೂ ಮತ್ತಿತರೆ ವಾಣಿಜ್ಯ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಿ ನಗರಸಭೆಗೆ ಲಕ್ಷಾಂತರ ನಷ್ಟವನ್ನುಂಟುಮಾಡಿದೆ.

1 ಎಕ್ಕರೆ 4 ಗುಂಟೆ ಪ್ರದೇಶದಲ್ಲಿ ಕ್ಲಬ್ ಕಟ್ಟಡ, ಬ್ಯಾಡ್ಮಿಂಟನ್ ಕೋರ್ಟ್ ಮೈದಾನ, ಶಟಲ್ ಕಾಕ್ ಇನ್ ಡೋರ್ ಗೇಮ್ ಕಟ್ಟಡ, 30ಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳು ಹಾಗೂ ಯುನೈಟೆಡ್ ಇನ್ಸೂರೆನ್ಸ್ ಕಚೇರಿ ಹೀಗೆ ಹಲವಾರು ಕಟ್ಟಡಗಳನ್ನು ಕಟ್ಟಲಾಗಿದೆ. ನೂರಾರು ಶಟಲ್ ಕಾಕ್ ಅಟಗಾರರಿಂದ ಜೀವಿತಾವದಿ ಶುಲ್ಕ 5000 ರೂ. ಮಾಹೆಯಾನ 650ರೂ. ನಂತೆ ಶುಲ್ಕ ವಸೂಲಾತಿ ಮಾಡುವ ಮೂಲಕ ಸಾವಿರಾರು ರೂ. ಸಂಗ್ರಹಿಸಲಾಗುತ್ತಿದೆ ಎನ್ನಲಾಗಿದೆ.

1961ರಲ್ಲಿ ಅಗಿನ ಪುರಸಭಾ ಅಧ್ಯಕ್ಷರಾಗಿದ್ದ ಕೆ.ಬಿ.ಶಿವಪ್ಪ ಅವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಪಟ್ಟಣ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಾಗಗಳನ್ನು ಗುರುತಿಸಿ ಪುರಸಭೆಗೆ ನೀಡಿದರೆ ಮನೆಗಳಿಲ್ಲದ ಬಡವರಿಗೆ ಮತ್ತು ಸಾಮಾಜಿಕ ಚಟುವಟಿಗೆಗಳಿಗೆ ಉಪಯೋಗಿಸಲು ಅನುಕೂಲವಾಗಲಿದೆ ಎಂದು ಕೋರಿಕೊಂಡ ಮೇರೆಗೆ ಜಿಲ್ಲಾಧಿಕಾರಿಗಳ ಅದೇಶದಂತೆ ಎಸಿ ಅವರ



ಹುಣಸೂರು ಕ್ಲಬ್ ಆವರಣದಲ್ಲಿ ನಿರ್ಮಿಸಿರುವ ಅಕ್ರಮ ಮಳಿಗೆಗಳು.

ಮಾರ್ಗದರ್ಶನದಲ್ಲಿ ತಹಸೀಲ್ದಾರ್ ಮತ್ತು ಸಿಬ್ಬಂದಿ ಸರ್ವೆ ಮಾಡಿ ಪಟ್ಟಣ ವ್ಯಾಪಿ ಹೃದಯ ಭಾಗದಲ್ಲಿದ್ದ 16 ಎಕ್ಕರೆ 39 ಗುಂಟೆ ಜಾಗವನ್ನು ಗುರುತಿಸಲಾಗಿತ್ತು.

ಪಟ್ಟಣ ವ್ಯಾಪ್ತಿಯಲ್ಲಿನ 16 ಎಕರೆ 39 ಗುಂಟೆ ಸರ್ಕಾರಿ ಜಾಗವನ್ನು ಕಂದಾಯ ಇಲಾಖೆಯಿಂದ ಪರೋಪಕಾರಿ (Philan thropic) ದೃಷ್ಟಿಯಿಂದ ಅಂದಿನ ಪುರಸಭೆಗೆ ಹಸ್ತಾಂತರಿಸಲಾಯಿತು. ಈ ಜಾಗವನ್ನು ಪುರಸಭೆ ಬಸ್ ಸ್ಟ್ಯಾಂಡ್, ಟೌನ್ ಹಾಲ್ ಮತ್ತಿತರ ಸಾರ್ವಜನಿಕ ಬಳಕೆಗೆ ನೀಡಲಾಯಿತು. ಅದರೆ ಹುಣಸೂರು ಕ್ಲಬ್ ನಮಗೆ ಯಾವ ರೀತಿ ಈ ಜಾಗ ಹಸ್ತಾಂತರವಾಗಿದೇಯೊ ಇಲ್ಲವೋ ಎಂಬುದೆ ನಿಗೂಡವಾಗಿದೆ. ನಗರಸಭೆಯವರು ಈ ಬಗ್ಗೆ ನಮ್ಮಲ್ಲಿ ದಾಖಲೆಗಳಿಲ್ಲ ಎಂದು ಹೇಳುತ್ತಾರೆ. ಅಲ್ಲದೆ ಕ್ಲಬ್ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಯಾವುದೆ ವಾಣಿಜ್ಯ ಮಳಿಗೆಗಳಿಗೆ ಉದ್ದಿಮೆ ಪರವಾನಿಗೆ ಪಡೆಯದೆ ಅನೇಕ ವರ್ಷಗಳಿಂದ ನಗರಸಭೆಗೆ ಯಾವುದೆ ಲೈಸೇನ್ಸ್ ಫೀ ಕಟ್ಟದೆ ಲಕ್ಷಾಂತರ ರೂ. ನಷ್ಟ ಮಾಡಿದ್ದಾರೆ.

ಈ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ನಂತರ ಎಚ್ಚೆತ್ತುಕೊಂಡ ಅಧಿಕಾರಿಗಳು ಎಲ್ಲಾ ವಾಣಿಜ್ಯ ಮಳಿಗೆಗಳಿಗೂ ಎರಡೆರಡು ಬಾರಿ ನೋಟಿಸ್ ನೀಡಿದರೂ ಯಾವುದೆ ಪ್ರತಿ ಕ್ರಿಯೆ ಬಂದಿಲ್ಲ. ವ್ಯಾಪಾರ ಮುಂದುವರೆದಿದೆ. ಇಲ್ಲಿನ ಅಡಳಿತ ಮಂಡಲಿ ಯಾರು ಏನೇ ಕೇಳಿದರು ಯಾವುದೆ ಪ್ರತಿಕ್ರಿಯೆ ನೀಡದೆ ಸರ್ವಾಧಿಕಾರಿಗಳಂತೆ ನಡೆದುಕೊಳ್ಳುತ್ತಿದ್ದಾರೆ.

### ಅಕ್ರಮಗಳ ಬಗ್ಗೆ ಅಧಿಕಾರಿಗಳ ಪ್ರತಿಕ್ರಿಯೆ



ಹುಣಸೂರು ಕ್ಲಬ್ ಬಗ್ಗೆ ಬಂದಿರುವ ದೂರಿನ ಬಗ್ಗೆ ಈಗಾಗಲೇ ಎರಡು ಬಾರಿ ನೋಟಿಸ್ ನೀಡಲಾಗಿದೆ. ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಕಂದಾಯ ಅಧಿಕಾರಿಗಳೊಂದಿಗೆ ನಾನೇ ಖುದ್ದಾಗಿ ಬೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಕಾನೂನು ರೀತಿ ಕ್ರಮ ಕೈಗೊಳ್ಳುತ್ತೇನೆ.

–ಮಾನಸ, ಪೌರಾಯುಕ್ತೆ



ಹುಣಸೂರು ಕ್ಲಬ್ ಆಸ್ತಿ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಲು ಕಂದಾಯ ವಸೂಲಿಗಾರರಿಗೆ ತಿಳಿಸಿರುತ್ತೇನೆ. ಕಂದಾಯ ವಸೂಲಿಗಾರರು ಸ್ಥಳ ಪರಿಶೀಲನೆ ನಡೆಸಿ ಮತ್ತು ದಾಖಲಾತಿ ಪರಿಶೀಲಿಸಿ ವರದಿ ನೀಡಿದ ನಂತರ ಕಾನೂನು ರೀತಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

–ಸಿದ್ದರಾಜು, ಕಂದಾಯಧಿಕಾರಿ.



ಕ್ಲಬ್ ಆವರಣದಲ್ಲಿ 35ಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳನ್ನು ಪರವಾನಿಗೆ ಪಡೆಯದೆ ಅಕ್ರಮವಾಗಿ ನಿರ್ಮಿಸಿರುವುದು ಬೆಳಕಿಗೆ ಬಂದಿದ್ದು, 2 ಬಾರಿ ನೋಟಿಸ್ ನೀಡಿದ್ದು, ನಾಳೆ ಅಂತಿಮವಾಗಿ 3ನೇ ನೋಟಿಸ್ ನೀಡಿ ಕಾನೂನು ರೀತಿ ಅಂಗಡಿ ಮುಚ್ಚಿಸುವ ಕ್ರಮ ಕೈಗೊಳ್ಳಲಾಗುವುದು.

–ಸೌಮ್ಯಪರಿಸರ ಅಭಿಯಂತರರು.

---

### ಪತ್ರ ಬರಹಗಾರರ ವೃತ್ತಿ ಹತ್ತಿಕ್ಕುವ ಸರ್ಕಾರ ಧೋರಣೆ ಖಂಡಿಸಿ

# ಡಿ.15ರಿಂದ ಪತ್ರ ಬರಹಗಾರರಿಂದ ಸುವರ್ಣ ಸೌಧ ಚಲೋ

**ನಂಜನಗೂಡು:** ಪತ್ರ ಬರಹಗಾರರ ವೃತ್ತಿಯನ್ನು ಹತ್ತಿಕ್ಕುತ್ತಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಖಂಡಿಸಿ ಡಿ.15 ಮತ್ತು ಡಿ.16ರಂದು ಲೇಖನಿ ಸ್ಥಗಿತಗೊಳಿಸಿ ಬೆಳಗಾವಿಯ ಸುವರ್ಣ ಸೌಧ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಪತ್ರ ಬರಹಗಾರರ ತಾಲೂಕು ಸಂಘದ ಅಧ್ಯಕ್ಷ ಪ್ರಕಾಶ್ ರಾಜೇ ಅರಸ್ ತಿಳಿಸಿದರು.

ತಾಲೂಕು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂರಾರು ವರ್ಷಗಳ ಇತಿಹಾಸ ಇರುವ ಪತ್ರ ಬರಹಗಾರರ ವೃತ್ತಿಯನ್ನು ಹತ್ತಿಕ್ಕುವ ಹುನ್ನಾರವನ್ನು, ರಾಜ್ಯ ಸರ್ಕಾರ ನಡೆಸುತ್ತಿದೆ, ಈ ಹಿಂದೆ ಜಾರಿಗೆ ತರಲಾಗಿದ್ದ ಕಾವೇರಿ 2 ಎಂಬ ತಂತ್ರಾಂಶದಲ್ಲಿ ಸಿಟಿಜನ್ ಲಾಗಿನ್ ಮೂಲಕ ಸಾರ್ವಜನಿಕರು ಸಹ ಅವರ ಆಸ್ತಿಗೆ ಸಂಬಂಧಿಸಿದ ಪತ್ರಗಳನ್ನು ಅವರುಗಳೇ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು, ಆದರೆ ಈ ಸದಾವಕಾಶವನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಲಿಲ್ಲ. ಬದಲಾಗಿ ಡಿಟಿಪಿ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಪ್ರಕಾಶ್ ರಾಜೇ ಅರಸ್.

ಸೆಂಟರ್, ಸೈಬರ್ ಸೆಂಟರ್ ಮತ್ತು ಕಂಪ್ಯೂಟರ್ ಸೆಂಟರ್‌ನವರು ದುರುಪಯೋಗಪಡಿಸಿಕೊಂಡು ತಾವುಗಳು ಪತ್ರವನ್ನು ಮಾಡಿಕೊಡುತ್ತೇವೆ ಎಂಬುದಾಗಿ ಬೋರ್ಡ್ ಹಾಕಿಕೊಂಡು ಸಾರ್ವಜನಿಕರಿಗೆ ಮೋಸ ಮಾಡುತ್ತಾ ಅವೈಜ್ಞಾನಿಕ ಪತ್ರಗಳನ್ನು ಅಪ್ಲೋಡ್ ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ತಮ್ಮ ಆಸ್ತಿಯ ಸಂಪೂರ್ಣ ವಿವರಗಳು ನಮೂದಾಗದೆ ವಂಚನೆಗೆ ಒಳಗಾಗುತ್ತಿದ್ದಾರೆ. ಅಲ್ಲದೆ ಅಧಿಕೃತ ಪತ್ರ ಬರಹಗಾರರಿಗೆ ಕೆಲಸಕ್ಕೆ ಕುಂದುಂಟಾಗಿದೆ, ಹೀಗಿರುವಾಗ ಸರ್ಕಾರ ಕಾವೇರಿ–3 ಎಂಬ ಹೊಸ ತಾಂತ್ರಾಂಶದಡಿಯಲ್ಲಿ ಫೇಸ್ ಲೆಸ್ ಮತ್ತು ಪೇಪರ್ ಲೆಸ್ ಎಂಬ ತಂತ್ರಾಂಶವನ್ನು ಜಾರಿಗೆ ತರುವ ಯೋಜನೆ ಜಾರಿಗೆ ತರಲು ಮುಂದಾಗಿದೆ, ಈ ತಂತ್ರಾಂಶ ಜಾರಿಗೆ ಬಂದಲ್ಲಿ ಸಾರ್ವಜನಿಕರಿಗೂ ತೊಂದರೆಯಾಗುವ ಜೊತೆಗೆ, ಆಸ್ತಿಗೆ ಸಂಬಂಧಿಸಿದಂತೆ ಸುಳ್ಳು ಮತ್ತು ವಂಚನೆಯ ನೋಂದಣಿಗಳು ನಡೆಯಲಿವೆ ಎಂದು ದೂರಿದರು.

ಜೊತೆಗೆ ಪತ್ರ ಬರಹಗಾರ ಎಂಬ ವೃತ್ತಿಯೇ ನಾಶವಾಗಲಿದೆ, ಇದರಿಂದ ಲಕ್ಷಾಂತರ ಪತ್ರ ಬರಹಗಾರರ ಕುಟುಂಬಗಳು ಬೀದಿಗೆ ಬರಲಿವೆ ಆದ್ದರಿಂದ ರಾಜ್ಯದ ಎಲ್ಲಾ ಪತ್ರ ಬರಹಗಾರರಿಗೆ ಪ್ರತ್ಯೇಕ ಲಾಗಿನ್ (ಡಿಡ್ ರೈಟರ್ ಲಾಗಿನ್) ನೀಡಬೇಕು, ನೊಂದಾವಣಿಯಾಗುವ ಎಲ್ಲಾ ದಸ್ತಾವೇಜುಗಳಿಗೆ ಕಡ್ಡಾಯವಾಗಿ ಪತ್ರ ಬರಹಗಾರರು ಅಥವಾ ವಕೀಲರ ಸಹಿ ಕಡ್ಡಾಯಗೊಳಿಸಬೇಕು, ರಾಜ್ಯಾದ್ಯಂತ ಇರುವ ಎಲ್ಲಾ ಪತ್ರ ಬರಹಗಾರರಿಗೆ ಸರ್ಕಾರದ ಮಾನ್ಯತೆ ಇರುವ ಅಧಿಕೃತ ಗುರುತಿನ ಚೀಟಿಯನ್ನು ವಿತರಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ಪತ್ರ ಬರಹಗಾರರ ಒಕ್ಕೂಟದ ಆದೇಶದಂತೆ ರಾಜ್ಯ ವ್ಯಾಪಿ ಪ್ರತಿಭಟನೆ ನಡೆಯುತ್ತಿದ್ದು, ಡಿ.15 ಮತ್ತು 16 ರಂದು ನಂಜನಗೂಡು ಪತ್ರ ಬರಹಗಾರರ ಸಂಘದಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಬೆಳಗಾವಿ ಸುವರ್ಣಸೌಧ ಛಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಜೊತೆಗೆ ನೋಂದಣಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೆ ಅನಿರ್ದಿಷ್ಟಾವಧಿ ಮುಷ್ಕರವನ್ನು ನಡೆಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಎಚ್‌ಎಸ್.ಬಸವರಾಜು, ಕೆ. ಶಶಿಧರ, ಬದನವಾಳು ಮಹದೇವಪ್ಪ, ಹೆಚ್.ಸಿ. ಲೋಕೇಶ್ ಕುಮಾರ್, ಹುಣಸನಾಳು ಸಿದ್ದರಾಜು ಉಪಸ್ಥಿತರಿದ್ದರು.

## ಸಚಿವ ವೆಂಕಟೇಶರಿಂದ ಸಹಕಾರ ಕ್ಷೇತ್ರದಲ್ಲಿ ದ್ವೇಷದ ರಾಜಕಾರಣ

**ಪಿರಿಯಾಪಟ್ಟಣ:** ಸಚಿವ ಕೆ.ವೆಂಕಟೇಶ್ ಹಾಗೂ ಅವರ ಪುತ್ರ ನಿತಿನ್ ವೆಂಕಟೇಶ್ ಸಹಕಾರ ಸಂಘಗಳಲ್ಲಿ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ ಪ್ರಸನ್ನ ಆರೋಪಿಸಿದರು.

ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದರು.

ಸಚಿವ ಕೆ.ವೆಂಕಟೇಶ್ ಹಾಗೂ ಅವರ ಪುತ್ರ ನಿತಿನ್ ವೆಂಕಟೇಶ್ ಪಿರಿಯಾಪಟ್ಟಣ ತಾಲೂಕಿನಲ್ಲಿ ಜೆಡಿಎಸ್ ಬೆಂಬಲಿತರು ಅಧಿಕಾರದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ನೇರ ಹಸ್ತಕ್ಷೇಪ ಮಾಡಿ ಸಹಕಾರಿ ಕ್ಷೇತ್ರದ ಕಚೇರಿಯನ್ನು ಪಕ್ಷದ ಕಚೇರಿಯಂತೆ ಮಾಡಿಕೊಂಡು ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಸಹಕಾರಿ ಸದಸ್ಯರನ್ನು ಎತ್ತಿ ಕಟ್ಟಿ ಗೊಂದಲ ಉಂಟುಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಮು ಹೈಲಾಪುರ ಕುಮಾರ್, ಸಿ.ಎನ್.ರವಿ ರುಗಸ್ವಾಮಿ ಮಾನ್ಸೂನ್ ಮೋಹನ್ ಸೇರಿದಂತೆ ಇನ್ನಿತರರಿದ್ದರು.

# ಮುಖ್ಯಮಂತ್ರಿ ಭೇಟಿ ಮಾಡಿದ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರು



ತಿ.ನರಸೀಪುರ, ಡಿ.11– ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ನಿರ್ದೇಶಕ ಕೆಂಪಯ್ಯನ ಹುಂಡಿ ಮಹದೇವಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಭೇಟಿ ಮಾಡಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗೆ ಹೆಚ್ಚು ಸೌಲಭ್ಯ ಮತ್ತು ಅನುದಾನ ನೀಡುವಂತೆ ಕೋರಿದರು. ಕೆಂಪಯ್ಯನಹುಂಡಿ ಮಹದೇವಣ್ಣರವರ ನಿಯೋಗ ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಮನವಿ ಮಾಡಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅತಿ ಹೆಚ್ಚು ಪಿಕಾರ್ಡ್ ಬ್ಯಾಂಕ್‌ಗಳಿದ್ದು, ಇದಕ್ಕೆ ಪೂರಕವಾಗಿ ರೈತರಿಗೆ ಸಾಲ ಸೌಲಭ್ಯ ನೀಡಲು ಹೆಚ್ಚು ಅನುದಾನವನ್ನು ನೀಡುವಂತೆ ಸಿದ್ದರಾಮಯ್ಯರವರಲ್ಲಿ ಮನವಿ ಮಾಡಿದರು.

ರೈತರಿಗೆ ಟ್ರಾಕ್ಟರ್ ಸೇರಿದಂತೆ ಮತ್ತಿತರ ಕೃಷಿ ಉಪಕರಣ ಖರೀದಿಸಲು ಅನುಕೂಲ ಕಲ್ಪಿಸುವಂತಾಗಲು ಬ್ಯಾಂಕ್‌ನಿಂದ ಸಾಲ ಸೌಲಭ್ಯ ನೀಡುವ ಸಲುವಾಗಿ ಹೆಚ್ಚಿನ ಅನುದಾನ ನೀಡುವಂತೆ ಮಹದೇವಣ್ಣ ಕೋರಿದರು. ಮನವಿ ಆಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಗ್ಗೆ ಗಮನ ಹರಿಸಿ ಕ್ರಮಕೈಗೊಳ್ಳುವ ಭರವಸೆ ನೀಡಿದರು.

---

# ಜ.3ರಿಂದ ಶ್ರೀತಿಪುರ ಸುಂದರಿ ಅಮ್ಮನವರ ಜಾತ್ರೆ

## ಮುಡಿ ತೆಗೆಯುವುದು, ಪ್ರಸಾದ ಸೇವೆಗಳು 12.2ಲಕ್ಷ ರೂ.ಗೆ ಹರಾಜು





ನಾಡ ಕಚೇರಿಯ ಉಪ ತಹಸೀಲ್ದಾರ್ ಅವರ ಸಮ್ಮುಖದಲ್ಲಿ ದೇಗುಲದ ಆವರಣದಲ್ಲಿ ಹರಾಜು ಪ್ರಕ್ರಿಯೆ ನಡೆಯಿತು.

**ಮೂಗೂರು:** 2026 ಜನವರಿ 3 ರಿಂದ 7 ರವರೆಗೆ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ನಡೆಯಲಿದ್ದು, ದೇವಾಲಯದ ವಿವಿಧ ಸೇವೆಗಳ ಬಹಿರಂಗ ಹರಾಜು ಪ್ರಕ್ರಿಯೆ ನಾಡ ಕಛೇರಿಯ ಉಪ ತಹಸೀಲ್ದಾರ್ ಅವರ ಸಮ್ಮುಖದಲ್ಲಿ ದೇಗುಲದ ಆವರಣದಲ್ಲಿ ಗುರುವಾರ ನಡೆಯಿತು.

ದೇವಾಲಯದಲ್ಲಿನ ವಿವಿಧ ಸುಂಕದ ಸೇವೆಗಳಾದ ಮುಡಿ ತೆಗೆಯುವುದು, ಪ್ರಸಾದ, ಧೂಪ ಮಾರುವ ಹಕ್ಕು, ಬಾಯಿ ಬೀಗ, ಫ್ಯಾನ್ಸಿ ಸರಕು ಮಾರುವ ಹಕ್ಕುಗಳಿಗೆ 15 ಮಂದಿ ಬಿಡ್‌ದಾರರು ಠೇವಣಿ ಕಟ್ಟಿ ಭಾಗವಹಿಸಿದ್ದರು. ಬಿಡ್ಡ್‌ದಾರರ ನಡುವೆ ಪ್ರಬಲ ಪೈಪೋಟಿಯೇ ಏರ್ಪಟ್ಟಿತ್ತು.

ದೇವಾಲಯದ ವಿವಿಧ ಸೇವೆಗಳಾದ ಮುಡಿ, ಧೂಪ ಮಾರುವುದು, ಬಾಯಿ ಬೀಗ, ಲಾಡು ಪ್ರಸಾದ, ಫ್ಯಾನ್ಸಿ ಸರಕು ಮಾರಾಟದ ಬಾಬ್ತು ಈ ಬಾರಿ 12,02,600 ರೂ.ಗೆ ಹರಾಜು ನಡೆದು ಆದಾಯ ದಾಖಲಿಸಿದೆ. ಮಹೇಶ್, ಶಿವಣ್ಣ, ವೀರದಾಸಿ, ಮರಿಯಪ್ಪ, ಸರಕುಗಳ ಮಾರಾಟದ ಹಕ್ಕನ್ನು ತಮ್ಮದಾಗಿಸಿಕೊಂಡರು. ಕಳೆದ ಬಾರಿ 11.64.600.ಲಕ್ಷ ರೂ ಹರಾಜಾಗಿತ್ತು.

ಗ್ರಾಮ ಲೆಕ್ಕಾಧಿಕಾರಿ ಪ್ರಮೋದ್, ಗ್ರಾಪಂ ಅಧ್ಯಕ್ಷ ಎಂ.ಡಿ.ಲೋಕೇಶ್, ಉಪ ತಹಸೀಲ್ದಾರ್ ಲಕ್ಷ್ಮಿ, ಬಸವರಾಜು, ಸುಂದ್ರಪ್ಪ, ಸಾಗರ್‌ಗೌಡರ, ನಾಗರಾಜು, ಬಸವರಾಜು, ವಿಜಯ್, ಜಗದೀಶ್, ನಾಗರಾಜು, ರಾಜು, ಸ್ವಾಮಿ, ಮಾದೇಶ್, ಬದನವಾಳು ಪ್ರದೀಪ್, ಗ್ರಾಮಸ್ಥರು ಉಪಸ್ಥಿತರಿದ್ದರು.

# ಫಲಿತಾಂಶ ಉತ್ತಮಪಡಿಸಲು ಶಾಲೆಯಲ್ಲಿ ಬಿಇಓ ವಾಸ್ತವ್ಯ

**ಸರಗೂರು:** ಶಿಕ್ಷಣ ಕ್ಷೇತ್ರದ ಸಮಸ್ಯೆಯನ್ನು ಆಲಿಸಿ, ನಿವಾರಿಸುವ ಮೂಲಕ ಸರಗೂರು ತಾಲೂಕು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಪ್ರಥಮ ಸ್ಥಾನ ತರಬೇಕೆಂದು ಪಣ ತೊಟ್ಟಿರುವ ಬಿಇಒ ರಾಜು ಮಂಗಳವಾರ ರಾತ್ರಿ ಕೆ.ಬೆಳತೂರು ಪ್ರೌಢ ಶಾಲೆಯಲ್ಲಿ ವಾಸ್ತವ್ಯ ಹೂಡಿ ಮಕ್ಕಳ ಕಲಿಕೆಯ ಬಗ್ಗೆ ಪೋಷಕರಿಂದ ಮಾಹಿತಿ ಹಾಕಿ ಓದಿನ ಬಗ್ಗೆ ಮಾರ್ಗದರ್ಶನ ನೀಡಿದರು.

ಕಳೆದ ಎರಡು ವರ್ಷಗಳಲ್ಲಿ ತಾಲೂಕು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆಯಲ್ಲಿ ಕಡೆ ಸ್ಥಾನದಲ್ಲಿದ್ದು, ಫಲಿತಾಂಶವೂ ತೀವ್ರವಾಗಿ ಕುಸಿತಗೊಂಡಿತ್ತು. ಇದನ್ನು ಮನಗಂಡ ಬಿಇಒ ಸಿ.ಎನ್.ರಾಜು ಅವರು ಫಲಿತಾಂಶವನ್ನು ಉತ್ತಮಪಡಿಸಲು ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳು, ಪೋಷಕರಿಂದ ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಮಾಹಿತಿ ಪಡೆದುಕೊಂಡರು. ನಂತರ ಸಲಹೆ ನೀಡುವ ಮೂಲಕ ಜಾಗೃತಿ ಮೂಡಿಸಿದರು.



ಬಿಇಒ ಸಿ.ಎನ್.ರಾಜು ಅವರು ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ, ಪೋಷಕರಿಂದ ಮಕ್ಕಳ ಕಲಿಕೆಯ ಬಗ್ಗೆ ಮಾಹಿತಿ ಕಲೆಹಾಕಿದರು.

ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿನಿಯರಿಗೆ ಬೆಳಗಿನ ವೇಳೆ ರಂಗೋಲಿ ಬಿಡಿಸುವುದು. ನೀರು ಹಾಕುವುದು. ಪಾತ್ರೆ ತೊಳಿಸುವುದು. ಅಡುಗೆ ಕೆಲಸ ಮಾಡಿಸುವುದನ್ನು ನಿಲ್ಲಿಸಿ, ಪೋಷಕರು ಮಕ್ಕಳಿಗೆ ಓದಲು ಹೆಚ್ಚಿನ ಗಮನಹರಿಸುವಂತೆ ಪ್ರೇರೇಪಣೆ ನೀಡಬೇಕು. ಪರೀಕ್ಷೆ ಸಮಯ ಹತ್ತಿರವಾಗುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಮನೆ ಕೆಲಸಗಳನ್ನು ಅಥವಾ ಇತರೆ ಕೆಲಸಗಳನ್ನು ಹೇಳದೆ ವಿದ್ಯಾರ್ಥಿಯು ಹೆಚ್ಚು ಓದುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವಂತೆ ಪೋಷಕರಿಗೆ ಜಾಗೃತಿ ಮೂಡಿಸಲಾಯಿತು.

ಕೆ.ಬೆಳತೂರು ಪ್ರೌಢಶಾಲೆ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ತೀರಾ ಹಿನ್ನಡೆ ಹೊಂದಿದ್ದು, ಈ ಹಿನ್ನೆಲೆಯಲ್ಲಿ ಮಂಗಳವಾರ ರಾತ್ರಿ ಸದರಿ ಶಾಲೆಯಲ್ಲಿ ವಾಸ್ತವ್ಯವನ್ನು ಹೂಡಲಾಗಿದೆ. ಶಾಲೆಯಲ್ಲಿ 53 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಪ್ರತಿ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಸಲಹೆ ಪರೀಕ್ಷಾ ಸಿದ್ಧತೆ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಕ್ಷೇತ್ರಶಿಕ್ಷಣಾಧಿಕಾರಿ ರಾಜು ತಿಳಿಸಿದರು.

ಅಡಹಳ್ಳಿ ಗ್ರಾಮದ 9 ವಿದ್ಯಾರ್ಥಿಗಳು, ಚಕ್ಕೂರು ಗ್ರಾಮದ 6, ಕೂಲ್ಯ ಗ್ರಾಮದ 5, ಕೆ.ಬೆಳ್ತೂರು ಗ್ರಾಮದಲ್ಲಿ 23 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಎಲ್ಲಾ ವಿದ್ಯಾರ್ಥಿಗಳ ಮನೆಗಳಿಗೆ ರಾತ್ರಿ 10.30 ವರೆಗೂ ಹಾಗೂ ಬೆಳಗಿನ ಜಾವ ಐದು ಗಂಟೆಯಿಂದ 8.30 ವರೆಗೂ ಮನೆಗಳಿಗೆ ಭೇಟಿ ನೀಡಿ, ಮಕ್ಕಳ ಪೋಷಕರು, ಮಕ್ಕಳಿಗೆ ಜಾಗೃತಿ ಮೂಡಿಸಲಾಯಿತು

---

## ಮುಖ್ಯಾಧಿಕಾರಿಯಾಗಿ ಮತ್ತೆ ಅಧಿಕಾರ ಸ್ವೀಕರಿಸಿದ ಸುರೇಶ್

**ಹೆಚ್.ಡಿ.ಕೋಟೆ:** ಡಿಎಂಎ ಅಧಿಕಾರಿ ಮಾಡಿದ ಆದೇಶ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದ ಸುರೇಶ್ ಜಯಗಳಿಸಿ ಮತ್ತೆ ಪಟ್ಟಣದ ಪುರಸಭೆಯ ಮುಖ್ಯಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಎರಡು ತಿಂಗಳ ಹಿಂದೆ ಬೆಂಗಳೂರಿನ ಡಿಎಂಎ ಕಚೇರಿ ಅಧಿಕಾರಿಗಳು ಕೋಟೆ ಪುರಸಭೆಯ ಮುಖ್ಯಾಧಿಕಾರಿ ಸುರೇಶ್‌ರವರಿಗೆ ನೀಡಲಾಗಿದ್ದ ನೋಟಿಸ್‌ಗೆ ಉತ್ತರ ನೀಡಿಲ್ಲ ಮತ್ತು ದೂರವಾಣಿ ಕರೆ ಸ್ವೀಕರಿಸುತ್ತಿಲ್ಲ ಎಂಬ ಕಾರಣಕ್ಕೆ ಯಾದ್‌ಗಿರಿಗೆ ವರ್ಗಾವಣೆ ಮಾಡಿದ್ದರು.

ಈ ಆದೇಶವನ್ನು ಪ್ರಶ್ನಿಸಿ ಸುರೇಶ್ ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆದು, ವರ್ಗಾವಣೆಯನ್ನು ರದ್ದುಗೊಳಿಸಿ ನ್ಯಾಯಾಲಯ ಆದೇಶ ಹೊರಡಿಸಿದ ಮೇರೆಗೆ ಮೈಸೂರಿನ ಪಿಡಿ ಮತ್ತು ಜಿಲ್ಲಾಧಿಕಾರಿಯವರು ಎಚ್.ಡಿ. ಕೋಟೆ ಪುರಸಭೆ ಮುಖ್ಯಾಧಿಕಾರಿಯಾಗಿ ಸುರೇಶ್ ಅವರನ್ನು ಮತ್ತೆ ನೇಮಕ ಮಾಡಿ ಆದೇಶಿಸಿದ್ದು, ಅದರಂತೆ ಪ್ರಭಾರ ಮುಖ್ಯಾಧಿಕಾರಿಯಾಗಿದ್ದ ಸರಗೂರಿನ ಸಂತೋಷ ಅವರಿಂದ ಸುರೇಶ್ ಅಧಿಕಾರ ವಹಿಸಿಕೊಂಡರು.

# ಜ.4, ಕೆ.ಆರ್.ನಗರದಲ್ಲಿ ರಾಷ್ಟ್ರಕವಿ ಕುವೆಂಪು ಜನ್ಮದಿನ ಆಚರಣೆ

### ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪಗೆ ಆಹ್ವಾನ



ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

**ಕೆ.ಆರ್.ನಗರ:** ಇಡೀ ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರು ಜಗದ ಕವಿ, ಯುಗದ ಕವಿಯಾಗಿದ್ದಾರೆ, ಅವರ ಜನ್ಮದಿನವನ್ನು ಜ.4ರಂದು ತಾಲೂಕು ಒಕ್ಕಲಿಗ ನೌಕರರ ಸ್ನೇಹ ಬಳಗದಿಂದ ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಸಮುದಾಯ ಭವನದಲ್ಲಿ ಆಚರಿಸಲಾಗುವುದು ಎಂದು ತಾಲೂಕು ಒಕ್ಕಲಿಗ ನೌಕರರ ಸ್ನೇಹ ಬಳಗದ ಅಧ್ಯಕ್ಷ ಶಂಕರೇಗೌಡ ತಿಳಿಸಿದರು.

ರಾಷ್ಟ್ರಕವಿ ಕುವೆಂಪು ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು ಮತ್ತು ಅಂತರರಾಷ್ಟ್ರೀಯ ವಿಜ್ಞಾನಿಗಳಾದ ಪ್ರೋ.ಕೆ.ಎಸ್.ರಂಗಪ್ಪ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಮಾತನಾಡಿದರು.

ರವಿ ಕಾಣದ್ದನ್ನು ಕವಿ ಕಂಡ ಎಂಬಂತೆ ಕುವೆಂಪುರವರು ರಚಿಸಿರುವ ಎಲ್ಲಾ ಕಾವ್ಯಗಳಲ್ಲಿ ಮಾನವೀಯತೆಯ ಸಂದೇಶವಿದೆ. ಅವರ ಸಂದೇಶಗಳನ್ನು ನಾವೆಲ್ಲರೂ ಅರಿಯಬೇಕು. ಭಾರತಮಾತೆಯ ಮಗನಾಗಿ ಹುಟ್ಟಿ ಇಡೀ ಮನುಕುಲಕ್ಕೆ ವಿಶ್ವಮಾನವ ಸಂದೇಶಗಳನ್ನು ಸಾರಿದ ಕುವೆಂಪು ಅವರ ಸ್ಮರಣೆ ಇಂದಿಗೂ ಪ್ರಸ್ತುತವಾಗಿವೆ ಎಂದು ತಿಳಿಸಿದರು. ಬಳಿಕ ಹುಣಸೂರಿನ ಬಿಳಿಗೆರೆಯ ಅನ್ವೇಷಣಾ ಪದವಿ ಪೂರ್ವ ಕಾಲೇಜಿನ ಉಪ ಪ್ರಾಂಶುಪಾಲೆ ಆಶಾನಂದೀಶ್ ಅವರನ್ನು ರಾಷ್ಟ್ರಕವಿ ಕುವೆಂಪು ಅವರ ವಿಚಾರಧಾರೆಯ ಬಗ್ಗೆ ಪ್ರಧಾನ ಭಾಷಣ ಮಾಡಲು ನೌಕರರ ಸ್ನೇಹ ಬಳಗದಿಂದ ಮುಕ್ತ ಆಹ್ವಾನ ನೀಡಿ ಗೌರವಿಸಲಾಯಿತು.

ಟಿ.ಪಿ.ನಂದೀಶ್, ಈಶ್ವರ್, ಶಿವರಾಮ್, ದೇವೇಂದ್ರ, ಕೆ.ಎಲ್.ರಮೇಶ್ ಇದ್ದರು.

---

# ಉಚ್ಚಾಟಿತ ಕುರುಬರ ಸಂಘದ ಅಧ್ಯಕ್ಷರಿಂದ ಕೋಟ್ಯಾಂತರ ರೂ. ದುರುಪಯೋಗ

## ಕಾಗಿನೆಲೆ ಶ್ರೀ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿಗಳಿಗೆ ದೂರು, ಕನಕ ಭವನದ ಬೀಗದ ಕೀ ವಾಪಸ್ ಭರವಸೆ

**ಹೆಚ್.ಡಿ.ಕೋಟೆ:** ತಾಲೂಕಿನ ಕಾಳಿದಾಸ ಕುರುಬ ಸಮಾಜದ ಕ್ಷೇಮಾಭಿವೃದ್ಧಿ ಸಂಘದಿಂದ ಉಚ್ಚಾಟಿತ ಮಾಜಿ ಅಧ್ಯಕ್ಷ ಮೊಳೆಯೂರು ಆನಂದ್ ಹಾಗೂ ಇತರರು ಕೋಟ್ಯಾಂತರ ರೂ. ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು, ಇದನ್ನು ಶ್ರೀ ಕಾಗಿನೆಲೆ ಶ್ರೀಮಠದ ಶಿವಾನಂದಪುರಿ ಸ್ವಾಮೀಜಿ ಅವರ ಗಮನಕ್ಕೆ ತರಲಾಗಿದೆ ಎಂದು ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್. ಮಾಲೆಗೌಡ ತಿಳಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಪಟ್ಟಣದಲ್ಲಿರುವ ಕನಕ ಸಮುದಾಯ ಭವನದ ಉಸ್ತುವಾರಿಯನ್ನು ಶ್ರೀಗಳಿಗೆ ಬೀಗದ ಕೈ ನೀಡುವ ಮೂಲಕ ದಾರಿ ತಪ್ಪಿಸಲಾಗಿದೆ. ಭವನವು ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಉಸ್ತುವಾರಿಯಲ್ಲಿ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಕುರುಬ ಸಮಾಜದ ಮುಖಂಡರು.

ಇರಬೇಕೆ ಹೊರತು ಸಮುದಾಯದ ಆಸ್ತಿಯನ್ನು ಮಠಕ್ಕೆ ಆನಂದ್ ಅವರ ಧೋರಣೆಯನ್ನು ಸಂಘವು ತೀವ್ರವಾಗಿ ಖಂಡಿಸುತ್ತದೆ ಎಂದು ತಿಳಿಸಿದರು.

ಕುರುಬ ಸಮುದಾಯದ ಈ ಹಿಂದಿನ ಅಧ್ಯಕ್ಷರು ತಮ್ಮ ಆಡಳಿತ ಅವಧಿಯಲ್ಲಿ ಕನಕ ಸಮುದಾಯ ಭವನದ ಆದಾಯ ಹಾಗೂ ಸರ್ಕಾರದಿಂದ ಕನಕ ಸಮುದಾಯ ಭವನದ ಅಭಿವೃದ್ಧಿಗೆ ಬಿಡುಗಡೆಯಾದ ಕೋಟ್ಯಾಂತರ ರೂ. ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು ಸಂಘದ ವಾರ್ಷಿಕ ಸಭೆಯನ್ನು ಕರೆಯದೆ ಸಂಘದ ನಿಯಮಾವಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಇದನ್ನು ಶ್ರೀಗಳ ಗಮನಕ್ಕೆ ತರಲಾಗಿದೆ ಎಂದರು.

ಕಳೆದ ಫೆ. 25ರಂದು ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕಣ್ಣ ಅವರ ನೇತೃತ್ವದಲ್ಲಿ ಸರ್ವ ಸದಸ್ಯರ ಸಭೆ ಕರೆದು ಸರ್ವಾನುಮತದಿಂದ ಎಂ.ಬಿ ಆನಂದ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಯಿತು. ಈ ಸಂಬಂಧ ಆನಂದ್ ಅವರ ವಿರುದ್ಧ ಜಿಲ್ಲಾ ಸಹಕಾರ ಉಪ ನಿಬಂಧಕರ ನ್ಯಾಯಾಲಯದಲ್ಲಿ ತನಿಖೆ ನಡೆಸುವಂತೆ ಪ್ರಕರಣ ದಾಖಲಿಸಲಾಗಿದೆ. ನಂತರ ಆಯ್ಕೆಯಾದ ಪದಾಧಿಕಾರಿಗಳ ಪಟ್ಟಿಯನ್ನು ಸಿಂಧುಗೊಳಿಸುವಂತೆ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಅನುಮೋದನೆಗೆ ಕಳಿಸಲಾಯಿತು ಎಂದು ಅವರು ವಿವರಿಸಿದರು.

ಈ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀ ಕಾಗಿನೆಲೆ ಶ್ರೀ ಮಠದ ಶಿವಾನಂದಪುರಿ ಸ್ವಾಮೀಜಿಯವರನ್ನು, ನಾವೆಲ್ಲರೂ ಭೇಟಿ ಮಾಡಿ ಸ್ವಾಮೀಜಿಯವರಿಗೆ, ಹೆಚ್.ಡಿ.ಕೋಟೆ ಪಟ್ಟಣದಲ್ಲಿರುವ ಕನಕ ಭವನ ಆಸ್ತಿ ಹೆಚ್.ಡಿ. ಕೋಟೆ ಮತ್ತು ಸರಗೂರು ಶ್ರೀ ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಹೆಸರಿನಲ್ಲಿರುವ ಈ ಆಸ್ತಿಯಾಗಿದೆ ಎಂದು ಸ್ವಾಮೀಜಿಯವರಿಗೆ ಮನವರಿಕೆ ಮಾಡಿದ್ದೇವೆ ಎಂದರು.

ಅದಕ್ಕೆ ಸ್ವಾಮೀಜಿಯವರು ಈ ಆಸ್ತಿ ನಿಮ್ಮ ಹೆಸರಿನಲ್ಲಿದೆ ಎಂದು ಆನಂದ್ ಅವರು ನನಗೆ ತಿಳಿಸಿದ್ದರೂ ಆದ್ದರಿಂದ ನಾನು ಭವನದ ಬೀಗದ ಕೀ ಅನ್ನು ತೆಗೆದುಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಭವನದ ಬೀಗದ ಕೀ ಅನ್ನು ನಾನು ಸಂಘಕ್ಕೆ ಹಿಂತಿರುಗಿಸುತ್ತೇನೆ ಎಂದು ಸ್ವಾಮೀಜಿಯವರು ತಿಳಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಚಿಕ್ಕಣ್ಣ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಖಜಾಂಚಿ ಯತೀಶ್ ಕುಮಾರ್, ಸಹ ಕಾರ್ಯದರ್ಶಿ ಜಗನಾಥ್, ಜಂಟಿ ಸಂಘಟನಾ ಕಾರ್ಯದರ್ಶಿ ಎಂ. ಗಿರೀಶ್, ತಮ್ಮಣ್ಣ ಮಂಜುನಾಥ್, ಉಪಾಧ್ಯಕ್ಷರುಗಳಾದ ಆರ್.ಎಂ.ವೀರೇಗೌಡ, ಎಂ ರವಿ, ಕರಿಯಪ್ಪಗೌಡ, ಕೆ.ಸಿ.ಮಾದೇವು, ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಾದ ಬೈರೇಗೌಡ, ಮಂಜುನಾಥ, ಗಿರೀಶ ಎಂ, ರಮೇಶ, ದಡದಹಳ್ಳಿ ಶಿವರಾಜು, ಆರ್.ಪಿ.ಜಗನ್ನಾಥ್, ಆರ್.ಎನ್ ಪಾಪಣ್ಣ, ನಾಗರಾಜು, ಪುಟ್ಟೇಗೌಡ, ಎಂ.ಹೆಚ್ ಕುಮಾರ, ತಮ್ಮಣ್ಣ, ಕುಂದೂರ್ ಮಹದೇವ, ವಜ್ರೇಗೌಡ, ಕಾರ್ತಿಕ್ ಕುಮಾರ್, ಕೃಷ್ಣೇಗೌಡ, ರಾಜಣ್ಣ, ಕೆ ಬಿ ಶಿವರಾಜು, ಬೀರೇಗೌಡ, ರಮೇಶ, ಮುದ್ದರಾಮೇಗೌಡ, ಮಹದೇವೇಗೌಡ, ಕರಿಗೌಡ ಹಾಗೂ ಸಮಾಜದ ಮುಖಂಡರು ಇದ್ದರು.

## ಅಂಗನವಾಡಿ ಮಕ್ಕಳಿಗೆ ಬ್ಯಾಗ್ ವಿತರಣೆ

**ಮಲ್ಲುಂಡಿ:** ನಂಜನಗೂಡು ತಾಲೂಕಿನ ಹೆಡಿಯಾಲ ಸಮೀಪದ ಪಾರ್ವತಿಪುರ ಗ್ರಾಮದ ಅಂಗನವಾಡಿ ಮಕ್ಕಳಿಗೆ ಗ್ರಾಪಂ ಸದಸ್ಯ ಅಶ್ರಫ್ ಅಲಿ ಉಚಿತವಾಗಿ ಬ್ಯಾಗುಗಳನ್ನು ವಿತರಿಸಿದರು.

ಬಳಿಕ ಮಾತನಾಡಿದ ಅವರು ಗ್ರಾಮೀಣ ಭಾಗದ ಮಕ್ಕಳು ಅಂಗನವಾಡಿ ಕೇಂದ್ರದಿಂದಲೇ ವಿಧ್ಯಾಭ್ಯಾಸ ಪ್ರಾರಂಭ ಮಾಡುತ್ತಾರೆ. ಸರ್ಕಾರ ಪ್ರಾಥಮಿಕ ಶಾಲೆಗೆ ನೀಡುವ ಸೌಲಭ್ಯಗಳನ್ನು ಅಂಗನವಾಡಿ ಮಕ್ಕಳಿಗೂ ನೀಡಿದರೆ ಒಳ್ಳೆಯದು. ಇದರಿಂದ ಅತ್ಯುತ್ತಮ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳನ್ನು ತಪ್ಪದೆ ಅಂಗನವಾಡಿಗೆ ಕಳುಹಿಸಿದರೆ ಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರು. ಈ ವೇಳೆ ಮುಖಂಡರುಗಳಾದ ರಂಗಸ್ವಾಮಿ, ಪರಶಿವಪ್ಪ, ಕಾರ್ಯಕರ್ತೆ ಪ್ರತಿಮಾ, ಶಿಕ್ಷಕಿ ರೇಖಾ ಸೇರಿದಂತೆ ಪ್ರಮುಖರು ಹಾಜರಿದ್ದರು.

# ಮೈಸೂರಲ್ಲಿ ನಾಲ್ಕು ದಿನಗಳ ಅಂತರ ವಿಶ್ವವಿದ್ಯಾಲಯ ಮಟ್ಟದ ಕ್ರೀಡಾಕೂಟ 'ಕ್ರೀಡೋತ್ಕರ್ಷ'-2025ಕ್ಕೆ ಚಾಲನೆ

## ಕ್ರೀಡಾಕೂಟದಲ್ಲಿ 630 ಕ್ರೀಡಾ ಪಟುಗಳು ಭಾಗಿ



ಮೈಸೂರು ವಿವಿಯ ಓವೆಲ್ಸ್ ಮೈದಾನದಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಮೈಸೂರು ತೋಟಗಾರಿಕೆ ಮಹಾವಿದ್ಯಾಲಯ ಸಹಯೋಗದಲ್ಲಿ ಏರ್ಪಡಿಸಿರುವ 16ನೇ ಅಂತರ ಮಹಾವಿದ್ಯಾಲಯಗಳ 'ಕ್ರೀಡೋತ್ಕರ್ಷ-2025'ಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮೈಸೂರು ದಕ್ಷಿಣ ವಲಯ ಉಪ ಪೊಲೀಸ್ ಮಹಾ ನಿರೀಕ್ಷಕ ಡಾ.ಎಂ.ಬೋರಲಿಂಗಯ್ಯ ಹಾಗೂ ಖೋ ಖೋ ಪಟು ಚೈತ್ರ ಚಾಲನೆ ನೀಡಿದರು.

ಮೈಸೂರು, ಡಿ.11(ಜಿಎ)-ಮೈಸೂರು ವಿವಿಯ ಓವೆಲ್ಸ್ ಮೈದಾನದಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಮೈಸೂರು ತೋಟಗಾರಿಕೆ ಮಹಾವಿದ್ಯಾಲಯ ಸಹಯೋಗದಲ್ಲಿ ಏರ್ಪಡಿಸಿರುವ 16ನೇ ಅಂತರ ಮಹಾವಿದ್ಯಾಲಯಗಳ ಗೇಮ್ಸ್ ಮತ್ತು ಅಥ್ಲೆಟಿಕ್ಸ್ ಕ್ರೀಡಾಕೂಟ 'ಕ್ರೀಡೋತ್ಕರ್ಷ-2025'ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮೈಸೂರು ದಕ್ಷಿಣ ವಲಯ ಉಪ ಪೊಲೀಸ್ ಮಹಾ ನಿರೀಕ್ಷಕ ಡಾ. ಎಂ.ಬಿ ಬೋರಲಿಂಗಯ್ಯ ಹಾಗೂ ಖೋ ಖೋ ಪಟು ಚೈತ್ರ ಚಾಲನೆ ನೀಡಿದರು.

ಕ್ರೀಡಾಕೂಟದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾನಿಲಯದ ಹತ್ತು ಮಹಾವಿದ್ಯಾಲಯಗಳಿಂದ 630 ವಿದ್ಯಾರ್ಥಿಗಳು ಪಥ ಸಂಚಲನದ ಮೂಲಕ ಗಣ್ಯರಿಗೆ ಗೌರವ ವಂದನೆ ಸಲ್ಲಿಸಿದರು. ನಂತರ ಖೋ ಖೋ, ಕಬ್ಬಡಿ, ವಾಲಿಬಾಲ್, ಬಾಸ್ಕೆಟ್ ಬಾಲ್ ನಂತಹ ಗುಂಪು ಸ್ಪರ್ಧೆ ಮತ್ತು ಎಲ್ಲಾ ರೀತಿ ಅಥ್ಲೆಟಿಕ್ ಸ್ಪರ್ಧೆಗಳಲ್ಲಿ ಭಾಗಹಿಸಿದ್ದರು.

ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಕ್ರೀಡೆಯಲ್ಲಿ ಅನೇಕರು ಸ್ಪರ್ಧಿಸಿದರೂ ಗೆಲ್ಲುವುದು ಒಬ್ಬರೆ. ಆದರೆ ಸೋತವರು ಎಂದಿಗೂ ಬೇಸರ ಮಾಡಿಕೊಳ್ಳಬಾರದು. ಮುಂದಿನ ಗೆಲುವಿಗಾಗಿ ಮಗ್ನರಾಗಬೇಕು. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಸೋಲು ಮತ್ತು ಗೆಲುವನ್ನು ಸಮಾನವಾಗಿ ನೋಡುವ ಪ್ರಜ್ಞಾವಂತಿಕೆ ಮೂಡುತ್ತದೆ. ಹಾಗಾಗಿ ಕ್ರೀಡಾಕೂಟಗಳಲ್ಲಿ ಭಾಗವಹಿಸುವುದು ಬಹಳ ಮುಖ್ಯ. ಸೋತವರನ್ನು ಹಾಗೂ ಗೆದ್ದವರನ್ನು ಒಗ್ಗೂಡಿಸುವ ಕೆಲಸ ಕ್ರೀಡೆ ಮಾಡುತ್ತದೆ ಎಂದು ತಿಳಿಸಿದರು.

ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಿಕೆ ಉತ್ತಮ ಆರೋಗ್ಯ, ಚಿಂತನೆ ಹಾಗೂ ಉತ್ತಮ ಮಾರ್ಗದರ್ಶಕರಾಗಲು ಸಾಧ್ಯ. ಅಲ್ಲದೇ ದೈಹಿಕವಾಗಿ ಸದೃಢತೆ, ಶೃಜನಶೀಲತೆ ಮತ್ತು ಚಿಂತನಶೀಲ ವಿಚಾರಗಳನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. ಕ್ರೀಡೆಯಲ್ಲಿ ಒಟ್ಟುಗೂಡಿ ಆಟವಾಡುವ ಮನೋಭಾವ ಬರಬೇಕು. ಒಗ್ಗಟ್ಟಿನಲ್ಲಿ ಆಟವಾಡಿ ಜಯಿಸುವ ಗೆಲುವು, ಅದೇ ಜೀವನದ ನಿಜವಾದ ಗೆಲುವು. ಜೀವನದಲ್ಲೂ ಅದನ್ನೇ ರೂಡಿಸಿಕೊಂಡು ಮುನ್ನಡೆಯಬೇಕು ಎಂದರು.

ಇವತ್ತಿನ ಶಿಕ್ಷಣದಲ್ಲಿ ತೋಟಗಾರಿಕೆ ಶಿಕ್ಷಣ ಆ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ. ಭವಿಷ್ಯದ ಶಿಕ್ಷಣದಲ್ಲಿ ಬಹುಶಿಸ್ತೀಯ ಶಿಕ್ಷಣವಾಗಬೇಕೆಂಬುದು ನಮ್ಮ ಆಶಯ ಎಂದರು.

ದಕ್ಷಿಣ ವಲಯ ಉಪಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಬಿ ಬೋರಲಿಂಗಯ್ಯ ಮಾತನಾಡಿ, ಇಂದು ಎಲ್ಲರೂ ಕ್ರೀಡೆಯ ಜೊತೆಗೆ ಆಟೋಟಗಳು, ಯೋಗ, ಜಿಮ್ ನಂತಹ ಚಟುವಟಿಕೆಗಳು ದಿನನಿತ್ಯದ ಬದುಕಿನಲ್ಲಿ ಕರಗತವಾಗಬೇಕು. ಯುವ ಜನತೆ ಮೊಬೈಲ್, ಸಾಮಾಜಿಕ ಮಾಧ್ಯಮಗಳಿಗೆ ಅಂಟಿಕೊಂಡಿರುವುದನ್ನು, ಬಿಟ್ಟು ಕಲಿಕೆಯ ಕಡೆಗೆ ಗಮನಹರಿಸಬೇಕು ಎಂದು ಕಿವಿ ಮಾತು ಹೇಳಿದರು.

ಕ್ರೀಡೆಗಳು ಬದುಕಿಗೆ ಬಹಳಷ್ಟು ಅತ್ಯವಶ್ಯಕ. ಪ್ರಚಲಿತ ವಿದ್ಯಮಾನಗಳಲ್ಲಿ ನಮ್ಮ ಜೀವನ ಕ್ರಮದಲ್ಲಿ ಹಲವಾರು ಬದಲಾವಣೆಗಳಾಗುತ್ತಿದ್ದು, ಆಹಾರ ಪದ್ಧತಿ, ಜೀವನ ಶೈಲಿ, ಮೊಬೈಲ್, ಸಾಮಾಜಿಕ ಮಾಧ್ಯಮಗಳ ಗೀಳುಗಳಿಂದ ಅಪಾರ ಪರಿಣಾಮ ಬೀರುತ್ತಿವೆ. ಇದಕ್ಕಾಗಿ ನಾವು ದೈಹಿಕ ಆರೋಗ್ಯದ ಸದೃಡತೆಯ ಬಗ್ಗೆ ಹೆಚ್ಚು ಒತ್ತು ನೀಡಬೇಕಿದೆ ಎಂದರು.

ನಮ್ಮ ಜೀವನ ಉತ್ತಮವಾಗಿಡಲು, ಕ್ರೀಡೆ ಬಹಳ ಪ್ರಾಥಮಿಕ ಪಾತ್ರ ವಹಿಸುತ್ತದೆ. ಕ್ರೀಡೆ ಒಂದು ಸ್ಪೂರ್ತಿ ಮತ್ತು ಸಂದೇಶ. ಇವತ್ತಿನ ದಿನದಲ್ಲಿ ಹಲವರು ಗೊಂದಲ ಬದುಕಿಗೆ ಸಿಲುಕಿದ್ದಾರೆ. ಜೀವನ ಶೈಲಿ ಮಾರ್ಪಾಡಿನಿಂದ ದೇಶದಲ್ಲಿ ಮಧುಮೇಹ ಕಾಯಿಲೆ, ಅಧಿಕ ರಕ್ತದೊತ್ತಡ, ಬೊಜ್ಜಿನಂತಹ ಸಮಸ್ಯೆಗಳಿಗೆ ಸಿಲುಕಿದ್ದಾರೆ. ಈ ಎಲ್ಲವನ್ನು ಕ್ರೀಡೆ ನಿಯಂತ್ರಣ ದಲ್ಲಿಡಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ.ವಿಷ್ಣುವರ್ಧನ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ನಿರ್ದೇಶಕ ಡಾ.ಸಿ.ವೆಂಕಟೇಶ್, ಮೈಸೂರು ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ಸಹಾಯಕ ನಿರ್ದೇಶಕಿ ಎಸ್.ಹೆಚ್. ನಿರ್ಮಲಾ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೈಸೂರು ಜಿಲ್ಲೆ ಗ್ರಾಮಾಂತರ ಪರಿಸರ ಅಧಿಕಾರಿ ವಿ.ಸುನೀಲ್, ಮೈಸೂರು ನಗರ ಉಪ ಪರಿಸರ ಅಧಿಕಾರಿ ಎಂ.ಜೆ.ಜಯಲಕ್ಷ್ಮೀ, ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿವಿಯ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಡಾ.ಎಸ್.ಎನ್ ವಾಸುದೇವನ್, ಹೆಚ್.ಕೆ ಮನೋಹರ್, ಕ್ರೀಡಾಕೂಟದ ಸಂಘಟನಾ ಕಾರ್ಯದರ್ಶಿಗಳಾದ ಡಾ.ಹೆಚ್. ಎನ್. ರಾಜೀವ್, ತೋಟಗಾರಿಕೆ ಮಹಾ ವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣದ ಕ್ರೀಡಾಕೂಟ ಸಂಘಟನಾದ ಅಧ್ಯಕ್ಷ ಡೀನ್ ಡಾ.ಎಂ.ಜಿ.ಕೆರೂಟಗಿ ಸೇರಿದಂತೆ ವಿವಿಧ ತೋಟಗಾರಿಕೆ ವಿವಿಯ ಡೀನ್‌ಗಳು ಉಪಸ್ಥಿತರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಮಹಾಸೇನಾ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಡೆವಿಲ್ (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಕಿಸ್ ಕಿಸ್ಕೋ ಪ್ಯಾರ್ ಕರೂ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಡೆವಿಲ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಡೆವಿಲ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಅಖಂಡ-2 (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಡೆವಿಲ್ (ಕ) | 3 ಪ್ರದರ್ಶನಗಳು |
| **ಲಿಡೋ** | |
| ಅಖಂಡ-2 (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| - | - |
| **ಪ್ರಭಾ** | |
| ಕಾಂತಾರ-2 (ಕ) | 4 ಪ್ರದರ್ಶನಗಳು |

# ವೈದ್ಯ-ರೋಗಿ ನಡುವೆ ಮಾನವೀಯತೆ, ಸಹಾನುಭೂತಿ ಅಗತ್ಯ

## ಕಾವೇರಿ ಸೊಸೈಟಿಯ ಅಕಾಡೆಮಿಕ್ ಸಭೆಯಲ್ಲಿ ಡಾ.ಎಂ.ಎ.ಶೇಖರ್ ಸಲಹೆ



ಮೈಸೂರಿನ ಕಾವೇರಿ ಕ್ಲಿನಿಕಲ್ ಸೊಸೈಟಿಯ 100ನೇ ಅಕಾಡೆಮಿಕ್ ಸಭೆಯಲ್ಲಿ 'ಪಲ್ಸ್ ಆಫ್ ಕಾವೇರಿ' ನ್ಯೂಸ್‌ಲೇಟರ್‌ನ ಮೂರನೇ ಆವೃತ್ತಿಯನ್ನು ಹಿರಿಯ ವೈದ್ಯರಾದ ಡಾ.ಜಾವೀದ್ ನಯೀಮ್, ಸರ್ಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ವಿಭಾಗದ ಅಧ್ಯಕ್ಷ ಡಾ.ದಿನೇಶ್, ಮತ್ತು ಐಎಂಎ ಮೈಸೂರು ಅಧ್ಯಕ್ಷ ಡಾ.ಚಂದ್ರಭಾನ್ ಸಿಂಗ್ ಅವರು ಬಿಡುಗಡೆಗೊಳಿಸಿದರು.

ಮೈಸೂರು, ಡಿ.11(ಜಿಎ)-ಮೈಸೂರಿನ ಕಾವೇರಿ ಕ್ಲಿನಿಕಲ್ ಸೊಸೈಟಿಯ 100ನೇ ಅಕಾಡೆಮಿಕ್ ಸಭೆಯನ್ನು ನಡೆಸಲಾಯಿತು.

ಸಭೆಯನ್ನು ಜೆಎಸ್‌ಎಸ್ ಎಎಚ್ಇಆರ್ ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದ ತ್ವರಿತ ಬದಲಾವಣೆಯ ನಡುವೆಯೂ ಕ್ಲಿನಿಕಲ್ ಮೆಡಿಸಿನ್‌ನ ಮಹತ್ವವನ್ನು ತಿಳಿಸಿ, ಕಾವೇರಿ ಕ್ಲಿನಿಕಲ್ ಸೊಸೈಟಿಯ ಶೈಕ್ಷಣಿಕ ಚೈತನ್ಯ ಮತ್ತು ಸೇವಾ ಮನೋಭಾವವನ್ನು ಅವರು ಶ್ಲಾಘಿಸಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ.ಎಂ.ಎ. ಶೇಖರ್ ಮಾತನಾಡಿ, ವೈದ್ಯ-ರೋಗಿ ಸಂಬಂಧದಲ್ಲಿ ಮಾನವೀಯತೆ, ಸಹಾನುಭೂತಿ ಮತ್ತು ಸಮಾಜಮುಖಿ ಚರ್ಚೆಗಳ ಅಗತ್ಯವನ್ನು ಅವರು ಪ್ರಸ್ತಾಪಿಸಿ, 100ನೇ ಸಭೆಯ ಈ ವಿಶೇಷ ಸಾಧನೆಗೆ ಅಭಿನಂದನೆ ಸಲ್ಲಿಸಿದರು.

ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಅಧ್ಯಕ್ಷ ಡಾ.ಜಿ.ಆರ್. ಚಂದ್ರಶೇಖರ್, ವ್ಯವಸ್ಥಾಪಕ ನಿರ್ದೇಶಕಿ ಡಾ ಸರಳಾ ಚಂದ್ರಶೇಖರ್, ವೈದ್ಯಕೀಯ ಅಧೀಕ್ಷಕ, ಡಾ ರಾಜೀವ ಬಿ ಎನ್ ಉಪಸ್ಥಿತರಿದ್ದರು. ಸೊಸೈಟಿಯ ಸಾಧನೆಗಳ ಬಗ್ಗೆ ಅವರು ಹೆಮ್ಮೆಯನ್ನು ವ್ಯಕ್ತಪಡಿಸಿದರು.

ಈ ಸಭೆಯಲ್ಲಿ 30ಕ್ಕೂ ಹೆಚ್ಚು ಸಲಹೆಗಾರರು ಮತ್ತು 100ಕ್ಕೂ ಹೆಚ್ಚು ವೈದ್ಯಕೀಯ ತಜ್ಞರು ಮೈಸೂರು ಮತ್ತು ಸುತ್ತಮುತ್ತಲಿನ ಸ್ಥಳಗಳಿಂದ ಭಾಗವಹಿಸಿದರು. ವಿವಿಧ ವಿಭಾಗಗಳ ಸಲಹೆಗಾರರು ಮತ್ತು ವೈದ್ಯರು ತಮ್ಮ ಅಕಾಡೆಮಿಕ್ ಸಾಧನೆಗಳನ್ನು ಹಂಚಿಕೊಂಡ ಈ ಕಾರ್ಯಕ್ರಮವು ಸತತ ಅಧ್ಯಯನ, ಕ್ಲಿನಿಕಲ್ ಶ್ರೇಷ್ಠತೆ ಮತ್ತು ಸಹಕಾರದ ಮೂಲಕ ಆರೋಗ್ಯ ಕ್ಷೇತ್ರ ಅಭಿವೃದ್ಧಿಗೆ ಸಂಸ್ಥೆಯ ಬದ್ಧತೆಯನ್ನು ಮತ್ತೊಮ್ಮೆ ದೃಢಪಡಿಸಿತು.

ಕಾರ್ಯಕ್ರಮದಲ್ಲಿ 'ಪಲ್ಸ್ ಆಫ್ ಕಾವೇರಿ' ನ್ಯೂಸ್‌ಲೇಟರ್‌ನ ಮೂರನೇ ಆವೃತ್ತಿಯನ್ನು ಹಿರಿಯ ವೈದ್ಯರಾದ ಡಾ.ಜಾವೀದ್ ನಯೀಮ್, ಸರ್ಜಿಕಲ್ ಸೊಸೈಟಿ ಆಫ್ ಇಂಡಿಯಾ, ಮೈಸೂರು ವಿಭಾಗದ ಅಧ್ಯಕ್ಷ ಡಾ.ದಿನೇಶ್, ಮತ್ತು ಐಎಂಎ ಮೈಸೂರು ಅಧ್ಯಕ್ಷ ಡಾ.ಚಂದ್ರಭಾನ್ ಸಿಂಗ್ ಅವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಡಾ.ಅರವಿಂದ್, ಡಾ.ಅಜಯ್ ರಾಘವ್ ಜೋಶಿ ಮತ್ತು ಪ್ರಶಾಂತ್ ಉಪಸ್ಥಿತರಿದ್ದರು.

# ಸಂಚಾರ ನಿಯಮ ಉಲ್ಲಂಘನೆ ದಂಡದಲ್ಲಿ ಶೇ. 50 ರಿಯಾಯಿತಿಗೆ ಇಂದು ಕಡೇ ದಿನ

## ಮೈಸೂರು ನಗರದಲ್ಲಿ ನ. 21 ರಿಂದ ಡಿ. 9 ರವರೆಗೆ ಸಂಚಾರ ನಿಯಮ ಉಲ್ಲಂಘನೆಯ 5,15,959 ಪ್ರಕರಣದಲ್ಲಿ ಒಟ್ಟು 17,76,81,150 ರೂ. ದಂಡ ಸಂಗ್ರಹ

ಮೈಸೂರು, ಡಿ. 11 (ಆರ್‌ಕೆ)- ವಾಹನ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ದಂಡ ಪಾವತಿಸಲು ನಾಳೆ (ಡಿ. 12) ಕಡೇ ದಿನವಾಗಿದೆ.

ಸರ್ಕಾರದ ಆದೇಶದನ್ವಯ ನವೆಂಬರ್ 21 ರಿಂದ ಡಿಸೆಂಬರ್ 9 ರವರೆಗೆ ಮೈಸೂರು ನಗರದಲ್ಲಿ ಶೇ. 50 ರಿಯಾಯಿತಿ ಅವಕಾಶ ಬಳಸಿಕೊಂಡು ವಾಹನ ಮಾಲೀಕರು 5,15,959 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಮುಕ್ತಾಯಗೊಳಿಸಿಕೊಂಡಿದ್ದಾರೆ. ದಂಡ ಪಾವತಿಯಿಂದ ಒಟ್ಟು 17,70,81,959 ರೂ ಸಂಗ್ರಹವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

2025 ರ ನವೆಂಬರ್ 21 ರಿಂದ ಕರ್ನಾಟಕ ಒನ್, ಕರ್ನಾಟಕ ಸ್ಟೇಟ್ ಪೊಲೀಸ್ ಆ್ಯಪ್ ಹಾಗೂ ಸಂಚಾರ ಠಾಣೆಗಳಲ್ಲಿ ಸಾರ್ವಜನಿಕರು ದಂಡ ಪಾವತಿಸುತ್ತಿದ್ದು, ಶೇ. 50 ರ ರಿಯಾಯಿತಿ ನಾಳೆ (ಶುಕ್ರವಾರ ಮಧ್ಯರಾತ್ರಿ 12 ಗಂಟೆ) ಅಂತ್ಯವಾಗಲಿದೆ. ಈ ಅವಕಾಶ ಕಾಲಾವಧಿ ವಿಸ್ತರಿಸುವ ಸಂಬಂಧ ಸರ್ಕಾರ ಅಧಿಸೂಚನೆ ಹೊರಡಿಸಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಡೇ ದಿನ ಸಮೀಪಿಸುತ್ತಿದ್ದಂತೆಯೇ ವಾಹನಗಳ ಮಾಲೀಕರು ಶೇ. 50 ರ ರಿಯಾಯಿತಿ ಬಳಸಿಕೊಂಡು ಬಾಕಿ ದಂಡ ಪಾವತಿಸಲು ಮುಂದಾಗುತ್ತಿದ್ದಾರೆ.

## ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ ದಿನದ ಅಂಗವಾಗಿ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿತ್ತು. ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಪ್ರೌಢಶಾಲೆಯ 6 ಹಾಗೂ ಪ್ರಾಥಮಿಕ ಶಾಲೆಯ 9 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಪಡೆದಿದ್ದು, ಅವರನ್ನು ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿತು.

# ಮೈಸೂರು ಜಿಲ್ಲಾದ್ಯಂತ ಡಿ.21ರಂದು ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ಕಾರ್ಯಕ್ರಮ



ಮೈಸೂರು ಜಿಪಂ ಸಭಾಂಗಣದಲ್ಲಿ ಗುರುವಾರ ಡಿ.21ರ ಪಲ್ಸ್ ಪೋಲಿಯೋ ಅಭಿಯಾನದ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು, ಡಿ.11(ಎಂಕೆ)- ಜಿಲ್ಲೆಯಾದ್ಯಂತ ಡಿ.21 ರಂದು ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, 5 ವರ್ಷದೊಳಗಿನ ಪ್ರತಿ ಮಗುವಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಮನವಿ ಮಾಡಿದ್ದಾರೆ.

ಮೈಸೂರು ಜಿಪಂ ಸಭಾಂಗಣದಲ್ಲಿ ಗುರುವಾರ ನಡೆದ ಪಲ್ಸ್ ಪೋಲಿಯೋ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಬೂತ್ ಮಟ್ಟದಲ್ಲಿ ಲಸಿಕೆ ನೀಡಲಾಗುತ್ತದೆ. ಹಾಗೆಯೇ ಡಿ.22 ರಿಂದ 24ರವರೆಗೆ ಮನೆ ಮನೆಗೆ ಭೇಟಿ ನೀಡಿ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು.

ಡಿ.21 ರಿಂದ 24 ರವರೆಗಿನ 4 ದಿನಗಳು ಸಂಚಾರ ಕೇಂದ್ರಗಳು ಹಾಗೂ ಹೆಚ್ಚಿನ ಅಪಾಯ ಪ್ರದೇಶಗಳಲ್ಲಿ ವಿಶೇಷ ಅಭಿಯಾನ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದ್ದು, ಡಿ.21ಕ್ಕೆ 5 ವರ್ಷದೊಳಗಿನ ಪ್ರತಿ ಮಗುವಿಗೂ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿ ಎಂದು ಮನವಿ ಮಾಡಿದರಲ್ಲದೆ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಅಗತ್ಯವಿರುವ ಸಿಬ್ಬಂದಿಯ ಜೊತೆಗೆ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳ ಸೇರಿಸಿಕೊಂಡು ರೂಟ್ ಮ್ಯಾಪ್‌ಗಳನ್ನು ಸಮರ್ಪಕವಾಗಿ ಮಾಡಿಕೊಳ್ಳುವಂತೆ ಸೂಚನೆ ನೀಡಿದರು.

**14 ವರ್ಷದಿಂದ ಕಂಡುಬಂದಿಲ್ಲ:** ಡಬ್ಲ್ಯೂಹೆಚ್‌ಓ(ವಿಶ್ವ ಆರೋಗ್ಯ ಸಂಸ್ಥೆ) ವೈದ್ಯಾಧಿಕಾರಿ ಡಾ.ಸುಧೀರ್ ನಾಯಕ್ ಮಾತನಾಡಿ, ದೇಶದಲ್ಲಿ ಕಳೆದ 14 ವರ್ಷಗಳಿಂದ ಪೋಲಿಯೋ ಪ್ರಕರಣಗಳು ಕಂಡು ಬಂದಿಲ್ಲ. ರಾಜ್ಯದಲ್ಲಿ 2007ರಲ್ಲಿ ಒಂದು ಪ್ರಕರಣ ಕಂಡು ಬಂದಿತ್ತು. ನಂತರ ಯಾವುದೇ ಪ್ರಕರಣ ಕಂಡು ಬಂದಿಲ್ಲ ಎಂದು ತಿಳಿಸಿದರು.

ಪೋಲಿಯೋ ಲಸಿಕೆ ಹಾಕಿಸಿದ ಮಗುವಿನ ಬೆರಳಿಗೆ ಇಂಕ್ ಹಾಕಲಾಗುವುದು. ಇದರಿಂದ ಎರಡೆರಡು ಬಾರಿ ಲಸಿಕೆ ಹಾಕುವುದನ್ನು ತಪ್ಪಿಸಬಹುದು. ಜೊತೆಗೆ ವಲಸೆ ಹೋಗಿರುವ ಮತ್ತು ವಲಸೆ ಬಂದಿರುವ ಕುಟುಂಬಗಳನ್ನು ಗುರ್ತಿಸಿ, 5 ವರ್ಷದೊಳಗಿನ ಮಕ್ಕಳಿದ್ದರೆ ಕಡ್ಡಾಯವಾಗಿ ಲಸಿಕೆ ಹಾಕಲು ಕ್ರಮವಹಿಸಬೇಕು ಎಂದರು.

**50 ಮೊಬೈಲ್ ಟೀಂ:** ಜಿಲ್ಲೆಯಲ್ಲಿ 5 ವರ್ಷದೊಳಗಿನ 2,22,084 ಮಕ್ಕಳಿದ್ದು, ಶೇ.100 ರಷ್ಟು ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಇದಕ್ಕಾಗಿ 1648 ಬೂತ್‌ಗಳನ್ನು ಮಾಡಲಾಗಿದ್ದು, 50 ಮೊಬೈಲ್ ಟೀಂಗಳನ್ನು ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಾಗರಾಜು, ಆರ್‌ಸಿಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಮತ್ತಿತರರು ಉಪಸ್ಥಿತರಿದ್ದರು.

## ದೃಷ್ಟಿಹೀನರಿಗೆ ಉಚಿತ ಕೈಗಡಿಯಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಡಿ. 11- ಮೈಸೂರಿನ ವಿನ್‌ಟೇಜ್ ಮ್ಯೂಸಿಕ್ ಫೌಂಡೇಷನ್ ವತಿಯಿಂದ ದೃಷ್ಟಿಹೀನರಿಗೆ ಮಾತನಾಡುವ ಕೈಗಡಿಯಾರವನ್ನು ಉಚಿತವಾಗಿ ನೀಡಲು ಉದ್ದೇಶಿಸಲಾಗಿದೆ. ಆಸಕ್ತರು ವಿಂಟೇಜ್ ಮ್ಯೂಸಿಕ್ ಫೌಂಡೇಷನ್, ಲೂರ್ದ್‌ನಗರ, ಲಷ್ಕರ್ ಮೊಹಲ್ಲಾ, ಮೈಸೂರು ಈ ವಿಳಾಸಕ್ಕೆ ಡಿ.27ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಅಧ್ಯಕ್ಷ ಸ್ಟೀಫನ್ ಸಂಪತ್‌ರಾಜ್ (ಮೊ. 94802 58487), ಡಾ. ನೀಮಾ ಹಾನೋಕ್ (ಮೊ. 80500 61183) ಸಂಪರ್ಕಿಸಲು ಕೋರಲಾಗಿದೆ.

# ನಿರಂತರ ಕಲಿಯುವ ಕುತೂಹಲವಿದ್ದರೆ ಎಂದೆಂದಿಗೂ ಸಾಧನೆ ಸಾಧ್ಯ

## ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಅಭಿಮತ



'ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು ಮೂಡಿಸುವ ಮತ್ತು ಸಂವಾದ ಕಾರ್ಯಕ್ರಮ'ವನ್ನು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಉದ್ಘಾಟಿಸಿದರು.

ಮೈಸೂರು, ಡಿ.11(ಎಂಕೆ)- ನಿರಂತರ ಅಧ್ಯಯನ, ಕಲಿಯುವ ಕುತೂಹಲ ವಿದ್ದರೆ ಬದುಕಿನ ಯಾವ ಕ್ಷಣದಲ್ಲಾದರೂ ಸಾಧನೆ ಮಾಡಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಬಿಎನ್.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್ ವಿಭಾಗದ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ವೃತ್ತಿ ಕೇಂದ್ರ, ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ 'ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು ಮೂಡಿಸುವ ಮತ್ತು ಸಂವಾದ ಕಾರ್ಯಕ್ರಮ'ದಲ್ಲಿ ಮಾತನಾಡಿದ ಅವರು, ಸಾಧಿಸುವ ಛಲ ಮತ್ತು ಆತ್ಮವಿಶ್ವಾಸವಿದ್ದರೆ ಎಲ್ಲವೂ ಸಾಧ್ಯ. ಆದರೆ, ಗುರಿ ನಿಖರವಾಗಿರಬೇಕು ಎಂದರು.

ಇಚ್ಛೆಯಂತೆ ಬದುಕು ನಡೆಸಬೇಕಾದರೆ, ಪಡೆದುಕೊಳ್ಳುವ ವಯಸ್ಸಿನಲ್ಲಿ ಪಡೆದುಕೊಳ್ಳಬೇಕು. ಸ್ವಾಮಿ ವಿವೇಕಾನಂದರು ಹೇಳಿರುವಂತೆ ಜಗತ್ತಿನ ಇತಿಹಾಸ ಕೆಲವರದ್ದು. ಯಾರು ಸಾಧಿಸಬೇಕು ಎಂಬ ಛಲದೊಂದಿಗೆ ಗೆದ್ದಿರುತ್ತಾರೋ ಅವರದ್ದು ಎಂದಿದ್ದಾರೆ. ಆದ್ದರಿಂದ ಇವತ್ತಿನಿಂದಲೇ, ಈ ಕ್ಷಣದಿಂದಲೇ ಓದಲು ಆರಂಭಿಸಿ, ಐಎಎಸ್-ಕೆಎಎಸ್ ಎಂಬುದು ಸಾಮಾನ್ಯ ಪರೀಕ್ಷೆಯಲ್ಲ. ಕಠಿಣ ಪ್ರಯತ್ನವಿದ್ದರೆ ಮಾತ್ರವೇ ಉನ್ನತ ಅಧಿಕಾರಿಗಳು, ಉದ್ಯಮಿಗಳಾಗಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಇವತ್ತು ಶೇ.50 ರಷ್ಟು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಗೆ ಹಾಗೂ ಶೇ.70 ರಷ್ಟು ವಿದ್ಯಾರ್ಥಿಗಳು ಪಿಯುಸಿ ಮುಗಿಯುತ್ತಿದ್ದಂತೆ ಓದುವುದನ್ನು ನಿಲ್ಲಿಸುತ್ತಿದ್ದಾರೆ. ಇದೇ ರೀತಿಯಾದರೆ ವೈಯಕ್ತಿಕ ಅಭಿವೃದ್ಧಿಯೂ ಇಲ್ಲ. ದೇಶದ ಅಭಿವೃದ್ಧಿಯೂ ಇಲ್ಲ. ಆದ್ದರಿಂದ ಉನ್ನತ ವಿದ್ಯಾಭ್ಯಾಸ ಮಾಡುವತ್ತ ಗಮನಹರಿಸಿ ಎಂದು ಸಲಹೆ ನೀಡಿದರು.

ನಂತರ ಸಂಪನ್ಮೂಲ ವ್ಯಕ್ತಿ ಎಂ.ಜಿ. ಶಾ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಕುರಿತು ತಿಳಿಸಿಕೊಟ್ಟರು. ಮೈಸೂರು ವಿವಿ ವೃತ್ತಿ ಕೇಂದ್ರದ ಸಲಹೆಗಾರ ಡಿ.ರವಿ ಕುಮಾರ್, ಬಿಎನ್.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್ ವಿಭಾಗದ ಮುಖ್ಯಸ್ಥ ಪ್ರೊ.ಆರ್. ಮಹೇಶ್, ಉಪನ್ಯಾಸಕಿ ನಮಿತಾ ಮತ್ತಿತರರಿದ್ದರು.

# ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿಯಿಂದ ಮೈಸೂರಲ್ಲಿ ಪ್ರತಿಭಟನೆ

## ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿ; ಇಲ್ಲ ಕುರ್ಚಿ ಖಾಲಿ ಮಾಡುವಂತೆ ಆಗ್ರಹ

ಮೈಸೂರು, ಡಿ.11(ಎಂಕೆ)- ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿ ಮಾಡಿ... ಇಲ್ಲವೇ ಕೂಡಲೇ ಕುರ್ಚಿ ಖಾಲಿ ಮಾಡಿ ಘೋಷಣೆಯೊಂದಿಗೆ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಮೈಸೂರಲ್ಲಿ ಗುರುವಾರ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ನಗರದ ಟೌನ್‌ಹಾಲ್ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ, ಜಮಾವಣೆಗೊಂಡ ವಿವಿಧ ಪರಿಶಿಷ್ಟ ಜಾತಿ ಸಂಘಟನೆಗಳ ಮುಖಂಡರು, ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಒಳ ಮೀಸಲಾತಿ ವಿಷಯದಲ್ಲಿ ಇನ್ನೂ ಮೀನಾಮೇಷ ಎಣಿಸುತ್ತಿದೆ. ಒಳ ಮೀಸಲಾತಿ ಹಂಚಿಕೆ ಕುರಿತು ಘೋಷಣೆಯಾಗಿದೆಯೇ ಹೊರತು ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಈ ಕೂಡಲೇ ಪೂರ್ಣ ಪ್ರಮಾಣದಲ್ಲಿ ಒಳಮೀಸಲಾತಿ ಜಾರಿ ಮಾಡುವಂತೆ ಆಗ್ರಹಿಸಿದರು.

ಉನ್ನತ ಶಿಕ್ಷಣ ಸೇರಿದಂತೆ ಎಲ್ಲಾ ಶೈಕ್ಷಣಿಕ ರಂಗಗಳಲ್ಲಿಯೂ ಒಳಮೀಸಲಾತಿ ಅನ್ವಯಿಸಬೇಕು. ಪರಿಶಿಷ್ಟ ಜಾತಿಗಳ ಪ್ರವರ್ಗವಾರು ಜಾತಿ ಪ್ರಮಾಣ ಪತ್ರ ನೀಡಬೇಕು. ಅನುದಾನಿತ, ಸರ್ಕಾರಿ, ಅರೆ ಸರ್ಕಾರಿ ಶಾಲಾ ದಾಖಲಾತಿ ಮತ್ತು ಸರ್ಕಾರಿ ಹುದ್ದೆ ಒಳಮೀಸಲಾತಿ ಅನ್ವಯಕ್ಕೆ ಆದೇಶಿಸಬೇಕು. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಬೇಕು. ಸುಳ್ಳು ಜಾತಿ ಪ್ರಮಾಣ ಪತ್ರಗಳ ಪರಿಶೀಲನೆಗೆ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿ ನೇಮಕ ಮಾಡಬೇಕು. 101 ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಜಾತಿಗಳನ್ನು ತೆಗೆಯಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಮತ್ತು ಜಾತಿ ಪ್ರಮಾಣ ಪತ್ರ ನೀಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.



ಪೂರ್ಣ ಪ್ರಮಾಣದ ಪರಿಶಿಷ್ಟ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಮೈಸೂರಿನ ಟೌನ್ ಹಾಲ್ ಎದುರು ಗುರುವಾರ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ಹಾಗೆಯೇ ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿ ಪ್ರಕ್ರಿಯೆಯಲ್ಲಿ ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ, ಸಮಾಜ ಕಲ್ಯಾಣ ಇಲಾಖೆಯನ್ನು ನಿಷ್ಕ್ರೀಯಗೊಳಿಸುತ್ತಿರುವ ಇಲಾಖೆ ಆಯುಕ್ತ ರಾಕೇಶ್‌ಕುಮಾರ್, ಸಲಹೆಗಾರ ವೆಂಕಟಯ್ಯ ಅವರನ್ನು ಕೂಡಲೇ ವರ್ಗಾಯಿಸಬೇಕು. ರಾಜ್ಯ ಸರ್ಕಾರದ ವ್ಯಾಪ್ತಿಯ ಗುತ್ತಿಗೆ ಕಾಮಗಾರಿ, ಗುತ್ತಿಗೆ ಕಾರ್ಮಿಕರ ನೇಮಕಾತಿ, ತಾತ್ಕಾಲಿಕ ನೇಮಕಾತಿ ಸೇರಿದಂತೆ ಅತಿಥಿ ಉಪನ್ಯಾಸಕರು ಮತ್ತು ಶಿಕ್ಷಕರ ನೇಮಕಾತಿಯಲ್ಲೂ ಒಳಮೀಸಲಾತಿ ಜಾರಿಯಾಗಬೇಕು ಹಾಗೂ ಪರಿಶಿಷ್ಟ ಜಾತಿ ಅಲೆಮಾರಿಗಳಿಗೆ ಶೇ.1 ರಷ್ಟು ಒಳ ಮೀಸಲಾತಿ ಕಲ್ಪಿಸಬೇಕು ಎಂದು ಹಕ್ಕೊತ್ತಾಯಿಸಿದರು.

ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಪ್ರದಾನ ಸಂಚಾಲಕ ಮಾರಪ್ಪ, ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಶಿವರಾಯ ಹಕ್ಕರಕಿ, ಕರ್ನಾಟಕ ಬಹುಜನ ಚಳುವಳಿ ರಾಜ್ಯಾಧ್ಯಕ್ಷ ಕನಕೇನಹಳ್ಳಿ ಕೃಷ್ಣಪ್ಪ, ದಲಿತ ಬಹುಜನ ಚಳುವಳಿ ಅಧ್ಯಕ್ಷ ಎಂ.ವೆಂಕಟೇಶ್, ಮುಖಂಡರಾದ ರಾಜಣ್ಣ, ಸ್ವಾಮಿ ನಾರಾಯಣ, ಆನಂದ, ಶಿವಾನಂದ ಬಿಸುನಾಳ, ಸಿದ್ದ ಮಾದರ, ಬಾನು ಪ್ರಸಾದ್, ಸಿದ್ದರಾಜು ಮೂಗೂರು ಮತ್ತಿತರರಿದ್ದರು.

## ದೇವನಹಳ್ಳಿ ಬಳಿ ಕಾರು–ಕೆಎಸ್ಆರ್‌ಟಿಸಿ ಬಸ್ ಡಿಕ್ಕಿ; ಮೂವರು ಸ್ಥಳದಲ್ಲೇ ಸಾವು

ದೇವನಹಳ್ಳಿ, ಡಿ.11– ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಹೊರವಲಯದ ಲಾಲಗೊಂಡನಹಳ್ಳಿ ಗೇಟ್ ಬಳಿ ಕಳೆದ ತಡರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ದೇವನಹಳ್ಳಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ದುರ್ಘಟನೆ ನಡೆದಿದೆ. ಚಿಕ್ಕಬಳ್ಳಾಪುರ ಕಡೆಯಿಂದ ದೇವನಹಳ್ಳಿ ಕಡೆಗೆ ಬರುತ್ತಿದ್ದ ಕಾರು ಅತಿವೇಗದಲ್ಲಿ ಸಂಚರಿಸುತ್ತಿದ್ದು, ಚಾಲಕನ ನಿಯಂತ್ರಣ ತಪ್ಪಿದ ಕಾರು ಡಿವೈಡರ್ ಹಾರಿ ಎದುರುಗಡೆಯಿಂದ ಬರುತ್ತಿದ್ದ ಕೆಎಸ್ಆರ್‌ಟಿಸಿ ಬಸ್‌ಗೆ ಡಿಕ್ಕಿಯಾಗಿದೆ.

ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೆಎಸ್ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಮೃತಪಟ್ಟವರನ್ನು ಮೋಹನ್ ಕುಮಾರ್ (33), ಸುಮನ್ (28), ಸಾಗರ್ (23) ಎಂದು ಗುರುತಿಸಲಾಗಿದೆ. ಇವರೆಲ್ಲ ದೇವನಹಳ್ಳಿ ತಾಲೂಕಿನ ಸಾದಹಳ್ಳಿ ನಿವಾಸಿಗಳು.

ಘಟನಾ ಸ್ಥಳಕ್ಕೆ ದೇವನಹಳ್ಳಿ ಸಂಚಾರಿ ಪೊಲೀಸ್ ಠಾಣೆಯ ಸಿಬ್ಬಂದಿ ಧಾವಿಸಿದ್ದು ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಅತಿವೇಗದ ಚಾಲನೆ ಈ ದುರಂತಕ್ಕೆ ಕಾರಣವೆಂದು ಹೇಳಲಾಗುತ್ತಿದೆ.



| Site Measurements | Site Facing | Site Location |
|---|---|---|
| 1) 40X60 | NORTH | Manasi Nagar, Near Bhagat Singh Circle, Ring Road, Mysuru |
| 2) 40X60 | EAST | PAMA ENCLAVE in Bhugathagally next to MUDA Vasantha Nagar, Bannur Road, Mysuru |



### ಮೈಸೂರು ವಿಶ್ವವಿದ್ಯಾನಿಲಯ

Estd.1916

ಕಾರ್ಯಪಾಲಕ ಅಭಿಯಂತರರ ಕಛೇರಿ
ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗ
ಮಾನಸಗಂಗೋತ್ರಿ, ಮೈಸೂರು – 06
Email:ceuom@uni-mysore.ac.in www.aunt-mysore.ac.in
ದೂರವಾಣಿ ಸಂಖ್ಯೆ: 2419383 / 241934 / 2419245

ಯು.ಇ.ಡಿ:ಎಸಿ3:906:2025–26 ದಿನಾಂಕ: 03.12.2025

**ಬಹಿರಂಗ ಹರಾಜು ಟೆಂಡರ್ ಪ್ರಕಟಣೆ**

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ರೌಂಡ್ ಕ್ಯಾಂಟೀನ್ ಅನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಡೆಸಲು ಬಹಿರಂಗ ಹರಾಜನ್ನು ದಿ: 20.12.2025ರಂದು ಸಂಜೆ 04.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ಇಚ್ಛೆಯುಳ್ಳವರು ಸದರಿ ದಿನದಂದು 3.00 ಗಂಟೆಯೊಳಗೆ ರೂ.1,000=00ಗಳ ಹಿಂತಿರುಗಿಸಲಾಗದ ನಗದನ್ನು ಕಛೇರಿಯಲ್ಲಿ ಪಾವತಿಸಿ ನೊಂದಾಯಿಸಿಕೊಂಡು ರೂ.45,000.00ಗಳ ಠೇವಣಿ ಮೊತ್ತವನ್ನು ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು. ಬಹಿರಂಗ ಹರಾಜು ಪ್ರಕ್ರಿಯೆ ಪ್ರಾರಂಭಿಸುವ ಮೊದಲು ಉಪಹಾರ ಮಂದಿರದ ಕನಿಷ್ಠ ಬಾಡಿಗೆ ಮೊತ್ತವನ್ನು ತಿಳಿಸಲಾಗುವುದು. ಈ ಸಂಬಂಧದ ಷರತ್ತು ಮತ್ತು ನಿಬಂಧನೆಗಳ ವಿವರವನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಬಹಿರಂಗ ಹರಾಜಿನನ ಟೆಂಡರ್‌ನ್ನು ಒಪ್ಪಿಕೊಳ್ಳುವ ಮತ್ತು ತಿರಸ್ಕರಿಸುವ ಅಧಿಕಾರವು ವಿಶ್ವವಿದ್ಯಾನಿಲಯಕ್ಕೆ ಇರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಸ್ವ/ಪ್ರ)

DIPR/DDMYS/1339/KSMCA/762/2025-26



ಕರ್ನಾಟಕ ಸರಕಾರ

### ತುಂನೇರಳೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ
e-mail: thumneralegp2@gmail.com

ಕ್ರಮಸಂಖ್ಯೆ : ತುಗ್ರಾಪಂ/ /2025–26 ದಿನಾಂಕ:05.12.2025

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಂಜನಗೂಡು ತಾಲ್ಲೂಕು ತುಂನೇರಳೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತುಂನೇರಳೆ ಗ್ರಾಮದ ನಾಯಕ ಜನಾಂಗದ ಬಡಾವಣೆಯಲ್ಲಿ ನಿವೇಶನ ಸಂಖ್ಯೆ 33 ಕ್ಕೆ ಸಂಬಂಧಿಸಿದಂತೆ ಚೆಕ್ಕುಬಂಧಿ. ಪೂರ್ವ – ರಸ್ತೆ, ಪಶ್ಚಿಮ – ಖಾಸಗಿ ಸ್ವತ್ತು, ಉತ್ತರ – ರಸ್ತೆ, ದಕ್ಷಿಣ – ಹುಚ್ಚನಾಯಕರ ಸ್ವತ್ತು. ಸದರಿ ಮೇಲಿನ ಸ್ವತ್ತಿಗೆ ಸಂಬಂಧಿಸಿದಂತೆ 30 ದಿನಗಳ ಒಳಗಾಗಿ ಮಾಲೀಕತ್ವದ ದಾಖಲೆ ಪತ್ರಗಳನ್ನು ಗ್ರಾಮ ಪಂಚಾಯಿತಿಗೆ ನೀಡಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ತುಂನೇರಳೆ ಗ್ರಾಮ ಪಂಚಾಯಿತಿ
ನಂಜನಗೂಡು ತಾಲ್ಲೂಕು

### ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಟಿ.ನರಸೀಪುರ–ನಂಜನಗೂಡು ರಸ್ತೆ, ಕೋರ್ಟ್ ಎದುರು ಟಿ.ನರಸೀಪುರ–571124
ಇ–ಮೇಲ್: apmctnarasipura@rediffmail.com ಪ್ರಧಾನ ಕಛೇರಿ:08227–261269 ಬನ್ನೂರು:275606

ಸಂಖ್ಯೆ:ಕೃಉಮಾಸ(ಟಿನ)/217/2025–26 ದಿನಾಂಕ: 10.12.2025

**ಪ್ರಕಟಣೆ**

ಟಿ.ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಹಾಗೂ ಬನ್ನೂರು ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ನಿರ್ಮಿಸಿರುವ ಮಳಿಗೆಗಳು/ಗೋದಾಮುಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮ 13ರಡಿ ಪೇಟೆ ಕಾರ್ಯಕರ್ತರಿಗೆ ಮತ್ತು ನಿಯಮ 14ರಡಿ ಸಾರ್ವಜನಿಕರಿಗೆ ಲೀವ್ & ಲೈಸನ್ಸ್ ಶುಲ್ಕದ ಆಧಾರದ ಮೇಲೆ 55 ತಿಂಗಳ ಅವಧಿಗೆ (ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ ಹಾಗೂ 55 ತಿಂಗಳ ಗರಿಷ್ಠ ಅವಧಿಗೆ) ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ಆಸಕ್ತಿಯುಳ್ಳ ಎಲ್ಲಾ ನೋಂದಾಯಿತ ಪೇಟೆ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಈ ಕೆಳಕಂಡ ಷರತ್ತು ಹಾಗೂ ನಿಬಂಧನೆಗೊಳಪಟ್ಟು ಟೆಂಡರ್‌ನಲ್ಲಿ ಭಾಗವಹಿಸಬಹುದು.

I ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ ಮಳಿಗೆಗಳು ಮತ್ತು ವಿವಿಧ ಸಾಮರ್ಥ್ಯದ ಗೋದಾಮುಗಳು.
ನಿಯಮ–13ರಡಿ ಪೇಟೆ ಕಾರ್ಯಕರ್ತರಿಗೆ ಹಂಚಿಕೆ

| ಕ್ರ. ಸಂ. | ಕಟ್ಟಡದ ಹೆಸರು | ಖಾಲಿ ಇರುವ ಗೋದಾಮುಗಳ ಒಟ್ಟು ಸಂಖ್ಯೆ (ಕ್ರಮವಾಗಿ) | ಮೀಸಲಾತಿ ವರ್ಗ | ನೋಂದಣಿ ಶುಲ್ಕ | ಅರ್ಜಿ ಶುಲ್ಕ | ನಿಗಧಿಪಡಿಸಿರುವ ಮಾಸಿಕ ಲೀವ್ & ಲೈಸನ್ಸ್ ಶುಲ್ಕ (ಜಿ.ಎಸ್.ಟಿ ಪ್ರತ್ಯೇಕ) | ಮುಂಗಡ ಠೇವಣಿ ಬಾಬ್ತು |
|---|---|---|---|---|---|---|---|
| 1 | 20 ಸಂಖ್ಯೆ ತರಕಾರಿ ಸಣ್ಣ ಅಂಗಡಿ ಮಳಿಗೆಗಳ ಪೈಕಿ (14,15 ಮತ್ತು 19) ಮಳಿಗೆಗಳು | 03 | ಮಳಿಗೆ ಸಂಖ್ಯೆ: 19 ಪರಿಶಿಷ್ಟ ಜಾತಿ | 1,000 | 200 | 4,038 | 8,076 |
| 2 | 2000 ಮೆ.ಟ. ಸಾಮರ್ಥ್ಯದ ಗೋದಾಮು | 01 | ಸಾಮಾನ್ಯ | 1,000 | 200 | 1,92,310 | 3,84,620 |
| 3 | 500 ಮೆ.ಟ. ಸಾಮರ್ಥ್ಯದ ಗೋದಾಮು | 01 | ಸಾಮಾನ್ಯ | 1,000 | 200 | 74,270 | 1,48,540 |
| 4 | ಹರಾಜುಕಟ್ಟೆ ಪರಿವರ್ತಿತ ಗೋದಾಮು (300 ಮೆ.ಟನ್) | 01 | ಸಾಮಾನ್ಯ | 1,000 | 200 | 20,400 | 40,800 |
| 5 | 250 ಮೆ.ಟ. ಸಾಮರ್ಥ್ಯದ ಗೋದಾಮು | 03 | ಸಾಮಾನ್ಯ | 1,000 | 200 | 31,401 | 62,802 |
| 6 | 02 ಸಂಖ್ಯೆ ಎನ್.ಜಿ.ಆರ್.ಜಿ.(150 ಮೆ.ಟನ್) | 02 | ಸಾಮಾನ್ಯ | 1,000 | 200 | 24,966 | 49,932 |
| 7 | 100 ಮೆ.ಟ. ಸಾಮರ್ಥ್ಯದ ಗೋದಾಮು | 01 | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ | 1,000 | 200 | 15,441 | 30,882 |
| II | ಬನ್ನೂರು ಉಪ ಮಾರುಕಟ್ಟೆ ಪ್ರಾಂಗಣದೊಳಗೆ ನಿರ್ಮಿಸಿರುವ ಗೋದಾಮುಗಳು ನಿಯಮ–13ರಡಿ ಪೇಟೆ ಕಾರ್ಯಕರ್ತರಿಗೆ ಹಂಚಿಕೆ | | | | | | |
| 1 | 500 ಮೆ.ಟ. ಸಾಮರ್ಥ್ಯದ ಗೋದಾಮು | 01 | ಸಾಮಾನ್ಯ | 1,000 | 200 | 52,477 | 1,04,954 |
| 2 | ಎನ್.ಜಿ.ಆರ್.ಜಿ. ಗೋದಾಮುಗಳು | 02 | ಸಾಮಾನ್ಯ | 1,000 | 200 | 19,814 | 39,628 |
| 3 | ಹರಾಜುಕಟ್ಟೆ ಪರಿವರ್ತಿತ ಗೋದಾಮು ಸಂಖ್ಯೆ 1 & 2 | 02 | ಸಾಮಾನ್ಯ | 1,000 | 200 | 16,369 | 32,738 |
| 4 | 30 ಎಂ.ಟಿ.ಸಾಮರ್ಥ್ಯದ ಅಂಗಡಿ–ವ–ಗೋದಾಮುಗಳು | 03 | ಸಾಮಾನ್ಯ | 1,000 | 200 | 8,217 | 16,434 |

III ಸಮಿತಿಯ ಮುಖ್ಯ ಮಾರುಕಟ್ಟೆ ಮತ್ತು ಉಪ ಮಾರುಕಟ್ಟೆ ಪ್ರಾಂಗಣದ ಮುಂಭಾಗ ನಿರ್ಮಿಸಿರುವ ಮಳಿಗೆಗಳ ವಿವರ
ನಿಯಮ–14 ರಡಿ ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ

| ಕ್ರ. ಸಂ. | ಕಟ್ಟಡದ ಹೆಸರು | ಖಾಲಿ ಇರುವ ಮಳಿಗೆಗಳ ವಿವರ | ಮೀಸಲಾತಿ ವರ್ಗ | ಅರ್ಜಿ ಶುಲ್ಕ | ನಿಗಧಿಪಡಿಸಿರುವ ಮಾಸಿಕ ಲೀವ್ & ಲೈಸನ್ಸ್ ಶುಲ್ಕ (ಜಿ.ಎಸ್.ಟಿ ಪ್ರತ್ಯೇಕ) | ಮುಂಗಡ ಠೇವಣಿ ಬಾಬ್ತು |
|---|---|---|---|---|---|---|
| 1 | ಟಿ.ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಂಭಾಗದಲ್ಲಿ ಖಾಲಿ ಇರುವ 01 ಸಂಖ್ಯೆ ಸಣ್ಣ ಅಂಗಡಿ ಮಳಿಗೆ | ಮಳಿಗೆ ಸಂಖ್ಯೆ: 09 | ಸಾಮಾನ್ಯ | 200 | 3,050 | 6,100 |
| 2 | ಟಿ.ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬನ್ನೂರು ಉಪ ಮಾರುಕಟ್ಟೆ ಪ್ರಾಂಗಣದ ಮುಂಭಾಗದಲ್ಲಿರುವ 01 ಸಂಖ್ಯೆ ಸಣ್ಣ ಅಂಗಡಿ ಮಳಿಗೆ | ಮಳಿಗೆ ಸಂಖ್ಯೆ: 07 | ಪರಿಶಿಷ್ಟ ಜಾತಿ | 200 | 1,928 | 5,000 |
| 3 | ಟಿ.ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 60 ಮೆ.ಟನ್ ಸಾಮರ್ಥ್ಯದ ವೇ–ಬ್ರಿಡ್ಜ್ | 01 | ಸಾಮಾನ್ಯ | 200 | 25,455 | 50,910 |

**ಷರತ್ತು ಮತ್ತು ನಿಬಂಧನೆಗಳು: 1**) ವರ್ತಕರು/ಪೇಟೆಕಾರ್ಯಕರ್ತರುಗಳು ನೋಂದಣಿ ಶುಲ್ಕ ರೂ.1,000 ಗಳನ್ನು ಪಾವತಿಸಿ ನಮೂನೆ–I ರಲ್ಲಿ ಅರ್ಜಿ ಸಲ್ಲಿಸಿ ದಿ: 26.12.2025 ರ ಒಳಗಾಗಿ ನೋಂದಣಿ ಮಾಡಿಕೊಂಡು ನಿಗಧಿತ ಅರ್ಜಿ ಪಡೆಯುವುದು (ಲೈಸನ್ಸ್ ಪ್ರತಿ, ಭಾವಚಿತ್ರ 03 ಮತ್ತು ಆಧಾರ್ ಪ್ರತಿ). **2**) ನೋಂದಣಿ ಮಾಡಿದ ಅರ್ಜಿದಾರರು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಟಿ.ನರಸೀಪುರ ಇವರ ಹೆಸರಿಗೆ ಕೋಷ್ಟಕದಲ್ಲಿ ನಮೂದಿಸಿದ ಮುಂಗಡ ಮೊತ್ತಕ್ಕೆ ಡಿ.ಡಿ. ಖರೀದಿಸಿ ನಮೂನೆ III (ಹಂಚಿಕೆಗಾಗಿ ಅರ್ಜಿ) ರಲ್ಲಿ ಮುಚ್ಚಿದ ಲಕೋಟೆಯಲ್ಲಿ ದಿ: 29.12.2025ರ ಸಂಜೆ 5.00 ಗಂಟೆಯ ಒಳಗೆ ಅರ್ಜಿ ಸಲ್ಲಿಸಬೇಕು. 3) ಕೋಷ್ಟಕ 03 ರಲ್ಲಿನ ಅಂಗಡಿ ಮಳಿಗೆಗಳಿಗೆ ನಿಯಮ–14ರಡಿ ಅರ್ಜಿ ಸಲ್ಲಿಸುವ ಸಾರ್ವಜನಿಕರು ದಿ: 26.12.2025ರ ಸಂಜೆ 5.00 ಗಂಟೆ ಒಳಗೆ ಅರ್ಜಿ ಪಡೆಯಬಹುದು.(ಭಾವಚಿತ್ರ ಮತ್ತು ಆಧಾರ್ ಪ್ರತಿ) ಅರ್ಜಿದಾರರು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಟಿ.ನರಸೀಪುರ ಇವರ ಹೆಸರಿಗೆ ಕೋಷ್ಟಕದಲ್ಲಿ ನಮೂದಿಸಿದ ಮುಂಗಡ ಮೊತ್ತಕ್ಕೆ ಡಿ.ಡಿ. ಖರೀದಿಸಿ ನಮೂನೆ VI (ಅರ್ಜಿ)ರೊಂದಿಗೆ ಟೆಂಡರ್ ಸಲ್ಲಿಸಲು ಕಡೆಯ ದಿ: 29.12.2025ರ ಅಪರಾಹ್ನ 1.00 ಗಂಟೆ. **4**) ಕೋಷ್ಟಕ 03ರ ಅಂಗಡಿ ಮಳಿಗಗಳಿಗೆ ಟೆಂಡರ್–ಕಂ–ಬಹಿರಂಗ ಹರಾಜು ದಿ: 29.12.2025ರ ಅಪರಾಹ್ನ 3.00 ಗಂಟೆಗೆ ನಡೆಸಲಾಗುವುದು. ಹರಾಜು ನಂತರ ಟೆಂಡರ್ ತೆರೆಯಲಾಗುವುದು. 5) ಕ್ರಮ ಸಂಖ್ಯೆ: I (1)ರಲ್ಲಿ ತರಕಾರಿ ಸಣ್ಣ ಅಂಗಡಿ ಮಳಿಗೆ ಸಂಖ್ಯೆ:19ನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಲಾಗಿದೆ. 6) ಕ್ರಮ ಸಂಖ್ಯೆ I(7) ರಲ್ಲಿನ ಗೋದಾಮನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಲಾಗಿದೆ. **7**) ಕ್ರಮ ಸಂಖ್ಯೆ III (2) ರಲ್ಲಿ ಮಳಿಗೆ ಸಂಖ್ಯೆ:07 ನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಲಾಗಿದೆ. **8**) ಮೇಲ್ಕಂಡ ಪ್ರಕಟಣೆಯಲ್ಲಿ ಏನಾದರು ತಿದ್ದುಪಡಿ ಇದ್ದಲ್ಲಿ ಅಥವಾ ಮುಂದೂಡಿದ್ದಲ್ಲಿ ಸಮಿತಿಯ ನೋಟಿಸ್ ಬೋರ್ಡ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. **9**) ಮೇಲ್ಕಂಡ ಯಾವುದೇ ಟೆಂಡರ್‌ಗಳ ಕುರಿತು ಅಂತಿಮ ತೀರ್ಮಾನವನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ. **10**) ಹೆಚ್ಚಿನ ವಿವರಗಳು, ಷರತ್ತುಗಳು ಕಛೇರಿ ವೇಳೆಯಲ್ಲಿ ಕೆಲಸದ ದಿನಗಳಂದು ಪಡೆಯಬಹುದು (ದೂರವಾಣಿ ಸಂಖ್ಯೆ: 08227–260993).

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಟಿ.ನರಸೀಪುರ ಸಹಿ/– ಆಡಳಿತಾಧಿಕಾರಿಗಳು, ಕಾರ್ಯದರ್ಶಿ, ಕೃ.ಉ.ಮಾ.ಸ., ಟಿ.ನರಸೀಪುರ

## ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ



ಇವರು ದಿನಾಂಕ 03-12-2025 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 13-12-2025 ಶನಿವಾರ ಬೆಳಗ್ಗೆ 10-00 ಗಂಟೆಗೆ ಬಿಳಿಕೆರೆ ಹೋಬಳಿ, ಗಾಗೇನಹಳ್ಳಿ ಗ್ರಾಮದಲ್ಲಿರುವ ನಮ್ಮ ತೋಟದ ಮನೆಯಲ್ಲಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಮೃತರ ಪತ್ನಿ
ಶ್ರೀಮತಿ ನಿಂಗಮ್ಮ
ಕುಟುಂಬವರ್ಗದವರು
ಹಾಗೂ ಗಾಗೇನಹಳ್ಳಿ
ಗ್ರಾಮಸ್ಥರು

**ಶ್ರೀ ನಿಂಗಪ್ಪನವರು**
(ಸಿವಿಲ್ ಕಂಟ್ರ್ಯಾಕ್ಟರ್)

ಭೋಜನ :
ಮಧ್ಯಾಹ್ನ 12-00 ಗಂಟೆಗೆ